# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru Tingalole Vol XXXIV - 4 April 2016

PAGES 32



# EVER YOUNG AT 91

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

## ಕಾರಂತರು ಬದುಕನ್ನೇ ಪ್ರಯೋಗ ಶಾಲೆಯನ್ನಾಗಿಸಿದವರು– ಡಾ.ಬಿ.ಎ.ವಿವೇಕ ರೈ

ಕಾರಂತರ ಮಾತು ಗಳು ಯಾವತ್ತೂ ತೋರಿಕೆ ಯದ್ದಾ ಗಿರಲಿಲ್ಲ. ಅವರಾಡುವ ಪ್ರತಿ ಮಾತುಗಳೂ ಮನದಾಳ ದವುಗಳು. ಕಾರಂತರು ಬದುಕನ್ನೇ ಪ್ರಯೋಗ ಶಾಲೆಯನ್ನಾಗಿಸಿದವರು. ಅವರ ಸೂಕ್ಷ್ಮ ಗ್ರಹಿಕೆ ತುಂಬಾ ಚೆನ್ನಾಗಿತ್ತು.




ಸಣ್ಣ ಸಣ್ಣ ವಿಷಯಗಳಲ್ಲಿ ಅವರಿಗೆ ಆಸಕ್ತಿ ಇತ್ತು. ಕಾರಂತರ ಜ್ಞಾನ, ಅನುಭವದಿಂದ, ಓದಿನಿಂದ ಒಡನಾಟದಿಂದ ಬಂದದ್ದು. ಮಕ್ಕಳ ಬೆಳವಣಿಗೆಯ ಕುರಿತು ಅವರಿಗೆ ವಿಶೇಷ ಕಾಳಜಿಯಿತ್ತು. ಇವರು ರಚಿಸಿದ 'ಬಾಲ ಪ್ರಪಂಚ, ಮತ್ತು ವಿಜ್ಞಾನ ಪ್ರಪಂಚ' ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕೆಲಸ. ಕಾರಂತರಲ್ಲಿ ಮಗುವಿನಂತಹ ಮುಗ್ಧ ಹೃದಯವಿತ್ತು. ಅಧ್ಯಯನದಲ್ಲಿರುವ ಅವರ ನಿಷ್ಠೆ, ಅವರ ಜೀವನೋತ್ಸಾಹ ಎಲ್ಲರಿಗೂ ಮಾದರಿಯಾದುದು. ಕಾರಂತರ ಬರಹಗಳಲ್ಲಿ ದಾರ್ಶನಿಕ ವ್ಯಂಗ್ಯವಿತ್ತು. ಅದು ಇಡೀ ಜಗತ್ತನ್ನು ಯಾರು ಬಹಳ ಪ್ರೀತಿಯಿಂದ ನೋಡುತ್ತಾರೋ ಅಂತಹವರಿಗೆ ಸಾಧ್ಯವಾಗುತ್ತದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು, ಖ್ಯಾತ ಸಾಹಿತಿ ಡಾ.ಬಿ.ಎ.ವಿವೇಕ ರೈ ಅವರು ಅಭಿಪ್ರಾಯಪಟ್ಟರು.

ಅವರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಜೊತೆಗೂಡಿ ಮೈಸೂರು ಅಸೋಸಿಯೇಷನ್ ಆಚರಿಸುವ ಬಂಗಾರ ಹಬ್ಬ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು. ಅವರು ಮುಂದುವರಿಸುತ್ತಾ ಸಾಹಿತ್ಯ ಎಂದರೆ ಅದಕ್ಕೆ ಪೂರಕವಾದ ವಿಷಯಗಳನ್ನು ನೀಡುವುದು, ಜ್ಞಾನ ಎನ್ನುವಾಗ ವಿಜ್ಞಾನ, ಸಾಹಿತ್ಯ, ಕಲೆಗಳು ಒಂದಕ್ಕೊಂದು ಸಮನ್ವಯವಾಗಬೇಕು. ಕಲಾವಿದತನ ಎಂದರೆ ಅದು ಒಂದು ಮಿದುಳಿನಿಂದ ಗ್ರಹಿಸುವುದು, ಇನ್ನೊಂದು ಅದನ್ನು ಅನುಭವಿಸುವುದು. ತಮ್ಮ ಅನುಭವಗಳ ಮುಂದೆ ಯಾವ ಸಿದ್ಧಾಂತವೂ ಲೆಕ್ಕಕ್ಕೇ ಇಲ್ಲದ್ದು ಎಂಬುದನ್ನು ಅರಿತು ಬಾಳಿದವರು ಕಾರಂತರು. ಅವರ ಗೀತ ನಾಟಕಗಳಲ್ಲಿ ಜಾನಪದ ಶೈಲಿಯನ್ನು ಕಾಣಬಹುದು. ನಮ್ಮ ಅರಿವಿಗೆ ಎಲ್ಲೂ ಬೇರುಗಳಿರಬಾರದು ಎಂಬ ಪಾಠವನ್ನು ಕಲಿಸಿದವರು ಕಾರಂತರು. ಅವರ ಕಾದಂಬರಿಗಳಲ್ಲಿ ಕಾಲ್ಪನಿಕಕ್ಕಿಂತಲೂ ನೇರವಾಗಿ ಬದುಕಿನ ಚಿತ್ರಗಳನ್ನು ಕಾಣಬಹುದು. ತಮ್ಮ ಕೃತಿಗಳ ಮುಖಾಂತರ ಯಕ್ಷಗಾನಕ್ಕೆ ಒಂದು ಶಾಸ್ತ್ರವಿದೆ ಎಂದು ಕಾರಂತರು ತೋರಿಸಿಕೊಟ್ಟರು ಎಂದು "ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತರು" ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದ ಡಾ.ಬಿ.ಎ.ವಿವೇಕ ರೈ ಅವರು ಕಾರಂತರ ಜೀವನ ಶೈಲಿಯಿಂದ ಹಿಡಿದು ಅವರ ಬರಹ, ನಡೆನುಡಿಗಳ ಬಗ್ಗೆ ಹೃದ್ಯವಾಗಿ ಸಭಿಕರ ಮುಂದೆ ತೆರೆದಿಟ್ಟರು.

## ಮುಂಬಯಿಯಲ್ಲಿ ಯಶವಂತ ಚಿತ್ತಾಲ ಸಂಸ್ಮರಣೆ ಕಾರ್ಯಕ್ರಮ

**ಮುಂಬಯಿ,- ಸಾಹಿತಿ ಯಶವಂತ ಚಿತ್ತಾಲರು ನಮ್ಮ ಕಾಲದ ಬದಲಾಗುತ್ತಿರುವ ಲೋಕವನ್ನು ಬರಹದಲ್ಲಿ ಹೇಳಿದವರು. ಪ್ರೀತಿಯ ಕ್ಷಣವನ್ನು ಕೊನೆಯವರೆಗೂ ನಂಬಿದವರು. ಅವರದು ಗಂಡು ಗರ್ವವಿಲ್ಲದ ಬರವಣಿಗೆಯಾಗಿದೆ. ಗಂಡು ಗರ್ವವನ್ನು ಮೀರಿ ಹೆಣ್ಣನ್ನು ನೋಡುವ ದೃಷ್ಟಿ ಚಿತ್ತಾಲರ ಕಾದಂಬರಿಗಳಲ್ಲಿ ಕಾಣುತ್ತೇವೆ ಎಂದು ಹೆಸರಾಂತ ವಿಮರ್ಶಕ ಬೆಂಗಳೂರಿನ ಡಾ. ಎಚ್.ಎಸ್. ರಾಘವೇಂದ್ರ ರಾವ್ ಹೇಳಿದರು.**



ಅವರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಜೊತೆಗೂಡಿ ಮೈಸೂರು ಅಸೋಸಿಯೇಷನ್ ಆಚರಿಸುವ ಬಂಗಾರ ಹಬ್ಬ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ **ಯಶವಂತ ಚಿತ್ತಾಲರ** ಸಾಹಿತ್ಯ ಸಾಧನೆಯ ಕುರಿತು ಮಾತನಾಡಿದರು.

**ಜಿ.ಎಸ್. ಶಿವರುದ್ರಪ್ಪ, ಡಾ. ಅನಂತಮೂರ್ತಿ, ಯಶವಂತ ಚಿತ್ತಾಲ ಮುಂತಾದವರನ್ನು ಕಳಕೊಂಡ ಕನ್ನಡ ಸಾಹಿತ್ಯ ಬಡವಾಗುತ್ತಿದೆ. ವಿಚಾರದ ಜೊತೆ ಭಾವುಕನಾಗಿ ಮಾತನಾಡಬೇಕಾದ ಸ್ಥಿತಿ ಇದೆ. ಆದರೆ ಭಾವನೆ ಹಿಂದೆ, ವಿಚಾರ ಮುಂದೆ ಇರಬೇಕು ಎಂದ ಎಚ್.ಎಸ್.ಆರ್, ಚಿತ್ತಾಲರು ಹೃದಯವುಳ್ಳ ದಾರಿಯಲ್ಲಿ ನಡೆದವರು. ಓದುಗರನ್ನೂ ಅದೇ ಹಾದಿಯಲ್ಲಿ ನಡೆಸಿದವರು. ಓದುಗರ ಮನದಲ್ಲಿ ಚಿತ್ತಾಲರು ನಿರಂತರ ಇರುತ್ತಾರೆ. ಮನುಷ್ಯನ ಹೃದಯದ ಮೂಲೆಯನ್ನು ಹುಡುಕುವ ಚಿತ್ತಾಲರ ಈ ಮನಸ್ಸು, ಬರವಣಿಗೆಯ ಚಡಪಡಿಕೆ ಅಶಾಂತ ಸ್ಥಿತಿ, ಅವರದು ಪುಟ್ಟ ಮಗುವಿನ ಮನಸ್ಸು. ಅವರು ಬದುಕಿದ ಪರಿ, ಪ್ರತಿಕ್ರಿಯಿಸಿದ ಪರಿ ಕಂಡಾಗ ಅವರು ಅಶಾಂತ ಸಂತನಂತೆ ಕಂಡು ಬರುತ್ತಾರೆ. ಅವರ ಬರವಣಿಗೆ ಒಂದು ಧ್ಯಾನ-ತಪಸ್ಸು. ಚಿತ್ತಾಲರು ಓದಿದ 'ಶಾಸ್ತ್ರ'ಗಳು ಅವರ ಬರವಣಿಗೆಯನ್ನು ಕಂಟ್ರೋಲ್ ಮಾಡಿಲ್ಲ. ಚಿತ್ತಾಲರು ಓದನ್ನು ಮೀರಿ ಮತ್ತೊಂದು ಬಗೆಯ ಜಗತ್ತು ಕಂಡರು. ಇದು ಚಿತ್ತಾಲರ ಬರವಣಿಗೆಯ ವಿಶಿಷ್ಟತೆ ಎಂದರು. ಚಿತ್ತಾಲರು ತನ್ನೊಳಗೆ ಮಗುತನ ಇರಿಸಿಕೊಂಡಿದ್ದರು. ಹಾಗಾಗಿಯೇ ಬದುಕನ್ನು ಹೊಸತಾಗಿ ಅವರಿಗೆ ನೋಡಲು ಸಾಧ್ಯವಾಯಿತು. ಅವರು ಚಳುವಳಿಗಳ ಕಾಲದಲ್ಲಿ ಬದುಕಿದ್ದರೂ ಅವರ ಸತ್ವವನ್ನಷ್ಟೇ ಹೀರಿದರು ಮತ್ತು ಅದನ್ನು ಮೀರಿದರು ಎಂದರಲ್ಲದೆ ಇಂತಹ ಸಂಸ್ಮರಣೆ ಕಾರ್ಯಕ್ರಮ ಉದ್ಘಾಟನೆ ಯಾಗಿದ್ದರೂ ಸಮಾರೋಪ ಬೇಡ. ನಾವು ನಿರಂತರ ಚಿತ್ತಾಲರ ಕೃತಿಗಳನ್ನು ಓದುತ್ತಾ ಚರ್ಚಿಸುತ್ತಾ ಇರೋಣ ಎಂದು ಆಶಿಸಿದರು.**




**2016 ರ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿಯವರು.**

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

## ಸಂಪಾದಕೀಯ

# ನೇಸರು
## ತಿಂಗಳೋಲೆ

**ಸಂಪುಟ 34** **ಎಪ್ರಿಲ್ 2016** **ಸಂಚಿಕೆ 3**

ಮನುಷ್ಯ ಸಂಘ ಜೀವಿ ಎನ್ನುವುದು ಎಲ್ಲರೂ ತಿಳಿದಿರುವ ಸಂಗತಿ. ಇಂದಿನ ಸಮಾಜದಲ್ಲಿ ನಮ್ಮ ಸುತ್ತಲು ಹಲವು ಸಂಘ ಸಂಸ್ಥೆಗಳು ಬೆಳೆದು ನಿಂತಿರುವುದನ್ನು ಕಾಣಬಹುದು. ಇದನ್ನು ಗಮನಿಸಿದರೆ, ಪ್ರತಿ ಸಂಘ ತನ್ನದೇ ಆದ ಧ್ಯೇಯೋದ್ದೇಶಗಳನ್ನು ಹೊಂದಿರುತ್ತದೆ ಎನ್ನುವುದು ತಿಳಿದು ಬರುತ್ತದೆ. ಮೂಲಭೂತವಾಗಿ ಈ ಸಂಘಸಂಸ್ಥೆಗಳ ಅಗತ್ಯವಾದರೂ ಏನಿತ್ತು ಮನುಷ್ಯನಿಗೆ? ಎಂಬ ವಿಚಾರ ನಮ್ಮ ಮನಸ್ಸಿನಲ್ಲಿ ಉದ್ಭವಿಸುವುದು ಸಹಜ. ಸಂಘ ಸಂಸ್ಥೆಗಳು ಸಮಾಜದ ಕಣ್ಣುಗಳಿದ್ದಂತೆ, ಇದನ್ನು ಸ್ಥೂಲವಾಗಿ ಗಮನಿಸಿದಾಗ, ಹಲವಾರು ಕಾರಣಗಳು ನಮ್ಮ ಮನಃಪಟಲದಲ್ಲಿ ಸುಳಿದಾಡುತ್ತದೆ. ಒಂದು, ನಮ್ಮ ವ್ಯವಸ್ಥೆಯ ಲೋಪದೋಷಗಳನ್ನು ತಿದ್ದಲು ಏಕ ವ್ಯಕ್ತಿಯಾಗಿ ಹೋರಾಡಲು ಸಾಧ್ಯವಿಲ್ಲ. ಆಗ ಸಾಂಘಿಕ ಶಕ್ತಿಯ ಅವಶ್ಯಕತೆ ಇರುತ್ತದೆ. ಇನ್ನೊಂದು, ನಮ್ಮ ಆಸಕ್ತಿ, ಗುರಿ, ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದರೆ ಎಲ್ಲರೂ ಒಂದು ಸಂಘದ ಅಡಿಯಲ್ಲಿ ಸಾಮೂಹಿಕವಾಗಿ ಭಾಗಿಯಾಗಬೇಕಾದ ಪ್ರಮೇಯವಿದೆ. ಹೊಸ ಚಿಗುರು ಹಳೆ ಬೇರು ಸೇರಿದಾಗ ಈ ಸಂಘ ಸಂಸ್ಥೆಗಳಿಗೆ ಮತ್ತಷ್ಟು ಬಲ ಬರುತ್ತದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಗಾದೆಯನ್ನು ಮೂಲಮಂತ್ರವನ್ನಾಗಿಸಿಕೊಂಡು ಈ ಸಂಘ ಸಂಸ್ಥೆಗಳು ತಮ್ಮ ಕಾರ್ಯಕ್ರಮವನ್ನು ನಿರ್ವಹಿಸುತ್ತವೆ. ಆ ಮೂಲಕ ಸಮಾಜದ ಜನತೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತದೆ. ಇಂತಹ ಸಂಘ ಸಂಸ್ಥೆಗಳ ಚಟುವಟಿಕೆಗಳು ಬಹುಮುಖವಾಗಿರುತ್ತದೆ. ಸಮಾಜಸೇವೆ, ಸಾಹಿತ್ಯ, ಸಂಗೀತ, ಕಲೆ, ವಿಜ್ಞಾನಗಳಿಗೆ ಉತ್ತೇಜನ ನೀಡಲಾಗುತ್ತದೆ. ಸಂಘ ಸಂಸ್ಥೆಗಳು ಸಮಾಜಮುಖಿಯಾಗಿರಬೇಕು. ವಕ್ತಿತ್ವ ನಿರ್ಮಾಣಕ್ಕೆ ಸಂಘ ಸಂಸ್ಥೆಗಳು ಪೂರಕವಾಗಿರಬೇಕು. ಇಂತಹ ಧ್ಯೇಯೋದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹುಟ್ಟಿದ ಸಂಘ ಸಂಸ್ಥೆಗಳಲ್ಲಿ ಮುಂಬಯಿಯ ಮೈಸೂರು ಅಸೋಸಿಯೇಷನ್ ಕೂಡಒಂದು. ಹೊರನಾಡ ಕನ್ನಡ ಸಂಸ್ಥೆಗಳಲ್ಲಿ ಒಂದಾದ ಮೈಸೂರು ಅಸೋಸಿಯೇಷನ್ ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಲವರ್ಧನೆಗಾಗಿ ಶ್ರಮಿಸುತ್ತಾ ಬರುತ್ತಿದೆ. ಈ ಸಂಸ್ಥೆ ಹೊರನಾಡಿನಲ್ಲಿ ಯಾವಾಗ ಕಣ್ಣು ತೆರೆಯಿತೋ ಅಂದಿನಿಂದ ಇಂದಿನವರೆಗೆ ಕೇವಲ ಸಾಹಿತ್ಯಿಕವಾಗಿ ಮಾತ್ರವಲ್ಲದೆ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ತನ್ನನ್ನು ಅವಿರತವಾಗಿ ತೊಡಗಿಸಿಕೊಂಡಿದೆ.

ಮೈಸೂರು ಅಸೋಸಿಯೇಷನ್‌ಗೆ ಇಂದು 91ರ ಹರೆಯ. ಈ ಸಂಸ್ಥೆ ಈ ಮಟ್ಟಕ್ಕೆ ಬರಲು ಹಲವಾರು ಮಹನೀಯರ ಯೋಗದಾನವೂ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಡಾ. ಮಂಜುನಾಥ್ ಮತ್ತು ಮಂಜುನಾಥಯ್ಯ ಅವರ ದಕ್ಷ ಮಾರ್ಗದರ್ಶನದಲ್ಲಿ ಈ ಸಂಸ್ಥೆ ಮುನ್ನಡೆಯುತ್ತಿದೆ. ಸಂಸ್ಥೆಯ ಸಂಪೂರ್ಣ ಶ್ರೇಯೋಭಿವೃದ್ಧಿಗಾಗಿ ಈ ಸಂಸ್ಥೆಯ ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಕೈಜೋಡಿಸಿದ್ದಾರೆ. ಇಲ್ಲಿ ಮೇಲುಕೀಳೆಂಬ ತಾರತಮ್ಯವಿಲ್ಲ. ಎಲ್ಲ ಹಬ್ಬ ಹರಿದಿನಗಳಲ್ಲೂ ಇಲ್ಲೊಂದು ಕೌಟುಂಬಿಕ ವಾತಾವರಣವಿರುತ್ತದೆ. ಇಲ್ಲಿ ಸಾಮೂಹಿಕತ್ವಕ್ಕೆ ಬೆಲೆ ಇದೆ. ಹುಟ್ಟು ಭಾಷೆಯಾದ ಕನ್ನಡದ ಜೊತೆಗೆ ನೆಲೆನಿಂತ ಕರ್ಮಭೂಮಿಯ ಭಾಷೆ, ಸಂಸ್ಕೃತಿಯ ಏಳಿಗೆಗಾಗಿ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಸಂಗತಿ.

"ನಾವು ತಿನ್ನುವ ಅನ್ನದ ಒಂದು ಕಾಳನ್ನೋ ಅಥವಾ ಕುಡಿಯುವ ನೀರಿನ ಒಂದು ಹನಿಯನ್ನೋ ನಮ್ಮ 'ಸ್ವಶಕ್ತಿ'ಯಿಂದ ಸೃಷ್ಟಿಸಲಾಗದು ಎಂದ ಮೇಲೆ ನಾವೆಷ್ಟು ಪರತಂತ್ರರೆಂದು ಯೋಚಿಸಬೇಕಲ್ಲವೇ?" ಎಂಬ ಅನಾಮಿಕನೊಬ್ಬನ ಮಾತನ್ನು ಸಾಂಘಿಕ ಶಕ್ತಿಯ ಮಹತ್ವಕ್ಕೆ ಅನ್ವಯಿಸಿ ಹೇಳುವುದಾದರೆ ಇದು ಅಕ್ಷರಶಃ ಸತ್ಯ. ಬಹುಶಃ ಸಾಂಘಿಕ ಶಕ್ತಿಯಷ್ಟು ಪ್ರಬಲಶಾಲಿ ಮತ್ತೊಂದಿಲ್ಲವೆಂದು ಹೇಳಿದರೆ ತಪ್ಪಾಗದು.

ನಾವು ಹುಟ್ಟುತ್ತೇವೆ, ಬೆಳೆಯುತ್ತೇವೆ, ಬದುಕುತ್ತೇವೆ ಮತ್ತು ಒಂದು ದಿನ ಸಾವಿನ ತೆಕ್ಕೆಗೆ ಬೀಳುತ್ತೇವೆ ಈ ಎಲ್ಲಕ್ಕೂ ಏನಾದರೂ ಅರ್ಥವಿದೆಯೇ? ಹಾಗಾಗಿ ಬದುಕನ್ನು ಸಾರ್ಥಕಗೊಳಿಸಬೇಕಾದರೆ, ನಮ್ಮ ಬದುಕಿನೊಂದಿಗೆ ಸಮಾಜದ ಸುಧಾರಣೆಯೂ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ಪ್ರತಿಯೊಬ್ಬರ ಬದುಕಿನ ಗುರಿ ಒಂದೇ ಆಗಬೇಕು. ಸ್ವ ಅಭಿವೃದ್ಧಿಯ ಜೊತೆ ಜೊತೆಯಲಿ ಹತ್ತು ಜನರ ಬದುಕನ್ನು ರೂಪಿಸುವಲ್ಲಿ ನಾವು ಯಶಸ್ವಿಯಾದರೆ ಅದಕ್ಕಿಂತ ದೊಡ್ಡ ಸಾಧನೆ ಮತ್ತೊಂದಿಲ್ಲ. ಗುರಿ ಎನ್ನುವುದು ಕನಸು ಆದರೆ ಅದು ಬರಿಯ ಕನಸಲ್ಲ. ಕನಸನ್ನು ಬೆನ್ನು ಬಿಡದೆ ಅಟ್ಟಿಸಿಕೊಂಡು ಹೋಗಿ ಹಿಡಿಯಬೇಕದದ್ದೇ ಗುರಿ. ಯಾವ ಮಹತ್ತರವಾದ ಗುರಿಯನ್ನು ಕನಸು ಕಾಣದೆ ಮುಟ್ಟಲು ಸಾಧ್ಯವಿಲ್ಲ. ಕಲ್ಪನೆಗಳು ವಿಲಾಸವಾಗಿ ಉಳಿಯದೆ, ಸಾಕಾರದ ದಿಕ್ಕಿನಲ್ಲಿ ಸಾಗಿದಾಗ ಮಾತ್ರವೇ ಸಾಧನೆಗಳು ಸಾಧ್ಯ. ಸಾಧನೆಗೆ ಗುರಿಗಿಂತ ಛಲವೇ ಮುಖ್ಯ. ಪ್ರತಿಫಲದ ಅಪೇಕ್ಷೆಯಿಲ್ಲದೆ ಮಾಡಿದ ಸಹಾಯ ಎಂದಿಗೂ ದೊಡ್ಡದಂತೆ. ವಿವೇಕಾನಂದರ ಮಾತಿನಲ್ಲಿ ಹೇಳುವುದಾದರೆ, ಯಶಸ್ಸಿನ ಏಕಮಾತ್ರ ಸೂತ್ರವೆಂದರೆ, ನೀವು ಎತ್ತಿಕೊಂಡ ಗುರಿಯ ಬಗ್ಗೆ ಮಾತ್ರ ಯೋಚಿಸಿ, ಚಿಂತಿಸಿ ನಿಮ್ಮ ಬದುಕನ್ನು ಅದಕ್ಕಾಗಿ ಮೀಸಲಾಗಿಡಿ. ಆ ಗುರಿಯು ನಿಮ್ಮ ಮನಸ್ಸು, ಇಂದ್ರಿಯಗಳು, ನರನಾಡಿಗಳಲ್ಲಿ ವ್ಯಾಪಿಸಲಿ".

ನಿಸ್ವಾರ್ಥ ಮನೋಭಾವದಿಂದ ಕೆಲಸ ಮಾಡಿದರೆ ಸಂಘ ಸಂಸ್ಥೆಗಳ ಬೆಳವಣಿಗೆ ಸಾಧ್ಯ. ಅನ್ನೋದಕ್ಕೆ ಮೈಸೂರು ಅಸೋಸಿಯೇಷನ್‌ನ ಪದಾಧಿಕಾರಿಗಳು, ಸದಸ್ಯರುಗಳೆ ಸಾಕ್ಷಿ. ಈಗ ಮೈಸೂರು ಅಸೋಸಿಯೇಷನ್ ತೊಂಬತ್ತು ವರ್ಷಗಳನ್ನು ಪೂರೈಸಿದೆ. ಹಲವಾರು ಮಹತ್ವದ ಯೋಜನೆಗಳೊಂದಿಗೆ ಮೈಸೂರು ಅಸೋಸಿಯೇಷನ್ ಇದೀಗ 91ನೆಯ ವರ್ಷದಲ್ಲಿ ಕ್ರಿಯಾಶೀಲವಾಗಿದೆ. ಮುಂಬಯಿಯಲ್ಲಿ ಕನ್ನಡಿಗರ ಏಕತೆಗಾಗಿ ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ, ಸಾಮಾಜಿಕ, ಕ್ಷೇತ್ರದಲ್ಲಿ ರಚನಾತ್ಮಕವಾದ ಚಟುವಟಿಕೆಗಳನ್ನು ಜರುಗಿಸುವ ಮಹದಾಸೆಯೊಂದಿಗೆ ಹುಟ್ಟಿಕೊಂಡ ಸಂಸ್ಥೆಯಾಗಿದೆ. ಎಲ್ಲ ಯೋಜನೆಗಳ ಯಶಸ್ಸನ್ನು ಹಾರೈಸುತ್ತಾ, ಮೈಸೂರು ಅಸೋಸಿಯೇಷನ್‌ಗೆ ಮಗದೊಮ್ಮೆ ನಮ್ಮ ಮನದಾಳದ ಶುಭಕಾಮನೆಗಳನ್ನು ಸಲ್ಲಿಸುತ್ತೇವೆ.


**– ಡಾ. ಜ್ಯೋತಿ ಸತೀಶ್**

# ಜಾಗತಿಕ ಕನ್ನಡ ಕವನ ಸ್ಪರ್ಧೆ



✍ ನಾರಾಯಣ ನವೀಲೇಕರ್

2016 ಫೆಬ್ರವರಿ 26ರಂದು ನಮ್ಮ ಮೈಸೂರು ಅಸೋಸಿಯೇಷನ್ 90 ವರ್ಷಗಳನ್ನು ಪೂರೈಸಿತು. ಈ ಮೈಲಿಗಲ್ಲನ್ನು ಸಂಭ್ರಮದಿಂದ ಆಚರಿಸಬೇಕೆಂದು ತೀರ್ಮಾನಿಸಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅದರ ಪ್ರಕಾರ, ಅಸೋಸಿಯೇಶನ್ ಹುಟ್ಟಿದ ದಿವಸವನ್ನು ಸಡಗರಿಂದ ಫೆಬ್ರವರಿ 27ರಂದು ಆಚರಿಸಿದೆವು. ಈ ಸಂಭ್ರಮದ ಮತ್ತೊಂದು ಕಾರ್ಯಕ್ರಮವೇ 'ಜಾಗತಿಕ ಕನ್ನಡ ಕವನ ಸ್ಪರ್ಧೆ' ಇದನ್ನು ಜಾರಿಗೆ ತರಲು ರಚಿಸಲಾದ ಸಮಿತಿಯು ಈ ಸ್ಪರ್ಧೆಯ




ನಿಯಮಾವಳಿಗಳನ್ನು ರೂಪಿಸಿತು. ಇದು ಅಂತರ್ಜಾಲದ ಕಾಲ. ಹಾಗಾಗಿ ಯಾವುದೇ ಭೌಗೋಳಿಕ ಮಿತಿಗೆ ಅನ್ವಯಿಸದೆ, ಜಾಗತಿಕ ವ್ಯಾಪ್ತಿಯ ಯಾವುದೇ ಕನ್ನಡಿಗ / ಕನ್ನಡತಿ ಕೂಡಾ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು ಎಂದು ನಿರ್ಧರಿಸಲಾಯಿತು.

ಈ ಸ್ಪರ್ಧೆ ಯಶಸ್ವಿಯಾಗಲು ವ್ಯಾಪಕ ಪ್ರಚಾರ ಕೊಡುವುದು ಅಗತ್ಯವಾಗಿತ್ತು. ಸಾಂಪ್ರದಾಯಿಕ ಮಾಧ್ಯಮಗಳಾದ ಪತ್ರಿಕೆಗಳು, ಮ್ಯಾಗಜೀನುಗಳ ಜೊತೆಜೊತೆಯಾಗಿ ಸಾಮಾಜಿಕ ಮಾಧ್ಯಮಗಳ ಉಪಯೋಗವನ್ನೂ ಪಡೆದುಕೊಳ್ಳಬೇಕು ಎಂದು ನಿರ್ಧರಿಸಲಾಯಿತು. ಕವನಗಳನ್ನು ಸ್ವೀಕರಿಸಲು ವಿಶೇಷ ಮಿಂಚಂಚೆಯನ್ನೂ ತಯಾರು ಮಾಡಿದೆವು,

ಕರ್ನಾಟಕದ ಹೆಸರಾಂತ ಪತ್ರಿಕೆಗಳು, ಮುಂಬಯಿಯ ಕನ್ನಡ ಪತ್ರಿಕೆಗಳು, ಮುಂಬಯಿಯ ಸೋದರ ಕನ್ನಡ ಸಂಸ್ಥೆಗಳು ಇವರೆಲ್ಲರಿಗೂ, ಈ ಸ್ಪರ್ಧೆಯ ಬಗ್ಗೆ ಮಾಹಿತಿ ಕೊಟ್ಟು ಪ್ರಚಾರ ಕೊಡುವಂತೆ ಕೇಳಿಕೊಳ್ಳಲಾಯಿತು. ನಮ್ಮ ಅಸೋಸಿಯೇಶನ್ನಿನ Facebookನಲ್ಲಿ ಇದರ ಬಗ್ಗೆ ವಿವರಗಳನ್ನು ನೀಡಿ ಕನ್ನಡಿಗರನ್ನು ಭಾಗವಹಿಸಲು ಅಹ್ವಾನಿಸಿದೆವು. WhatsApp ಗುಂಪುಗಳಲ್ಲಿ ಸಂದೇಶಗಳನ್ನು ಹೊರಪಡಿಸಿದೆವು ಈ ಸಂದೇಶಗಳನ್ನು ನಮ್ಮ ಸದಸ್ಯರುಗಳು ತಮ್ಮತಮ್ಮ ಗುಂಪುಗಳಲ್ಲಿ ಮರುಪ್ರಸಾರ ಮಾಡಿದರು. ಈ ಸ್ಪರ್ಧೆಯ ಬಗ್ಗೆ ಮಿಂಚಂಚೆಗಳು ಹೋದವು. ಪರರಾಜ್ಯಗಳ, ಪರದೇಶಗಳ ಕನ್ನಡ ಸಂಸ್ಥೆಗಳ ಮಿಂಚಂಚೆಗಳನ್ನು ಪತ್ತೆ ಹಚ್ಚಿ ಅವರಿಗೂ ಸಂದೇಶಗಳನ್ನು ಕಳಿಸಲಾಯಿತು. ಇದೆಲ್ಲಾ ಆದ ಮೇಲೆ, ಉಸಿರು ಹಿಡಿದು ಕಾದೆವು.


ಪ್ರತಿಕ್ರಿಯೆ ಅದ್ಭುತವಾಗಿತ್ತು. ಮೊದಲ ಕೆಲ ದಿನಗಳಲ್ಲಿಯೇ ನಮ್ಮ ವಿಶೇಷ ಮಿಂಚಂಚೆಗೆ ಕವನಗಳು ಬರಲಾರಂಭಿಸಿದವು. ಅಂಚೆಯಿಂದಲೂ ಆಗಾಗ ಬರತೊಡಗಿದವು. ಹೀಗೆಯೇ ಎರಡು ಮೂರು ವಾರ ಕಳೆಯಿತು. ನಮ್ಮಲ್ಲೀಗ ಸುಮಾರು 50-60 ಕವನಗಳು ಸಂಗ್ರಹವಾಗಿತ್ತು. ಇನ್ನೊಂದು ಎರಡು ವಾರ ಬಾಕಿಯಿತ್ತು. ಮತ್ತೊಮ್ಮೆ ನಮ್ಮ ಪ್ರಚಾರದ ಎಂಜಿನನ್ನು ಶುರು ಮಾಡಿದೆವು. ಕವನಗಳ ಭರಾಟೆ ಹೆಚ್ಚಾಯಿತು. ನಮ್ಮ ನಿರೀಕ್ಷೆ ಒಟ್ಟು 90-100 ಕವನಗಳು ಬಂದಾವು ಎಂದಿತ್ತು. ಆದರೆ ಕೊನೆಯ ದಿನ ಮುಗಿದು ಎಣಿಕೆ ಮಾಡಿದಾಗ, 275 ಕವನಗಳ ಖಜಾನೆಯೇ ನಮ್ಮಲ್ಲಿ ತಯಾರಾಗಿತ್ತು. ಕೊನೆಯ ದಿನ ಒಂದೇ ದಿನ ಸುಮಾರು 25 ಕವನಗಳು ಬಂದಿದ್ದವು. ನಮ್ಮ ಅಹ್ವಾನಕ್ಕೆ ಕನ್ನಡಿಗರು ಅದ್ಭುತವಾಗಿ ಸ್ಪಂಧಿಸಿದ್ದರು.

ಕರ್ನಾಟಕ ಬಹುತೇಕ ಎಲ್ಲಾ ಜಿಲ್ಲೆಗಳಿಂದ ಅಷ್ಟೇ ಅಲ್ಲ, ಕೇರಳದ ಮಂಜೇಶ್ವರ, ಕಾಸರಗೋಡು, ಅಂಧ್ರದ ಹೈದರಾಬಾದು, ನಮ್ಮದೇ ಮುಂಬಯಿ, ನವಿಮುಂಬಯಿ, ಪುಣೆ, ಸೊಲ್ಲಾಪುರ ಇತ್ಯಾದಿಗಳಿಂದಲೂ ಕನ್ನಡಿಗರು ಕವನಗಳನ್ನು ಕಳಿಸಿದರು. ದೂರದ ದುಬಾಯಿಯಿಂದಲೂ ಕವನವೊಂದು ಬಂದು ನಮ್ಮ ಸ್ಪರ್ಧೆಯ ಜಾಗತಿಕತೆಯನ್ನು ಸಾರ್ಥಕಗೊಳಿಸಿತು.

ಮುಂದಿನ ಕಾರ್ಯ ಇವನ್ನೆಲ್ಲಾ ವಿಂಗಡಿಸಿ, ಬೆಲೆಕಟ್ಟುವುದು. ಮೊದಲ ಹಂತದ ಮೌಲ್ಯಮಾಪನಕ್ಕಾಗಿ ಮುಂಬಯಿಯ ಹಿರಿಯ ಕವಿ, ಶ್ರೀಯುತ ಕುರ್ಕಾಲರನ್ನು ಕೇಳಿಕೊಂಡೆವು. ಅವರು ತಮ್ಮ ಎಲ್ಲ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ಬಂದು ಈ ಎಲ್ಲ ಕವನಗಳನ್ನು ಓದಿ, 105 ಕವನಗಳನ್ನು ಆಯ್ದರು. ಆ ನಂತರ ಈ ಕವನಗಳ ಮುಂದಿನ ಪರಿಶೀಲನೆಗಾಗಿ ಕನ್ನಡದ ಖ್ಯಾತ ಕವಿ ಶ್ರೀ ಎಚ್. ಎಸ್. ವೆಂಕಟೇಶಮೂರ್ತಿಯವರಿಗೆ ಕಳುಹಿಸಿಕೊಟ್ಟೆವು. ಅವರು ದಯಮಾಡಿ ನಮ್ಮ ಈ ಕೆಲಸವನ್ನು ಮಾಡಿಕೊಡಲು ಒಪ್ಪಿದ್ದಷ್ಟೇ ಅಲ್ಲ, ನಮ್ಮ ನಿಗದಿತ ವೇಳೆಗಿಂತ ಬಹಳ ಮೊದಲೇ ಅವನ್ನೆಲ್ಲ ಓದಿ, ಬೆಲೆಕಟ್ಟಿ, ತಮ್ಮ ನಿರ್ಣಯವನ್ನು ನಮಗೆ ತಿಳಿಸಿದರು. ಈ ಪರಿಶ್ರಮಕ್ಕಾಗಿ ನಾವು ಶ್ರೀ ಕುರ್ಕಾಲ್ ಹಾಗೂ ಶ್ರೀ ವೆಂಕಟೇಶಮೂರ್ತಿಯವರಿಗೆ ಋಣಿಯಾಗಿದ್ದೇವೆ. ಹಾಗೆಯೇ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಗಣೇಶ್ ಉಪಾಧ್ಯರು ನಮ್ಮ ಈ ಸ್ಪರ್ಧೆಗೆ ನೀಡಿದ ಸಲಹೆ, ಬೆಂಬಲ, ಸಹಕಾರಕ್ಕೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ನಮ್ಮ ಈ ಕವನ ಖಜಾನೆಯ ಇತರ ಆರಿಸಿದ ಕವನಗಳನ್ನು ನಮ್ಮ 'ನೇಸರು'ವಿನಲ್ಲಿ ಮುಂದೆ ಕ್ರಮೇಣ ಪ್ರಕಟಿಸುವ ವಿಚಾರವಿದೆ.

ಏಪ್ರಿಲ್ 9ರಂದು ನಾವು ಹಮ್ಮಿಕೊಂಡಿರುವ "ವಸಂತೋತ್ಸವ" ಕಾರ್ಯಕ್ರಮದಲ್ಲಿ ಸ್ಪರ್ಧೆಯ ವಿಜೇತರನ್ನು ಸನ್ಮಾನಿಸಿ ಬಹುಮಾನ ನೀಡಲಾಗುವುದು. ತಾವೆಲ್ಲರೂ ಬನ್ನಿ, ನಮ್ಮೊಂದಿಗೆ ಪಾಲ್ಗೊಳ್ಳಿ. ನಮ್ಮ ಅಸೋಸಿಯೇಷನ್‌ನ 90ರ ಸಂಭ್ರಮದ ಅಂಗವಾಗಿ ನಡೆಸಲಿರುವ ಕಾರ್ಯಕ್ರಮ ಸರಣೀಯ ಮುಂದಿನ ಭಾಗ "ಜಾಗತಿಕ ಕಥಾ ಸ್ಪರ್ಧೆ"ಯ ವಿವರಗಳಿಗಾಗಿ ಎದುರು ನೋಡಿ.

# ಮುಂಬಯಿ ಮೈಸೂರು ಅಸೋಸಿಯೇಷನ್ : ಒಂದು ಸವಿ ನೆನಪು




✍ ಬಿ. ಗೋಪಾಲಯ್ಯ

ನಾನು 1932–33 ರಲ್ಲಿ ನನ್ನ ವಿದ್ಯಾರ್ಥಿ ದೆಸೆಯಲ್ಲಿ ಮುಂಬಯಿ ಮೈಸೂರು ಅಸೋಸಿಯೇಷನ್ನಿನ ಸದಸ್ಯನಾಗಿದ್ದೆ. ಆಗ ನನಗೆ 22 ವಯಸ್ಸಿರಬಹುದು. ನನ್ನ ಮಗಳು ಶ್ರೀಮತಿ ವಾಣಿ ಮುಂಬಯಿಯಲ್ಲಿ ನೆಲಸಿ ಮೈಸೂರು ಅಸೋಸಿಯೇಷನ್ನಿನ ಸದಸ್ಯರಾಗಿರುತ್ತಾರೆ. ಅವಳು ನನ್ನನ್ನು "ನಿಮ್ಮ ಕಾಲದಲ್ಲಿ ಸಂಘವು ಹೇಗಿತ್ತು?" ಎಂದು ಪ್ರಶ್ನಿಸಿದಾಗ ಈ ಹಿಂದಿನ ಸವಿ ನೆನಪು ನನಗೆ ಉಂಟಾಯಿತು.

ಆಗ ಮುಂಬಯಿ ಮೈಸೂರು ಅಸೋಸಿಯೇಷನ್ ಮಾತುಂಗ ರೈಲ್ವೆ ಸ್ಟೇಷನ್‌ನ್ನಿನ ಹತ್ತಿರದ ಒಂದು ಬಾಡಿಗೆ ಮನೆಯಲ್ಲಿ ನಡೆಯುತ್ತಿತ್ತು. ದಿವಾನ್ ಬಹಾದ್ದೂರ್ ರಾಮಸ್ವಾಮಿಗಳು ಸಂಘದ ಅಧ್ಯಕ್ಷರಾಗಿದ್ದರು. ಸಂಘದ ಸದಸ್ಯರ ಸಂಖ್ಯೆ ಸುಮಾರು 40–50 ಇತ್ತು ಅಷ್ಟೆ. ಸಂಘವು ಇನ್ನು ಶೈಶವದಲ್ಲಿತ್ತು. ಮೈಸೂರಿನವರು ಒಟ್ಟಿಗೆ ಸೇರತಕ್ಕ ಅಭ್ಯಾಸವೂ ಇರಲಿಲ್ಲ. ನಾವು ಕೆಲವೇ ಜನ ವಿದ್ಯಾರ್ಥಿಗಳು ಮತ್ತು ಯುವಕರು ಒಂದೆಡೆಯಲ್ಲಿ ಸೇರುವುದಕ್ಕಾಗಿ ಸಾಯಂಕಾಲದ ಸಮಯದಲ್ಲಿ ನಮ್ಮ ಸಂಘದ ಕಟ್ಟಡ ಪಕ್ಕದಲ್ಲಿದ್ದ ಖಾಲಿ ನಿವೇಶನದಲ್ಲಿ ವಾಲಿಬಾಲ್ ಆಟವನ್ನು ಶುರು ಮಾಡಿದೆವು. ಹಾಗೂ ನಮ್ಮ ಅಧ್ಯಕ್ಷರಾದ ರಾವ್ ಬಹಾದ್ದೂರ್ ರಾಮಸ್ವಾಮಿಯವರು ಏನಾದರೂ ಒಂದು ಸಾಮೂಹಿಕ ಕೂಟವನ್ನು ಏರ್ಪಡಿಸುತ್ತಿದ್ದರು. ಹೀಗೆ ಒಂದು ಸಲ ಸುಮಾರು 100–150 ಜನ ಮೈಸೂರಿನವರನ್ನು ಎಲಿಫೆಂಟಾ ಕೇವ್ಸ್‌ಗೆ (ಗುಹೆಗೆ) ಅವರ ಖರ್ಚಿನಲ್ಲಿಯೇ ಕರೆದುಕೊಂಡು ಹೋಗಿದ್ದರು. ನನ್ನ ಸಮಕಾಲೀನರು ಮತ್ತು ಮೈಸೂರು ಕಾಲೇಜಿನಲ್ಲಿ ಓದುತ್ತಿದ್ದಾಗ ಜೊತೆಗಾರರು ಆಗಿದ್ದ ಶ್ರೀಮಾನ್ ಕೇಶವ್ ಮೂರ್ತಿಯವರು ಮುಂಬಯಿಯಲ್ಲಿಯೇ ನೆಲಸಿದ್ದರು. ಅವರು ಸಾಯಂಕಾಲದ ಆಟಗಳಲ್ಲಿ ನಮ್ಮ ಜೊತೆಯಲ್ಲಿಯೇ ಇರುತ್ತಿದ್ದರು ಹಾಗೂ ನಾವಿಬ್ಬರೂ ಒಂದು ಸಲ ಮೆಸ್ಸಿನ ಜಾಯಿಂಟ್ ಸೆಕ್ರೆಟರಿಗಳಾಗಿದ್ದೆವು. ನಾವು ಒಬ್ಬರಿಗೊಬ್ಬರ ನೆರವಿನಲ್ಲಿ ಮೆಸ್ಸಿನ ಆಡಳಿತವನ್ನು ಶುದ್ಧಿಗೊಳಿಸಿ ನಮ್ಮಗಳ ಸ್ವಪ್ರಯತ್ನದಿಂದ ಖರ್ಚು ವೆಚ್ಚಗಳನ್ನು ತಹಬಂದಿಗೆ ತಂದು ಅಡುಗೆಯ ಗುಣಮಟ್ಟವನ್ನು ಹೆಚ್ಚಿಸಿ ಊಟದ ಬೆಲೆಯನ್ನು ಕಡಿಮೆ ಮಾಡಿ, ಅಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕೈ ತುಂಬಾ ಸಂಬಳ ಕೊಡುತ್ತಿದ್ದೆವು. ನಾವೇ ಸ್ವತಃ Byculla ಮಾರುಕಟ್ಟೆಗೆ ಹೋಗಿ ತರಕಾರಿ ಹಾಗೂ ಅಡುಗೆಯ ಸಾಮಾನುಗಳನ್ನು ತರುತ್ತಿದ್ದುದರಿಂದ ವೆಚ್ಚ ಕಡಿಮೆಯಾಗುತ್ತಿತ್ತು.

ಆಗ ಗುಬ್ಬಿ ಕಂಪನಿಯ ನಾಗೇಂದ್ರರವರು ಮತ್ತು ಚಲನ ಚಿತ್ರ ನಟ ಹನುಮಂತರಾವ್ ಮ.ರಾ.ಶೇಶನ್ ಮತ್ತು ಮಾಗಲ್ ಮುಂತಾದವರು ನಮ್ಮ ಸಂಘದ ಸದಸ್ಯರಾಗಿದ್ದರು. ಆಗಿನ ಸಂಘದ ಸೆಕ್ರೆಟಿಯವರು – ಹೆಸರು ಮರೆತಿದ್ದೇನೆ– ಮತ್ತು ಇತರ ಯುವಕರು, ಹೇಗಾದರೂ ಸಂಘಕ್ಕೆ ನಮ್ಮದೇ ಆದ ಕಟ್ಟಡವನ್ನು ಹೊಂದಲು ಪ್ರಯತ್ನ ಮಾಡಬೇಕೆಂದು ತೀರ್ಮಾನಿಸಿದೆವು. ಹಣ ಕೂಡಿಸುವುದಕ್ಕೆ ಶ್ರೀಮಾನ್ ನಾಗೇಂದ್ರ ರಾವ್ ಮತ್ತು ಹನುಮಂತ ರಾವ್‌ರವರ ನಿರ್ದೇಶನದಲ್ಲಿ 'ವಿರಾಟ ಪರ್ವ' ನಾಟಕವನ್ನು ರಂಗ ಮಂಟಪಕ್ಕೆ ತಂದೆವು. ಆ ನಾಟಕದಲ್ಲಿ ನನ್ನ ಪಾತ್ರವು ಬಹಳ ಪುಟ್ಟದಾಗಿತ್ತು. ಅದು ಉತ್ತರೆಯ ಪಾತ್ರ. ಆದರೆ ನನಗೆ ಅದು ಮೈಸೂರು ಅಸೋಸಿಯೇಷನ್ ಜನಗಳ ಪರಿಚಯ ಮತ್ತು ಅಭಿಮಾನವನ್ನು ಉಂಟು ಮಾಡಿಸಿತ್ತು. ಇನ್ನೊಮ್ಮೆ ಕಟ್ಟಡದ ನಿಧಿಯನ್ನು ಹೆಚ್ಚಿಸಲು ಒಂದು ಕಲಾಕೂಟವನ್ನು ಜಹಾಂಗೀರ್ ಭವನದಲ್ಲಿ ಏರ್ಪಡಿಸಿ ಅದರಂಗವಾಗಿ ಶ್ರೀಮಾನ್ ಮೂರ್ತಿರಾಯರ 'ಆಶಾಡಭೂತಿ' ನಾಟಕವನ್ನು ಪ್ರದರ್ಶಿಸಿದೆವು. ಅದರಲ್ಲಿ ನಾನು 'ಸರಸು' ಪಾತ್ರ ಮಾಡಿದ್ದೆ. ಅದು ನನಗೆ ಪೂರ್ಣ ಜಯವನ್ನು ಕೊಡಿಸಿತು. ದಿವಾನ್ ಬಹಾದ್ದೂರ್ ರಾಮಸ್ವಾಮಿಯವರು ನನ್ನ ಅಭಿನಯವನ್ನು ಮೆಚ್ಚಿ ಒಂದು ಚಿನ್ನದ ಪದಕ ಮತ್ತು ಶ್ರೀಮತಿ ಚಿನ್ನಸ್ವಾಮಿಯವರಿಂದ ಒಂದು ಬೆಳ್ಳಿಯ ಪದಕವನ್ನು ಕೊಟ್ಟಿದ್ದರು. ಈ ಕೂಟದ ಏರ್ಪಾಡಿನಿಂದ ಕಟ್ಟಡದ ನಿರ್ಮಾಣಕ್ಕೆ ಸಾಕಷ್ಟು ಹಣ ಸೇರಿಸಿದೆವು. ಈ ನಮ್ಮ ಪ್ರದರ್ಶನದಿಂದ ಶುರುವಾದ ಸ್ವಗೃಹ ನಿರ್ಮಾಣ ಬೃಹದಾಕಾರವಾಗಿ ಬೆಳೆದು ಅಭಿವೃದ್ಧಿ ಹೊಂದಿರುತ್ತದೆ. ಇದಕ್ಕೆ ನಮ್ಮ ನಂತರ ಸಂಘದ ಅಧ್ಯಕ್ಷರಾಗಿ ಹಲವು ವರ್ಷಗಳು ಕೆಲಸ ನಿರ್ವಹಿಸಿದ ನನ್ನ ಅಣ್ಣ ದಿವಂಗತ ಶ್ರೀ.ಬಿ.ನಾರಾಯಣ ಸ್ವಾಮಿಗಳು ಸ್ವಹಸ್ತ ಪರಹಸ್ತಗಳಿಂದ ಸಮೃದ್ಧಿಯಾಗಿ ಹಣವನ್ನು ಗಳಿಸಿಕೊಟ್ಟಿದ್ದಾರೆ. ಇಂದಿನ ಭವ್ಯ ಮಂದಿರವನ್ನು ಹೊಂದಿರುವ ಮುಂಬೈನ ಮೈಸೂರು ಅಸೋಸಿಯೇಷನ್ನಿನ ಸದಸ್ಯರಿಗೆ ಅನೇಕ ವಂದನೆಗಳು.

●



✍ ಕೇಶವ ಮೂರ್ತಿ

ನಾನು 1929 ರಲ್ಲಿ LL.B. ಓದುವುದಕ್ಕೆ ಮುಂಬಯಿಗೆ ಬಂದೆ. ಆಗ ಗಿ.ಖಿ.ನಲ್ಲಿ ಒಂದು ಪ್ರಸಿದ್ಧ ಮಂಗಳೂರು ಹೋಟೆಲ್ ಇತ್ತು. ಆ ಹೋಟೇಲಿನವರು V.T. ಸ್ಟೇಷನ್‌ಗೆ ಬಂದು ಅಲ್ಲಿ ಬರುವ ಯಾತ್ರಿಕರಿಗೆಲ್ಲ ತಮ್ಮ ಹೋಟೆಲಿನಲ್ಲಿ ಇಳಿದುಕೊಳ್ಳಬೇಕೆಂದು ಹೋಟೆಲಿನ ಬೋರ್ಡನ್ನು ತೋರಿಸುತ್ತಿದ್ದರು. ನಾನು ಆ ಹೋಟೇಲಿನ ಬಗ್ಗೆ ಬಹಳಷ್ಟು ಜನರಿಂದ ಕೇಳಿದ್ದೆ. ಆದ್ದರಿಂದ ಅಲ್ಲಿಯೇ ಹೋಗಿ ಇಳಿದುಕೊಂಡೆ. ಅಲ್ಲಿ ಬಲರಾಮ ರಾವ್ ಎಂಬ ಕನ್ನಡಿಗರ ಪರಿಚಯ ಆಯಿತು. "ಓರಿಯಂಟಲ್ ಇನ್‌ಶ್ಯೂರೆನ್ಸ್ ಕಂಪನಿಯಲ್ಲಿ ಕೆಲಸ ಖಾಲಿ ಇದೆ, ನೀವು ಯಾಕೆ ಅರ್ಜಿ ಹಾಕಬಾರದು". ಎಂದು ಅವರು ನನಗೆ ಹೇಳಿದರು. ಅದರಂತೆ ನಾನು ಅರ್ಜಿ ಸಲ್ಲಿಸಿದೆ. ಸಂದರ್ಶನಕ್ಕೆ ಕರೆಯೂ ಬಂತು. ಅದರ ಫಲವಾಗಿ ಕೆಲಸವು ಸಿಕ್ಕಿತು. ಬೆಳಿಗ್ಗೆ 10.30 ಘಂಟೆವರೆಗೂ Law ಕ್ಲಾಸಸ್ ಇರುತ್ತಿತ್ತು. ಅದನ್ನು ಮುಗಿಸಿಕೊಂಡು ಕೆಲಸಕ್ಕೆ ಹೋಗುತ್ತಿದ್ದೆ. ಅದೇ ಕಾಲದಲ್ಲಿ ನನ್ನ ಸ್ನೇಹಿತ ಶ್ರೀ ನಾಗಭೂಷಣ ರಾಯರು ಸೆಂಟ್ರಲ್ ಕಾಟನ್ ಲ್ಯಾಬ್‌ನಲ್ಲಿ ಕೆಲಸದಲ್ಲಿದ್ದರು. ಅವರು ಮಾಟುಂಗನಲ್ಲಿ ಇನ್ನು ಕೆಲವು ಕನ್ನಡಿಗರೊಡನೆ ರೂಮ್ ಮಾಡಿಕೊಂಡಿದ್ದರು. ಇನ್ನೂ ಸುಮಾರು ಕನ್ನಡಿಗರು ಮಾಟುಂಗನಲ್ಲೇ ಒಂದು ರೂಮಿಗೆ ಎರಡೂ ಮೂರು ಜನರಂತೆ ಸೇರಿಕೊಂಡು ಇರುತ್ತಿದ್ದರು. ಸ್ವಲ್ಪ ದಿನಗಳಾದ ಮೇಲೆ ನಾನೂ ಸಹ ಮಾಟುಂಗಗೆ ಬಂದು ನನ್ನ ಇನ್ನೊಬ್ಬ ಸ್ನೇಹಿತನ ರೂಮಿನಲ್ಲಿ ಸೇರಿಕೊಂಡೆ. ಅಲ್ಲಿಂದ ನನಗೆ ಮೈಸೂರು ಅಸೋಸಿಯೇಷನ್ನಿನೊಡನೆ ಸಂಪರ್ಕ ಶುರುವಾಯಿತು.

ಆಗ ಮೈಸೂರು ಅಸೋಸಿಯೇಷನ್ ಮಾಟುಂಗದಲ್ಲಿರುವ ನಪ್ಪು ಹಾಲ್ ಪಕ್ಕದ Vejbhai ಕಟ್ಟಡದಲ್ಲಿ ಬಾಡಿಗೆಗೆ ತೆಗೆದುಕೊಂಡಿತ್ತು. ಅಸೋಸಿಯೇಷನ್ನಿನ ಅಂದರೆ ಮೂರು ರೂಮುಗಳು ಮಾತ್ರ ಇತ್ತು. ಒಂದು ಆಫೀಸು, ಒಂದು Gymnasium ಒಂದು ಹಾಲ್ ಇತ್ತು. ಅಲ್ಲಿನ ನಿತ್ಯದ

ಚಟುವಟಿಕೆ ಎಂದರೆ Gymnasium ಕಸರತ್ತು Carrom ಆಟವಾಗಿತ್ತು. ದಿವಾನ್ ಬಹದ್ದೂರ್ ರಾಮಸ್ವಾಮಯ್ಯನವರು ಈ ಸಂಘದ ಮುಖ್ಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಅವರು ಅಸೋಸಿಯೇಷನ್ ಬೆಳೆಯಲು ಬೇಕಾದಷ್ಟು ನೆರವು ನೀಡಿದ್ದರು.

ಆಗಿನ ಕಾರ್ಯಕ್ರಮಗಳಲ್ಲಿ ಮುಖ್ಯವಾದುದು ಮೈಸೂರು ಮಹಾರಾಜರ ವರ್ಧಂತಿ ಉತ್ಸವ. ಅರಮನೆಯ ಆಡಳಿತದವರು 100 ವರಹಗಳನ್ನು ಕಳುಹಿಸುತ್ತಿದ್ದರು. ಆ ದುಡ್ಡಿನಲ್ಲಿ ಉತ್ಸವವನ್ನು ಆಚರಿಸುತ್ತಿದ್ದೆವು. ಮತ್ತೊಂದು ಕಾರ್ಯಕ್ರಮವೆಂದರೆ ಅಸೋಸಿಯೇಷನ್‌ನ್ನಿನ ವಾರ್ಷಿಕೋತ್ಸವ ಸಮಾರಂಭ. ಅವತ್ತಿನ ದಿನ, ರಾಮಸ್ವಾಮಯ್ಯನವರು ತಮ್ಮ ಸ್ವಂತ ಖರ್ಚಿನಲ್ಲಿ ಎಲ್ಲರಿಗೂ ಊಟ ಹಾಕಿಸುತ್ತಿದ್ದರು. ಆಗ ಸುಮಾರು 30 ಜನ ಸದಸ್ಯರು ಇದ್ದರು. ಸದಸ್ಯತ್ವಕ್ಕೆ ತಿಂಗಳಿಗೆ ಒಂದು ರೂಪಾಯಿ ಕೊಡಬೇಕಾಗಿತ್ತು. ಆಗ ಮಾಗಲ್‌ರವರು ಸೆಕ್ರೆಟರಿ ಆಗಿದ್ದರು. "ನೀವು ಕನ್ನಡದವರೆಲ್ಲ ಹೋಟೇಲ್‌ನಲ್ಲಿ ಊಟ ಮಾಡುವ ಬದಲು ಇಲ್ಲೇ ಒಂದು ಊಟದ ಮೆಸ್ಸು ಏಕೆ ಶುರು ಮಾಡಬಾರದು", ಎಂದು ರಾಮಸ್ವಾಮಯ್ಯನವರು ಸೂಚಿಸಿದರು. ಅದು ಅಷ್ಟು ಸುಲಭದ ಕೆಲಸ ಅಲ್ಲ. ಅದಕ್ಕೆ ತುಂಬ ಖರ್ಚಾಗುತ್ತೆ" ಎಂದು ಸೆಕ್ರೆಟರಿಯವರು ಉತ್ತರಿಸಿದರು. ಅದಕ್ಕೆ ರಾಮಸ್ವಾಮಯ್ಯನವರು, "ನೀವು ಶುರು ಮಾಡಿ, ಅದಕ್ಕೆ ಬೇಕಾಗುವ ಪಾತ್ರೆ, ತಟ್ಟೆ, ಮಣೆ, ಮತ್ತಿತರ ಸಾಮಾನುಗಳನ್ನು ಮೊದಲಿಗೆ ನಾನು ಕೊಡುತ್ತೇನೆ" ಎಂದು ಹೇಳಿದರು. ಅಂತೂ ಒಂದು ಶುಭ ದಿವಸ ಊಟದ ಮೆಸ್ಸು ಶುರುವಾಯಿತು. ತಿಂಗಳಿಗೆ ಇಬ್ಬರು ಸದಸ್ಯರಂತೆ ಮೆಸ್ಸಿನ ಆಡಳಿತ ನಡೆಸುತ್ತಿದ್ದೆವು. ಪ್ರತಿ ತಿಂಗಳ ಆಗುವ ಖರ್ಚು ವೆಚ್ಚವನ್ನು ಅಲ್ಲಿ ಊಟ ಮಾಡುತ್ತಿದ್ದ ಸದಸ್ಯರುಗಳೆಲ್ಲ ಹಂಚಿಕೊಳ್ಳುತ್ತಿದ್ದೆವು. ಊಟ ಚೆನ್ನಾಗಿರುತ್ತಿತ್ತು. ಪ್ರತಿ ತಿಂಗಳ ಮೀಟಿಂಗ್ ಆಗ ಬೇಕಾದರೆ compoundನಲ್ಲೇ canvas ಹಾಕಿಕೊಂಡು ಕೂಡುತ್ತಿದ್ದೆವು.

ಹೀಗೆ ಸುಮಾರು ವರ್ಷ ಅದೇ ಬಿಲ್ಡಿಂಗ್‌ನಲ್ಲೇ ಅಸೋಸಿಯೇಷನ್ ನಡೆಯಿತು. ಅಸೋಸಿಯೇಷನ್ನಿನ ಒಂದು ಸ್ವಂತ ಕಟ್ಟಡ ಮಾಡಬೇಕೆಂದು ಮುಖ್ಯ ಸ್ಥಾಪಕರುಗಳಿಗೆ ಯೋಜನೆ ಇತ್ತು. ಆಗಿನ ಕಾಲದಲ್ಲಿ ಎಂ. ಎನ್. ಎಸ್. ಅಯ್ಯಂಗಾರ್ ಎಂಬ ಕನ್ನಡಿಗರೊಬ್ಬರು ಮುನ್ಸಿಪಾಲಿಟಿಯಲ್ಲಿ ಇಂಜಿನಿಯರ್ ಆಗಿದ್ದರು. ಅವರ ಸಹಾಯದಿಂದ ಅರ್ಜಿ ಹಾಕಿ ಇಂದು ಮೈಸೂರು ಅಸೋಸಿಯೇಷನ್ ಇರುವ ಜಾಗ ತೆಗೆದುಕೊಳ್ಳಲಾಯಿತು. ಬರಿ ಜಾಗ ಇದ್ದರೆ ಸಾಕೆ? ಒಂದು ಕಟ್ಟಡ ಬೇಕಾಗಿತ್ತು. ಸರಿ ಅದಕ್ಕೆ ಕೆಲವು ಮುಖ್ಯ ಸದಸ್ಯರ ಆರ್ಥಿಕ ಸಹಾಯದಿಂದ ಒಂದು ಸಣ್ಣ ಕಟ್ಟಡದ ನಿರ್ಮಾಣವಾಯಿತು. ಸಂಘದ ಕಾರ್ಯ ನಿರ್ವಹಣೆಗೆ ಒಂದು ಕಾರ್ಯಕಾರಿ ಸಮಿತಿಯನ್ನು ಮಾಡಲಾಯಿತು. ಅದರಲ್ಲಿ ಅನೇಕ ಗಣ್ಯ ವ್ಯಕ್ತಿಗಳಿದ್ದರು. ಹೆಚ್ಚು ಹೆಚ್ಚಿನ ಚಟುವಟಿಕೆಗಳು ಶುರುವಾದವು. ಆಗಿಂದಾಗ್ಯೆ ಸದಸ್ಯರು ನಾಟಕಗಳನ್ನು ಏರ್ಪಾಡು ಮಾಡುತ್ತಿದ್ದರು. ಊಟದ ಮೆಸ್ಸು ದೊಡ್ಡದಾಯಿತು. ಹೊರಗಿನವರು ಊಟಕ್ಕೆ ಬರುತ್ತಿದ್ದರು. ಸದಸ್ಯರ ಸಂಖ್ಯೆಯು ಜಾಸ್ತಿಯಾಯಿತು. ಕಮಿಟಿಯ ಸದಸ್ಯರಲ್ಲೊಬ್ಬರಾದ R.D.Char ಎಂಬುವವರು ಸಂಜೆಯ ಹೊತ್ತು ಯಾರಾದ್ದಾದರೂ ಉಪನ್ಯಾಸವಿಡಬಹುದೆಂದು ಸೂಚಿಸಿದರು. ಅದರಂತೆ ಪ್ರತೀ ಸೋಮವಾರ ಸಂಜೆಯ ಸಮಯದಲ್ಲಿ ವೇದಾಂತ ವಿದ್ವಾನ್ ಶ್ರೀ ಗೋಪಾಲಾಚಾರ್ಯರ ಭಗವದ್ಗೀತೆ ಪ್ರವಚನವನ್ನು ಏರ್ಪಡಿಸಲಾಯಿತು. ಇದಕ್ಕೆ ಮುಖ್ಯ ಸದಸ್ಯರು ಅವರ ಕುಟುಂಬದವರೆಲ್ಲ ಬರುತ್ತಿದ್ದರು. ಇದಾದ ಸ್ವಲ್ಪ ದಿನದ ಮೇಲೆ ಒಂದು ಗ್ರಂಥಾಲಯವೂ ಶುರುವಾಯಿತು. Life Membership ಕೂಡ ಶುರುವಾಯಿತು. ಅಜೀವ ಸದಸ್ಯತ್ವ ಇದಕ್ಕೆ ಶುಲ್ಕ 50 ರೂಪಾಯಿಗಳಷ್ಟೇ ಇತ್ತು. ಹೀಗೆ ದಿನ ಕಳೆದಂತೆ ಅಸೋಸಿಯೇಷನ್ ದೊಡ್ಡದಾಗುತ್ತ ಬಂತು. ಆಗಿನ ಕಾಲದಲ್ಲಿ ಸುಮಾರು ಸದಸ್ಯರು ಮಾಟುಂಗದಲ್ಲೆ ನೆಲೆಸಿದ್ದರು. ಈಗ ಮುಂಬಯಿನ ಕೋಣೆ ಕೋಣೆಯಲ್ಲಿ ಸದಸ್ಯರಿದ್ದಾರೆ. ಈಚೆಗೆ ಅಸೋಸಿಯೇಷನ್ ಬೃಹದಾಕಾರವಾಗಿ ಬೆಳೆದು ಮುಂಬಯಿಗೆ ಒಂದು ಪ್ರಸಿದ್ಧ ಕನ್ನಡಿಗರ ಸಂಸ್ಥೆಯಾಗಿದೆ. ಈಗಿನ ಚಟುವಟಿಕೆಗಳಲ್ಲಿ ಸ್ತ್ರೀಯರು, ಮಕ್ಕಳೂ ಸಹ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ. ನಮ್ಮ ನಾಡು ಬಿಟ್ಟು ಬಂದರೂ ನಮಗೆ ಅಸೋಸಿಯೇಷನ್ ಸಂಪರ್ಕದಿಂದ ನಮ್ಮ ನಾಡಿನಲ್ಲಿದ್ದ ಹಾಗೇ ಅನ್ನಿಸುತ್ತೆ. ಹೀಗೆ ಹೆಚ್ಚು ಹೆಚ್ಚು ಕನ್ನಡಿಗರು ಸದಸ್ಯರಾಗಿ, ಈ ಅಸೋಸಿಯೇಷನ್ ಇನ್ನೂ ಹೆಚ್ಚು ಪ್ರಬುದ್ಧಮಾನಕ್ಕೆ ಬರಲಿ ಎಂದು ಹಾರೈಸುತ್ತೇನೆ. ●

---



✍ ಮಧುರಾ ಕೃಷ್ಣಸ್ವಾಮಿ


ಈಗ ಎರಡು ತಿಂಗಳ ಹಿಂದೆ ಅನಿರೀಕ್ಷಿತವಾಗಿ ಮೈಸೂರು ಅಸೋಸಿಯೇಷನ್ ಮಾಸಪತ್ರಿಕೆ "ನೇಸರು" ನನ್ನ ಕೈಗೆ ಸಿಕ್ಕಿತು. ಅದರಲ್ಲಿ ನನಗೆ ಅತೀ ಪ್ರಿಯಳಾದ ರೇಖಳ ಎರಡು ಅಂಕಣಗಳನ್ನು ಓದಿ ತುಂಬಾ ಖುಷಿ ಆಯ್ತು. ಹಾಗೇ ಹಾಳೆ ತಿರುವು ಹಾಕಿದಾಗ ಅದರಲ್ಲಿನ ಒಂದು ಪ್ರಕಟಣೆ ಓದಿ ನನ್ನ ಮನಸ್ಸು 52ನೆಯ ಇಸವಿಯ ಬೊಂಬಾಯಿಗೆ ಓಡಿತು.

ನಾನು ಮೊದಲು ಬೊಂಬಾಯಿಗೆ ಹೋಗಿದ್ದು 52ರಲ್ಲಿ. ಅಲ್ಲಿನ ವಾತಾವರಣ, ಶಿಸ್ತು, ಜನರಿಗೆ ಸರ್ಕಾರ ಒದಗಿಸಿದ್ದ ಸೌಕರ್ಯ, ಎಲ್ಲದಕ್ಕಿಂತ ಅಲ್ಲಿನ ರೈಲಿನ ಬಿರುಸಾದ ಓಡಾಟ ಎಲ್ಲಾ ನೋಡಿ ದಿಗ್ಭ್ರಮೆಗೊಳ್ಳುತ್ತಿರುವಾಗಲೇ, ನನಗೆ ಮೈಸೂರು ಅಸೋಸಿಯೇಷನ್ ಸಂಪರ್ಕ, ಪರಿಚಯವಾಯ್ತು. ಯಾರದ್ದೊ ಮನೆಯಲ್ಲಿ ಒಂದು ರೂಮಿನಲ್ಲಿದ್ದ ನಮ್ಮಿಬ್ಬರಿಗೆ ಭಾನುವಾರ ಬಂತೆಂದರೆ ಮಾತುಂಗಾ, ದಾದರ್ ಕಡೆ ಮನೆ ಹುಡುಕುವ ಪರದಾಟ, ಸುತ್ತಾಡಿ, ಸುಸ್ತಾಗಿ ಅಸೋಸಿಯೇಷನ್ ಕಡೆಗೆ ಕಾಲು ಹಾಕಿದಾಗ, ಅಲ್ಲಿನ ವಾತಾವರಣ, ಸ್ನೇಹ, ನಮ್ಮ ಮನೆಗೆ ಹೋದಂತೆ ಆಗುತ್ತಿತ್ತು. ನಮ್ಮಕ್ಕನ ಮಗ ಅಲ್ಲೇ ಬಿಡಾರ ಹೂಡಿದ್ದರಿಂದ ನಮಗೆ ನಿರಾಯಾಸವಾಗಿ ಪುಷ್ಕಳ ಊಟ ದೊರೆಯುತ್ತಿತ್ತು. ಎಲ್ಲರಿಗೂ ಬಾಳೆ ಎಲೆ ಹಾಕಿ, ರುಚಿ, ಶುಚಿಯಾಗಿ, ಹಾಸ್ಯ ಕುಚೋದ್ಯಗಳ ಮಧ್ಯೆ ನಮ್ಮ ಊಟ ಸಾಗುತ್ತಿತ್ತು. ಎಲ್ಲರೂ ಒಂದೇ ಮನೆಯವರಂತೆ ನಡೆದುಕೊಳ್ಳುತ್ತಿದ್ದ ಆ ದಿನಗಳನ್ನು ಮರೆಯುವುದಾದರೂ ಹೇಗೆ?

ಆಗ ಮೈಸೂರು ಅಸೋಸಿಯೇಷನ್ ಪ್ರೆಸಿಡೆಂಟರಾಗಿದ್ದವರು. ಬಿ. ನಾರಾಯಣಸ್ವಾಮಿ. ಪ್ರಸಿದ್ಧ ವಕೀಲರು. ಒಳ್ಳೇ ಠೀವಿಯ ವ್ಯಕ್ತಿ. ದೊಡ್ಡದೊಂದು ಕಾರಿನಲ್ಲಿ ಬಂದಿಳಿದರೆ ಅದೇ ಒಂದು ನೋಟವಾಗುತ್ತಿತ್ತು! ಅಸೋಸಿಯೇಷನ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಲ್ಲರ ಸುಖ–ದುಃಖಗಳಲ್ಲಿ ಭಾಗಿಯಾಗುತ್ತಿದ್ದರು. ಎಲ್ಲರಿಗೂ ಬೇಕಾದವರೇ ಆಗಿದ್ದರು. ಅಸೋಸಿಯೇಷನ್‌ನಲ್ಲಿ ಆಗಾಗ್ಗೆ ನಾಟಕ, ಸಂಗೀತ ಇತರೇ ಕಾರ್ಯಗಳು ನಡೆಯುತ್ತಲೆ ಇದ್ದವು. ನಾವು ಅಲ್ಲಿಗೆ ಹೋದ ಸ್ವಲ್ಪ ದಿನಗಳಲ್ಲೇ ಟಿ.ಪಿ.ಕೈಲಾಸಂ ರವರ "ಬಂಡ್ವಾಳವಿಲ್ಲದ ಬಡಾಯಿ"ಆಡಿಸುವ ಯೋಜನೆ ಎತ್ತಿಕೊಂಡರು. ಅಲ್ಲಿಯವರೆಗೆ ಹೆಣ್ಣಿನ ಪಾತ್ರಗಳನ್ನು ಗಂಡು ಹುಡುಗರೇ ವೇಷ ಹಾಕಿ ಮಾಡುತ್ತಿದ್ದರಂತೆ. ಅದನ್ನು ಬದಲಾಯಿಸಬೇಕೆನ್ನುವ ವಿಚಾರ ಇರುವಾಗಲೇ ಎಲ್ಲರ ಕಣ್ಣಿಗೆ ನಾನು ಬಿದ್ದೆ. ನನಗೂ ಸ್ಕೂಲಿನಲ್ಲಿ ನಾಟಕವಾಡಿ ಅಭ್ಯಾಸವಿತ್ತು. ಎಲ್ಲರ ಒತ್ತಾಯ, ಪ್ರೋತ್ಸಾಹದಲ್ಲಿ ನಾನೂ ಒಪ್ಪಿಕೊಂಡೇ ಬಿಟ್ಟೆ. ಪ್ರತಿ ಸಂಜೆ, ನಮ್ಮವರು ಆಫೀಸಿನಿಂದ ಬಂಡ ಮೇಲೆ ನಾವಿದ್ದ ಕೊಲಾಬಾ ಮೂಲೆಯಿಂದ ಡಬ್ಬಲ್ ಡೆಕ್ಕರ್ ಬಸ್ಸಿನಲ್ಲಿ ಬರುವುದೇ ನನಗೊಂಡು ಮೋಜು. ನಮಗೆ ಅಸೋಸಿಯೇಷನ್ ತಲುಪಿದ್ದೇ ಗೊತ್ತಾಗುತ್ತಿರಲಿಲ್ಲ. ರಾತ್ರಿ 9.30 ತನಕ rehearsal ನಡೀತಿತ್ತು. ನಮ್ಮನ್ನು direct ಮಾಡುತ್ತಿದ್ದವರು ಯಾರೆಂದು ಈಗ ಜ್ಞಾಪಕವಿಲ್ಲ. ಆದರೆ 'ಅಹೋಬ್ಲುಂ" ಪಾತ್ರ ಮಾಡಿದ ಜಯ ಭೀಮರಾವ್ ನೆನಪು ಮಾತ್ರ ಚೆನ್ನಾಗಿದೆ. ಎತ್ತರದ ಗೌರ ವರ್ಣದ ಆಕರ್ಷಕ ಮುಖ. ತುಂಬಾ ಸಲೀಸಾಗಿ

ಅಭಿನಯಿಸುತ್ತಿದ್ದರು. ಆತನ ಪ್ರೋತ್ಸಾಹದಿಂದ ನಾನೂ ಬೇಗಲೇ ಬಗ್ಗಿಕೊಂಡೆ. ಆದರೂ ಆ ನಾಟಕ ನಡೆದ ದಿನ ಇದ್ದ ಭಯ ನೆನೆಸಿಕೊಂಡರೆ ಈಗಲೂ ಹೆದರಿಕೆ ಆಗುತ್ತೆ. ಬಿ. ನಾರಾಯಣಸ್ವಾಮಿಯವರು ನನ್ನ ಮೇಲಿನ ವಿಶ್ವಾಸದಿಂದಲೋ ಏನೋ ನಾಟಕಕ್ಕೆ ಮುಂಚೆಯೇ ಸಭಾಂಗಣದಲ್ಲಿ ನನ್ನ ಗುಣಗಾನ ಮಾಡಿಬಿಟ್ಟರು. ನನಗೋ ಕೈಕಾಲು ನಡುಕ, ನನ್ನ ಜೊತೆ ನಟಿಸಿದ ಎಲ್ಲರ ಪ್ರೋತ್ಸಾಹ, ವಿಶ್ವಾಸದಿಂದ ಆ ದಿನದ ನಾಟಕ ಯಶಸ್ವಿಯಾಗಿ ನಡೆದು, ಭಾರೀ ಕರತಾಡನ ಗಿಟ್ಟಿಸಿಕೊಂಡೆವು. ಹೆಣ್ಣಿನ ಪಾತ್ರದಲ್ಲೇ ಹೆಣ್ಣೇ ಪಾತ್ರ ವಹಿಸಿದ ಹೆಗ್ಗಳಿಕೆ ನನ್ನದಾಯಿತು. ಇದನ್ನು ನಾನು ಎಂದಿಗೂ ಮರೆಯಲಾರೆ. ಬಿ.ನಾರಾಯಣಸ್ವಾಮಿ ಸ್ಟೇಜಿನ ಹಿಂಭಾಗಕ್ಕೆ ಬಂದು ನನ್ನ ಅಭಿನಂದಿಸಿ ಮನೆಗೆ ಕರೆದುಕೊಂಡು ಹೋಗಿ ತಮ್ಮ ಹೆಂಡತಿಗೆ ಹೇಳಿ ನನಗೆ ದೃಷ್ಟಿ ತೆಗೆಸಿದರು! ಅವರ ಮಮತೆಗೆ ನಿಜವಾಗಿ ಕರಗಿ ಹೋದೆ ನಾನು.

ಮತ್ತೊಂದು ನಾಟಕಕ್ಕೆ ಅಣಿಯಾಗುತ್ತಿರುವಾಗಲೇ ನಾನು ಟೈಫಾಯಿಡ್ ಆಗಿ ಮಲಗಿದೆ. ನಾನು ಪೂರ್ತಿ ಚೇತರಿಸಿಕೊಂಡ ಮೇಲೆ (ಆ ವೇಳೆಗೆ ನಾವು ಖಾರ್‌ನಲ್ಲಿ ಮನೆ ಮಾಡಿದ್ದೆವು). ನನಗೆ rehearsalಗೆ ಬರಲು ಬಿ. ನಾರಾಯಣ ಸ್ವಾಮಿಯವರ ಕಾರೇ ಬರುತ್ತಿತ್ತು. ದೇವರ ದಯೆಯಿಂದ ಆ ನಾಟಕವೂ ಯಶಸ್ವಿಯಾಯಿತು. ಆ ವೇಳೆಗಾಗಲೇ ಹಲವಾರು ಮಹಿಳೆಯರು ತಾವೂ ಪಾತ್ರವಹಿಸುವುದಾಗಿ ಮುಂದೆ ಬರತೊಡಗಿದರು. ನಾವು ಬೊಂಬಾಯಿ 56 ರಲ್ಲಿ ಬಿಟ್ಟಾಗ ಮೈಸೂರು ಅಸೋಸಿಯೇಷನ್ ಸಾಂಗತ್ಯ ಬಿಟ್ಟು ಹೋಗಲು ತುಂಬಾ ಕಷ್ಟವಾಯ್ತು. ಎಲ್ಲರೂ ಪ್ರೀತ್ಯಾದರದಿಂದ ಬೀಳ್ಕೊಟ್ಟರು. ಈಗಿನ ಕಟ್ಟಡ, ಅಲ್ಲಿನ ಚಟುವಟಿಕೆಗಳನ್ನೆಲ್ಲ ಕೇಳಿದರೆ ನಮ್ಮದು ಬರೀ ಸಪ್ಪೆ ಅನ್ನಿಸಿದರೂ, ಅನುಭವಿಸಿದ ನನಗಂತೂ ಎಂದೆಂದಿಗೂ ಮರೆಯಲಾರದಂತ 'ಸವಿನೆನಪು' ಉಳಿದಿದೆ. ●



✍ ಟಿ.ಆರ್.ಎಸ್.ಆನಂದ್

ನಾನು 1944ರಲ್ಲಿ ಅಸೋಸಿಯೇಷನ್ನಿಗೆ ಸದಸ್ಯನಾಗಿದ್ದೆ. ನಮ್ಮ ಮನೆ ಮಾಟುಂಗದಲ್ಲೆ ಇದ್ದುದರಿಂದ ಪ್ರತಿ ನಿತ್ಯವೂ ಅಲ್ಲಿಗೆ ಹೋಗಲು ಅನುಕೂಲವಾಗುತ್ತಿತ್ತು. ನನ್ನ ಹಾಗೆ ಬಹಳ ಜನ ಸದಸ್ಯರು ಸಾಯಂಕಾಲದ ಹೊತ್ತು ಅಲ್ಲಿ ಸೇರುತ್ತಿದ್ದರು. ಎಲ್ಲರೂ ಸುಮಾರು ಮಾಟುಂಗ ಸುತ್ತ ಮುತ್ತಲಲ್ಲೆ ನಿವಾಸ ಮಾಡುತ್ತಿದ್ದುದರಿಂದ, ಅಸೋಸಿಯೇಷ ನ್ನಿನಲ್ಲಿ ಸೇರಲು ಅನುಕೂಲವಾಗುತ್ತಿತ್ತು. ಶನಿವಾರ, ಭಾನುವಾರ ಅಥವಾ ರಜಾ ದಿನಗಳಲ್ಲಿ ಇನ್ನೂ ಹೆಚ್ಚು ಸದಸ್ಯರು ಸೇರುತ್ತಿದ್ದರು. ಎಷ್ಟು ಕುರ್ಚಿಗಳಿದ್ದರೂ ಕಡಿಮೆ ಅನ್ನಿಸುತ್ತಿತ್ತು. ಅಸೋಸಿಯೇಷನ್ ಕಟ್ಟಡದ ಮುಂದೆ ಇದ್ದ, ಹುಲ್ಲಿನ ಮೇಲೆ ಸಹ ಜನಗಳು ಕುಳಿತುಕೊಳ್ಳುತ್ತಿದ್ದರು. ಅದಲ್ಲದೆ ಊಟದ ಮೆಸ್ಸು ಬೇರೆ ಇತ್ತು. ರಾತ್ರಿ ಹೊತ್ತು ಸುಮಾರು 60–70 ಜನ ಊಟಕ್ಕೆ ಬರುತ್ತಿದ್ದರು. ಒಂದು ಊಟದ ಬೆಲೆ ಸುಮಾರು 1 ರೂ. ಇಂದ 2 ರೂಪಾಯಿವರೆಗೆ ಇತ್ತು. ಊಟ ಚೆನ್ನಾಗಿರುತ್ತಿತ್ತು. ಜನಗಳಿಗೆ ಅದೇ ಒಂದು ಆಕರ್ಷಣೆ ಆಗಿತ್ತು.


ನಾನು ಸದಸ್ಯನಾಗಿ ಸ್ವಲ್ಪ ದಿನಗಳಾದ ಮೇಲೆ ಕಾರ್ಯಕಾರಿ ಸಮಿತಿಯಲ್ಲಿ ಸೇರಿದೆ. ಪ್ರತಿಯೊಂದು ವಿಭಾಗ, ಅಂದರೆ ಸ್ಪೋರ್ಟ್ಸ್, ಸಾಂಸ್ಕೃತಿಕ, ಗ್ರಂಥಾಲಯ, ಎಲ್ಲದಕ್ಕೂ ಬೇರೆ ಬೇರೆ ಕಾರ್ಯಕಾರಿ ಸಮಿತಿ ಮಾಡಿಕೊಂಡಿದ್ದೆವು. ಆಯಾ ವಿಭಾಗದ ಸಮಿತಿಯವರು ಆಯಾ ವಿಭಾಗದ ಕಾರ್ಯಗಳನ್ನು ನಡೆಸುತ್ತಿದ್ದರು. ಆಗ ಅಸೋಸಿಯೇಷನ್ ಕಟ್ಟಡ ಮೊದಲನೆಯ ಮಹಡಿಯವರೆಗೆ ಇತ್ತು. ಈ ಮಹಡಿಯಲ್ಲಿ ಒಂದು ದೊಡ್ಡ ಹಾಲ್ ಇತ್ತು. ಅಲ್ಲೇ ಎಲ್ಲ ಕಾರ್ಯಕ್ರಮಗಳು ನಡೆಯುತ್ತಿದ್ದವು. ಪ್ರತಿ ತಿಂಗಳು ಬಿಟ್ಟು ತಿಂಗಳು ಸದಸ್ಯರಿಗೋಸ್ಕರ ಏನಾದರೊಂದು ನಾಟಕದ ಕಾರ್ಯಕ್ರಮ ಇಡುತ್ತಿದ್ದೆವು. ತುಂಬ ಸದಸ್ಯರಿದ್ದುದರಿಂದ ಹಾಲ್‌ನಲ್ಲಿ ಎಲ್ಲರಿಗೂ ಸದಸ್ಯರಿದ್ದುದರಿಂದ ಹಾಲ್‌ನಲ್ಲಿ ಎಲ್ಲರಿಗೂ ಜಾಗವಿರುತ್ತಿರಲಿಲ್ಲ. ಹೀಗಾಗಿ ಅದೇ ನಾಟಕ ಎರಡು ದಿನ ನಡೆಸಿ ಎಲ್ಲರಿಗೂ ನೋಡುವ ಅವಕಾಶವಿರುತ್ತಿತ್ತು.

ನಾನು ಕಾರ್ಯಕಾರಿ ಸಮಿತಿಯಲ್ಲಿ ಸುಮಾರು 13–14 ಗಳವರೆಗೂ ಕೆಲಸ ಮಾಡಿದೆ. ದಿವಂಗತ ಶ್ರೀ. ಬಿ. ನಾರಾಯಣ ಸ್ವಾಮಿಯವರು ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದಾಗ, ನಾನು ಸೆಕ್ರೆಟರಿಯಾಗಿದ್ದೆ. ಅವರ ಅಧ್ಯಕ್ಷತೆಯಲ್ಲೇ, ಮೊಟ್ಟ ಮೊದಲು ಗಣಪತಿಯ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಎಲ್ಲ ಸದಸ್ಯರು ಸೇರುತ್ತಿದ್ದರು. ವಿಸರ್ಜನೆಯ ದಿವಸವಂತೂ ನೂರರ ಇನ್ನೂರಕ್ಕೂ ಹೆಚ್ಚು ಸದಸ್ಯರು ಸೇರುತ್ತಿದ್ದರು. ಎಲ್ಲರನ್ನೂ ಬಸ್ಸು, ವ್ಯಾನು ಇತ್ಯಾದಿಗಳಲ್ಲಿ ವಿಸರ್ಜನೆಗೋಸ್ಕರ ಗಣಪತಿಯ ಜೊತೆಯಲಿ ಶಿವಾಜಿ ಪಾರ್ಕ್ ಬೀಚ್‌ಗೆ ಕರೆದುಕೊಂಡು ಹೋಗುತ್ತಿದ್ದೆವು. ವಿಸರ್ಜನೆಯ ನಂತರ ಬೀಚ್‌ಗೆ ಕರೆದುಕೊಂಡು ಹೋಗುತ್ತಿದ್ದೆವು. ವಿಸರ್ಜನೆಯ ನಂತರ ಬೀಚ್‌ನಲ್ಲೇ ಎಲ್ಲರಿಗೆ ಪ್ರಸಾದ (ಅಂದರೆ ರುಚಿಯಾದ ಊಟ) ವಿನಿಯೋಗ ಆಗುತ್ತಿತ್ತು. ಹೀಗೆಯೇ ಉತ್ಸವದ ಜೊತೆಗೆ ಸದಸ್ಯರಿಗೆ ಒಂದು ಪಿಕ್‌ನಿಕ್ ತರಹ ಇರುತ್ತಿತ್ತು. ವರ್ಷಕ್ಕೊಮ್ಮೆ ಸರಿ ಪಬ್ಲಿಕ್‌ಗಾಗಿ ನಾಟಕ ಮಾಡುತ್ತಿದ್ದೆವು. ಇದು ಯಾವುದಾದರೂ ದೊಡ್ಡ ರಂಗ ಮಂದಿರದಲ್ಲಿ ನಡೆಯುತ್ತಿತ್ತು. ಇದಕ್ಕೆ ಟಿಕೆಟ್ ಇಟ್ಟಿರುತ್ತಿದ್ದೆವು. ಹೊರಗಡೆಯ ಜನರು ಬಂದು ನೋಡುತ್ತಿದ್ದರು. ಇದರಲ್ಲಿ ಬಂದ ದುಡ್ಡನ್ನು ಅಸೋಸಿಯೇಷನ್ ಖರ್ಚು ವೆಚ್ಚಕ್ಕೆ ಉಪಯೋಗಿಸಿಕೊಳ್ಳುತ್ತಿದ್ದೆವು.

ಆಟದ ವಿಭಾಗದಲ್ಲೂ ಬಹಳಷ್ಟು ಕಾರ್ಯಕ್ರಮಗಳು ನಡೆಯುತ್ತಿತ್ತು. ಟೇಬಲ್ ಟೆನ್ನಿಸ್, ಬಾಸ್ಕೆಟ್ ಬಾಲ್, ಬಿಲ್ಯಾರ್ಡ್ಸ್ ಮುಂತಾದ ಆಟಗಳಾಡುತ್ತಿದ್ದೆವು. ಅದಲ್ಲದೆ ಓಪನ್ ಟೋರ್ನ್‌ಮೆಂಟ್ಸ್‌ಗಳನ್ನು ನಡೆಸುತ್ತಿದ್ದೆವು. ಬೇರೆಯವರು ಇದರಲ್ಲಿ ಭಾಗವಹಿಸಬಹುದಿತ್ತು. ಪ್ರತಿ ವರ್ಷ ಸದಸ್ಯರಿಗೆ ಫ್ಯಾನ್ಸಿ ಡ್ರೆಸ್, ಟಾಲೆಂಟ್ಸ್ ಕಾಂಪಿಟೇಷನ್, ಹಾಗೂ Annual sport ನಡೆಸುತ್ತಿದ್ದೆವು. ಇದರಲ್ಲಿ ಹೆಂಗಸರು, ಮಕ್ಕಳು ಎಲ್ಲರೂ ಭಾಗವಹಿಸುತ್ತಿದ್ದರು.

ನಾನು ಸಹ ಬೇಕಾದಷ್ಟು ನಾಟಕಗಳಲಿ ಹೆಣ್ಣು, ಗಂಡು ಎಲ್ಲಾ ತರಹದ ಪಾತ್ರಗಳನ್ನು ಮಾಡಿದ್ದೆ. ಅದಲ್ಲದೆ ಕೆಲವು ನಾಟಕಗಳಿಂದ ನಿರ್ದೇಶನ ಸಹ ಮಾಡಿದ್ದೆ. ಒಟ್ಟಿನಲ್ಲಿ ಈ ಅಸೋಸಿಯೇಷನಿಂಡ ನಾವು ಕನ್ನಡಿಗರೆಲ್ಲ ಸೇರಲು ಒಳ್ಳೇಯ ಅವಕಾಶವಿತ್ತು. ಈಗ ಅಸೋಸಿಯೇಷನ್ ಬಹಳ ದೊಡ್ಡವಾಗಿ ಬೆಳೆದಿದೆ. ಆದರೆ ಸಾಯಂಕಾಲದಲ್ಲಿ ಯಾರು ಸದಸ್ಯರು ಕಾಣುವುದಿಲ್ಲ. ಈ ಕಾಲದಲ್ಲಿ ಎಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲೆ ಬಿಜಿಯಾಗಿರುತ್ತಾರೆ. ಅದಲ್ಲದೆ ಈಗ ಎಲ್ಲರೂ ತುಂಬ ದೂರದ ಠಾಣಗಳಿಂದ ಬರಬೇಕಾದರೆ ತೊಂದರೆಯೂ ಇದೆ. ಇದೆಲ್ಲ ನೋಡಿದರೆ ನಮ್ಮ ಕಾಲದಲ್ಲೇ ಚೆನ್ನಾಗಿತ್ತು ಅನ್ನಿಸುತ್ತೆ. ■

**ಡಾ. ಶಿವರಾಮ ಕಾರಂತರು 1984ರಲ್ಲಿ ಅಸೋಸಿಯೇಷನ್‌ಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ.**





✍ ಸೀತಮ್ಮ ಆರ್. ರಾವ್

ಸಸಿಯಾಗಿ, ಗಿಡವಾಗಿ ವಿವಿಧ ಸಾಂಸ್ಕೃತಿಕ ಹಾಗೂ ಇತರೆ ಸಾಮಾಜಿಕ ಚಟುವಟಿಕೆಗಳ ಮತ್ತು ಇತರೆ ಕಾರ್ಯ ಕಲಾಪಗಳ ಕೊಂಬೆಗಳನ್ನೊಳಗೊಂಡು, ಬೃಹದಾಕಾರದ ಮರವಾಗಿ ಬೆಳೆದು, ತಲೆಯೆತ್ತಿ ನಿಂತಿರುವ, ಮುಂಬೈ ಕನ್ನಡಿಗರ ಹೆಮ್ಮೆಯ ಮೈಸೂರು ಅಸೋಸಿಯೇಷನ್, ಅದರ ಹುಟ್ಟು, ಬೆಳವಣಿಗೆ ಮತ್ತು ತನ್ನದೇ ಆದ, ಸ್ವಂತ ಕಟ್ಟಡದ ನಿರ್ಮಾಣ ಯಾವಾಗಾಯ್ತು. ಹೇಗಾಯ್ತು, ಮತ್ತು ಅದಕ್ಕಾಗಿ ಕಾರಣ ಕರ್ತೃಗಳು ಯಾರ್ಯಾರು, ಮತ್ತು ಸಹಕಾರ ಸಹಾಯ ನೀಡಿದ ಮಾನ್ಯ ಮಹನೀಯರುಗಳು ಯಾರ್ಯಾರು, ಅವರುಗಳ ಕಾಲದಲ್ಲಿ ನಡೆಯುತ್ತಿದ್ದಂಥಾ ಕಾರ್ಯಕಲಾಪಗಳು ಅಂಫ್ಲೆ, ಆಟ, ಊಟ, ನೋಟ ಇದೆಲ್ಲಾ ಹೇಗೆ ನಡಿತಾ ಇತ್ತು, ಇದೆಲ್ಲಾ ಈಗಾಗ್ಲೆ ಮಾನ್ಯ ಮಹನೀಯರುಗಳಾದ ಶ್ರೀಮಾನ್ ಕೇಶವ ಮೂರ್ತಿ, ಶ್ರೀಮಾನ್ ಗೋಪಾಲಯ್ಯ ಇವರುಗಳು ತಾವುಗಳು ಮಾಡಿದ್ದ ಕೆಲಸ ಮತ್ತು ತಮ್ಮಗಳ ಅನುಭವದ ಸವಿನೆನಪನ್ನು 'ನೇಸರು'ವಿನ ಓದುಗರಿಗೆ ತಿಳಿಸಿದ್ದಾರಲ್ಲದೆ, ಶ್ರೀಮಾನ್ ಆನಂದಂ, ಮತ್ತು ಶ್ರೀಮತಿ ಮಧುರ ಕೃಷ್ಣಸ್ವಾಮಿಯವರೂ ಸಹ, ತಮ್ಮಗಳ ಸವಿನೆನಪುಗಳ ತಿಳಿಸಿದ್ದಾರೆ.

ನಾವು ಮುಂಬಯಿಗೆ ನೆಲೆಸಲು ಬಂದ ಹೊಸದ್ರಲ್ಲಿ, ಮೊದ್ಲು ದಾದರ್‌ನಲ್ಲಿದ್ದೆವು. ನಂತರ ಮಾತುಂಗ ಬಡಾವಣೆಗೆ ಬಂದೆವು. ಅಲ್ಲಿಗೆ ಬಂದ್ಮೇಲೆ ನನ್ನ ಯಜಮಾನ್ರು ಅಸೋಸಿಯೇಷನ್ ಸದಸ್ಯರಾಗಿ ಆಗಾಗ್ಯೆ card ಆಡಲು ಅಲ್ಲಿ ಹೋಗ್ತಾ ಇದ್ದದ್ದರಿಂದ, ಅಲ್ಲಿಯ ಸಮಾಚಾರಗಳು, ಮತ್ತು ಅಲ್ಲಿಯ ಕಾರ್ಯಕಲಾಪಗಳಾಗಿದ್ದ ಆಟ, ಊಟ, ನೋಟ ಎಲ್ಲಾ ಅವರಿಂದ ತಿಳಿತಿತ್ತು. ನಾನು ಅಲ್ಲಿ ನಡೆಯುತ್ತಿದ್ದ, ಯಾವುದೇ ಕಾರ್ಯಕ್ರಮಕ್ಕೆ ಹೋಗ್ದೇ ಇದ್ರೂ, ಅಸೋಸಿಯೇಷನ್ನಿನ ಆಗಿನವರಾದ ಬಿ.ಜಿ.ಆಚಾರ್ಯ, ಬಿ.ನಾರಾಯಣಸ್ವಾಮಿ, ಆರ್.ವೆಂಕಟೇಶಮೂರ್ತಿ ಮತ್ತು ಮಾಗಲ್ ಇವರುಗಳು ಆಡ್ತಾ ಇದ್ದ ನಾಟ್ಕಗಳನ್ನು ಮಾತ್ರ, ಮಿಸ್ ಮಾಡ್ಕೊತಾ ಇರಲಿಲ್ಲ. ಆಗ ಅವರುಗಳ ನಾಟ್ಕ ಆಗ್ತಾ ಇದ್ದದ್ದು, ನಪ್ಪು ಹಾಲ್‌ನಲ್ಲಿ ಮತ್ತು ಪರೇಲ್ ದಾಮೋದರ್ ಹಾಲ್‌ನಲ್ಲಿ.

ನಂತರ ಜಯಭೀಮ್ ರಾವ್, ಸುಬ್ ನರಸಿಂಹಯ, ದಿವಂಗತ ಪುಟ್ಟಣಯ್ಯ, ರಾಮಚಂದ್ರ ರಾವ್ (ಎಂ.ಎನ್) ಎಂ.ಎನ್. ಶಂಕರನಾರಾಯಣ ರಾವ್, ಸುಬ್ಬ ರಾವ್, ಲಕ್ಷ್ಮೀರಮಣ, ವಿ.ಕೆ.ಮೂರ್ತಿ(ಕುಟ್ಟಿ), ದಿವಂಗತ ದುಗ್ಗಪ್ಪಯ್ಯ, ಇವರೆಲ್ಲಾ ಅಂದಿನ ದಿನಗಳಲ್ಲಿ ನಾಟಕ ಆಡೋದ್ರಲ್ಲಿ ಮಾಡೋದ್ರಲ್ಲಿ ಹೆಸರುವಾಸಿಯಾಗಿದ್ರು. ಕ್ರಮೇಣ ಲಲಿತ ಕಲಾ ವಿಭಾಗ ಸ್ಥಾಪಿತವಾಯ್ತು. ಮೇಲೆ ಕೊಟ್ಟಿರುವ ಹೆಸರಿನವರೆಲ್ಲಾ ಅದರ ಸದಸ್ಯರಾಗಿದ್ದು, ಮತ್ತು ನಾಟಕ ಆಡಲು ಸಲಕರಣೆಗಳನ್ನೊಳಗೊಂಡ ಸ್ಟೇಜನ್ನೂ ಸಿದ್ಧ ಮಾಡಿಕೊಂಡ್ರು. ಆಗ ಈಗಿನಂತೆ ಬೆಳಕಿನ ಸಂಯೋಜನೆ ಅಂದ್ರೆ, Spot Light, Dimmer, Flash Back, ಹಿನ್ನೆಲೆ ಮುನ್ನೆಲೆ Technique ಇದ್ಯಾವುದರ ಅನುಕೂಲ ಅಷ್ಟಾಗಿ ಇಲ್ದೇ ಇದ್ರೂ, ನಾಟ್ಕಗಳು ಯಶಸ್ವಿಯಾಗ್ತಾ ಇತ್ತು. ಮತ್ತು ಎಲ್ಲರ ಮೆಚ್ಚಿಕೆಯನ್ನೂ ಪಡೀತಿತ್ತು. ಆಗ ಹೆಣ್ಣಿನ ಪಾತ್ರ ಮಾಡಲು, ಹೆಂಗಸ್ರು ಯಾರೂ ಮುಂದೆ ಬರದೇ ಇದ್ದದ್ದರಿಂದ ಸುಬ್ರಾವ್ ಮತ್ತು ಲಕ್ಷ್ಮೀರಮಣ, ಹೆಣ್ಣಿನ ಪಾತ್ರಕ್ಕೆ ಮೀಸಲಾಗಿದ್ರು. ಅವರಿಗೆ ಚೆನ್ನಾಗಿ ಒಪ್ತಾನೂ ಇತ್ತು. ಸಹಜವಾಗಿ ಅಭಿನಯಿಸುತ್ತಿದ್ರು. ಅಸೋಸಿಯೇಷನ್ ಅಲ್ಲದೆ, ಕವಾಸ್ಜಿ ಜಹಂಗೀರ್ ಹಾಲ್, ಮೊದಾರ್ ಕಾಲೇಜು ಅಲ್ಲೆಲ್ಲಾ ಆಡ್ತಾ ಇದ್ರು. ಅಸೋಸಿಯೇಷನ್ ಇತರ ಕಾರ್ಯಕ್ರಮಗಳಿಗಿಂತ ನಾಟ್ಕಗಳಿಗೇ ಪ್ರಾಮುಖ್ಯತೆ ಅಂದಿಗೂ ಇತ್ತು ಮತ್ತು ಇಂದಿಗೂಇದೆ. ನಾಟ್ಕ ಅಸೋಸಿಯೇಷನ್ನಿನ ಒಂದು ಅಂಗ ಅಂತ ಹೇಳಬಹುದು.

ಸ್ವರ್ಣಗೌರಿ ಮತ್ತು ಗಣಪತಿಯನ್ನು (ಭಾದ್ರಪದ ಮಾಸದ) ಅಸೋಸಿಯೇಷನ್ ಅಂಗಣಕ್ಕೆ ಬರ ಮಾಡಿಕೊಂಡು, ಪೂಜೆ ನಡೆಸುವ ಏರ್ಪಾಡಾಗಿದೆಂತ ತಿಳಿದು ಬಂದದ್ರಿಂದ ಪೂಜೆಯಲ್ಲಿ ಪಾಲ್ಗೊಳ್ಳಲು ಹೋಗಿದೆ. ಅದೇ ಮೊದ್ಲು ನಾನು ಅಸೋಸಿಯೇಷನ್‌ಗೆ ಕಾಲಿಟ್ಟಿದ್ದು. ಸ್ವರ್ಣ ಗೌರಿ ಮತ್ತು ಗಣಪತಿ ಪೂಜೆ, ಪ್ರತಿ ವರ್ಷ ನಡೆಯುವಂತೆ ನಾಂದಿ ಹಾಕಿದವರು, ಅಸೋಸಿಯೇಷನ್ ಸ್ಥಾಪಕರಲ್ಲೊಬ್ಬರಾಗಿದ್ದ, ದಿವಾನ್ ಬಹದ್ದೂರ್ ರಾಮಸ್ವಾಮಯ್ಯನವರು ಮತ್ತು ಅವರ ಪತ್ನಿ ಕಮಲಮ್ಮನವರು.

ಅವರ ಕಾಲದಲ್ಲಿ ಆಡಂಬರವಿಲ್ಲದ ಪೂಜೆ ನಡಿತಾ ಇತ್ತು. ನಂತರ ಬಿ.ನಾರಾಯಣಸ್ವಾಮಿಗಳು ಅಧ್ಯಕ್ಷರಾಗಿ ಬಂದ ಮೇಲೆ ತುಂಬಾ ಅದ್ದೂರಿಯಾಗಿ ವಿಜೃಂಭಣೆಯಿಂದ ನಡೆಸ್ತಾ ಇದ್ರು. ಏಳು ದಿನ ಗೌರಮ್ಮ ಗಣಪತಿಯನ್ನು ಇಟ್ಟೀರುತ್ತಿದ್ದು, ಪ್ರತಿ ದಿನ ಸಂಗೀತ, ನೃತ್ಯ, ನಾಟ್ಕಗಳ ಸೇವೆ ನಡೆಯುತ್ತಿತ್ತು. ಗೌರಮ್ಮ ಗಣಪತಿಯ ವಿಸರ್ಜನೆಯ ದಿನದ ವೈಭವವನ್ನು, ಶ್ರೀಮಾನ್ ಆನಂದಂ ಜುಲೈ ತಿಂಗಳ 'ನೇಸರು'ವಿನಲ್ಲಿ ವರ್ಣಿಸಿದ್ದಾರೆ. ಇಂದಿನವರೂ ಅಷ್ಟೇ ವಿಜೃಂಭಣೆಯಿಂದ ನಡೆಸ್ತಾ ಇದ್ದಾರೆ. ಆಚರಣೆಯಲ್ಲಿಯೂ ಅಷ್ಟಾಗಿ ವ್ಯತ್ಯಾಸ ಕಂಡುಬರಲ್ಲ, ಅದರ ಆಡಂಬರ ಅಬ್ಬರದಲ್ಲಿ ಸ್ವಲ್ಪ ವ್ಯತ್ಯಾಸ ಇದೆಯೇನೋ ಅಂತ ಅನ್ನಿಸುತ್ತೆ. ಆವಾಗೆಲ್ಲಾ ಪೂಜೆಗೆ ಮಹತ್ವ ಜಾಸ್ತಿ ಕೊಡ್ತಾ ಇದ್ರು. ಕಾಲಕ್ಕೆ ತಕ್ಕಂತೆ ಇರಬೇಕಾದ್ದು ಸಹಜವೆ ಇದೆ. ಅಲ್ವ? ಕಾಲಾಯ ತಸ್ಮೈ ನಮಃ Generation gap.

ಮತ್ತೆ ನಾನು ಅಸೋಸಿಯೇಷನ್‌ಗೆ ಹೋಗಿದ್ದು ಅದರ ಬೆಳ್ಳಿಹಬ್ಬಕ್ಕೆ. ಆಗ ಜೆ.ಎನ್.ಅಯ್ಯರ್ ಅಧ್ಯಕ್ಷರಾಗಿದ್ರು. ಹಿಂದಿನ ನಮ್ಮ ಮೈಸೂರು ಮಹಾರಾಜರಾಗಿದ್ದ, ಜಯಚಾಮ ರಾಜೇಂದ್ರ ಒಡೆಯರ್‌ನ ಕರೆಸಿದ್ರು. ಆಗಿನ ಕಾರ್ಯಕ್ರಮಗಳು, ಅಸೋಸಿಯೇಷನ್‌ಗೆ ಮಾಡಿದ್ದ ತಳಿರು ತೋರಣಗಳ ಸಿಂಗಾರ ಮತ್ತು ದೀಪಾಲಂಕಾರ ಕಣ್ಣು ತುಂಬುವ ನೋಟವಾಗಿತ್ತು. ಒಳ್ಳೇ ಸಂಭ್ರಮದಿಂದ ಬೆಳ್ಳಿ ಹಬ್ಬ ನಡಿತು. ಕಣ್ಣಿಗೆ ರಸದೌತಣವಾಗಿದ್ದು, ಅಂದಿನ ಅಡಿಗೆ ರಾಮಣ್ಣನ ಅಡಿಗೆ ರುಚಿ, ಬಾಯಿಗೂ ರಸದೌತಣವಾಗಿತ್ತು.

ಸಯಾನ್‌ಗೆ ಬಂದ ಮೇಲೆ, ನಾನೂ ಅಸೋಸಿಯೇಷನ್ ಸದಸ್ಯೆಯಾಗಬೇಕು, ಅಲ್ಲಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಅನ್ನೋ ಆಸಕ್ತಿ ಹುಟ್ಟಿತು. ಮತ್ತು ಆಗ ಅಸೋಸಿಯೇಷನ್ ಸದಸ್ಯೆಯರುಗಳಾಗಿದ್ದ ಕೆಲವರ, ಪ್ರೋತ್ಸಾಹವೂ ಸಿಕ್ಕಿದ್ದರಿಂದ ನಾನು ಸದಸ್ಯಳಾದೆ. ಆಗ ಅಸೋಸಿಯೇಷನ್‌ನಲ್ಲಿ ಸುಮಾರು 160 ಮಹಿಳಾ ಸದಸ್ಯರುಗಳಿದ್ರು. ಅವರುಗಳ ಕಾರ್ಯಕ್ರಮಗಳು ಜೋರಾಗಿ ನಡೀತಾ ಇತ್ತು. ಸಂಗೀತ ಸಾಹಿತ್ಯಗಳಲ್ಲದೆ (ಒಮ್ಮೆ ನಾನು conduct ಮಾಡಿದ್ದ ಒಂದು Orchestra ಆಯ್ತು. ಅಸೋಸಿಯೇಷನ್‌ನಲ್ಲಿ ನಡದ ನನ್ನ ಮೊದಲನೆಯ ಕಾರ್ಯಕ್ರಮ ಅದು) ಮಹಿಳೆಯರೇ ನಾಟ್ಕಗಳನ್ನು ಆಡ್ತಾ ಇದ್ರು. ಶ್ರೀಮತಿ ಶಾರದಮ್ಮ ಎನ್. ಅವರು ಸಹ ಒಂದೆರಡು ನಾಟ್ಕಗಳಲ್ಲಿ ಅಭಿನಯಿಸಿದ್ರು, ಚೆನ್ನಾಗಿ ಮಾಡಿದ್ರು. ಕ್ರಮೇಣ ಕೆಲವು ಮಹಿಳೆಯರು, ಲಲಿತ ಕಲಾ ವಿಭಾಗದವರು ಆಡ್ತಾ ಇದ್ದ ನಾಟ್ಕಗಳಲ್ಲೂ, ಭಾಗವಹಿಸಿ ಅಭಿನಯಿಸಲು ಮುಂದೆ ಬಂದ್ರು. ಅದಕ್ಕೆಲ್ಲ ಮೇಲ್ ಪಂಕ್ತಿ ಹಾಕಿ ಕೊಟ್ಟವರು, ಕೈಲಾಂಸಂರವರ "ಬಂಡಾವಾಳವಿಲ್ಲದ ಬಡಾಯ್"ನಲ್ಲಿ ಜಯಭೀಮ್ ರಾವ್ ಜೊತೆ ಅಭಿನಯಿಸಿದ್ದ, ಮಧುರ ಕೃಷ್ಣಸ್ವಾಮಿಯಯವರು. ನಂತರ ಲಕ್ಷ್ಮಿಸ್ವಾಮಿ, ಹಾಗೆ ಒಬ್ಬೊಬ್ಬರಾಗಿ ಗಂಡಸ್ರ ಜೊತೆ ಅಭಿನಯಿಸಲು ರಂಗಭೂಮಿಗೆ ಕಾಲಿಟ್ರು.

ಕ್ರಮೇಣ ಕಾರ್ಯಕಾರಿ ಸಮಿತಿಯೊಂದಿಗೆ, ಮಹಿಳಾ ವಿಭಾಗ ಸ್ಥಾಪಿತವಾಯ್ತು. ಅಧ್ಯಕ್ಷೆಯ ಸ್ಥಾನಕ್ಕೆ, ದಿವಂಗತ ವೈದೇಹಿ ಚಾರ್ (ಶ್ರೀಮತಿ ಆರ್.ಡಿ.ಚಾರ್) ಆಯ್ಕೆಯಾಗಿ ಬಂದ್ರು. ಮಹಿಳೆಯರ ಇತರೆ ಚಟುವಟಿಕೆಗಳ ಜೊತೆಗೆ, ಕುಶಲ ಕಲೆಗಳನ್ನು ಕಲಿಯುವ ಏರ್ಪಾಡಾಯ್ತು. ಬೆತ್ತದ ಹೆಣಿಕೆಯಿಂದ, ವಿಧ ವಿಧವಾದ ಸುಂದರ ವಸ್ತುಗಳನ್ನು ಮಾಡುವುದು, ಕ್ರೇಪ್ ಪೇಪರ್‌ನಿಂದ ಮತ್ತು ಇತರೆ ಮಾಧ್ಯಮಗಳಿಂದ, ನಾನಾತರ ಹೂಗಳನ್ನು ಮಾಡುವುದು, ಬೊಂಬೆಗಳನ್ನು ಮಾಡುವುದು, ಕಸದಿಂದ ರಸಾಂತಾರಲ್ಲ ಹಾಗೆ, ವೇಸ್ಟ್ ಮೆಟೀರಿಯಲ್‌ನಿಂದ ನಾನಾತರದ ವಸ್ತುಗಳನ್ನು ತಯಾರಿಸುವುದು, ಕಪ್ಪೆ ಚಿಪ್ಪಿನಿಂದ, ಮರುಗಪಚ್ಚೆತೆನೆ ಇಂದ ಹಿಡಿದು, ಹೂಗಳು ಮತ್ತು ಬೊಂಬೆಗಳನ್ನು ಜೋಡಿಸುವುದು (ಆಗ ಮಹಿಳಾ ವಿಭಗದ ಸದಸ್ಯೆಯಾಗಿದ್ದ ದಿವಂಗತ ಸರೋಜಮ್ಮ ವಿ. ಮತ್ತು ಶಾರದಮ್ಮ ಎನ್. ಇವರಿಬ್ಬರೂ ಕಪ್ಪೆ ಚಿಪ್ಪಿನಿಂದ ಅನೇಕ ತರಹ ವಸ್ತುಗಳನ್ನು ಜೋಡಿಸುವುದರಲ್ಲಿ ತುಂಬಾ ಜಾಣ್ಮೆಯುಳ್ಳವರೆನಿಸಿದ್ರು). ಇದನ್ನೆಲ್ಲ ಕಲಿಯಲು, ಅಸೋಸಿಯೇಷನ್ ಮಹಿಳೆಯರು ಉತ್ಸುಕರಾಗಿ ಬರುತ್ತಿದ್ರು. ವೈದೇಹಿ ಚಾರ್‌ರವರ ಕಾಲದಲ್ಲಿ, ಇದೆಲ್ಲಕ್ಕಿಂತಲೂ ಅತ್ಯಮೂಲ್ಯವಾದ ಮತ್ತು ಅತೀ ಶ್ಲಾಘನೀಯವಾದ್ದು ನಡೆದದ್ದೆಂದ್ರೆ ವಡಾಲಾದಲ್ಲಿರುವ ರಾಷ್ಟ್ರೀಯ ಕನ್ನಡ ಶಾಲೆಯ ಕಟ್ಟಡಕ್ಕೆ, ನಿಧಿ ಕೂಡಿಸುವುದು. ಅಸೋಸಿಯೇಷನ್ನಿನ ಕೆಲವು ಮಹಿಳೆಯರು (ಮಹಿಳಾ ವಿಭಾಗದ) ಮನೆ ಮನೆಗೆ ಹೋಗಿ newspaper (ಹಳೆ ಪೇಪರ್) ಸಂಗ್ರಹಿಸಿ, ಅದನ್ನು ಮಾರಿ ಬಂದ ಹಣವನ್ನು ಕಟ್ಟಡದ ನಿಧಿಗೆ ಕೊಡ್ತಾ ಇದ್ದದ್ದು. ಅದು ತುಂಬ ಯಶಸ್ವಿಯಾಗಿ ನಡೆಯಿತು.

ಪ್ರತಿ ವರ್ಷಕ್ಕೂ ಮಹಿಳಾ ಕಾರ್ಯಕಾರಿ ಮಂಡಲಿ ಬದಲಾಗಿ, ಬೇರೆಯವರ ನೇಮಕವಾಗುತ್ತಿತ್ತು. ವೈದೇಹಿ ಚಾರ್ ನಂತರ, ದಿವಂಗತ ಶಾಮಲಾಂಬ ವರದರಾಜನ್, 1956 ಅಥವಾ 57 ರಲ್ಲಿ ಅಧ್ಯಕ್ಷೆಯಾಗಿ ಬಂದ್ರು. ಶಾರದಮ್ಮ ಎನ್. ಮತ್ತು ಸುಮಿತ್ರಮ್ಮ ರಾವ್ ಕಾರ್ಯದರ್ಶಿಗಳಾಗಿದ್ರು. ನಾನು ಕಮಿಟಿನಲ್ಲಿದ್ದೆ. ಆಗ ಹಲವಾರು ಕಾರ್ಯಕ್ರಮಗಳು ನಡಿತಾ ಇತ್ತು. ಮುಂಬಯಿ ಮಹಾನಗರಕ್ಕೆ ನೀರನ್ನು ಒದಗಿಸುವ ಸಣ್ಣ ಪುಟ್ಟ ನದಿಗಳ ಪೈಕಿ, ದೊಡ್ಡದಾದ ಮತ್ತು ಅತೀ ಮುಖ್ಯವಾದ ವೈತರಣಾ ನದಿಗೆ ಅಣೆಕಟ್ಟು (Dam) ಕಟ್ಟುವ ಕೆಲಸ ನಡಿತಾ ಇತ್ತು. ಅದನ್ನು ನೋಡಲು, ಮಹಿಳಾ ವಿಭಾಗದವರನ್ನೆಲ್ಲಾ ಕರೆದುಕೊಂಡು ಹೋಗಿದ್ರು. ಎಲ್ಲ ತುಂಬಾ enjoy ಮಾಡಿದ್ರು. ಮಿಂಟಿಗೆ (ಹಣ ತಯಾರಿಸುವ) ಮತ್ತು ಇನ್ನೂ ಅನೇಕ ಕಡೆಗಳಿಗೆ ಭೇಟಿ ಇತ್ತು. ಪ್ರತಿ ತಿಂಗಳೂ ಏನಾದ್ರೂ ಒಂದು ಕಾರ್ಯಕ್ರಮ ಇರ್ತಾ ಇತ್ತು. ಆಟಗಳು, ಪಾಕ ಶಾಸ್ತ್ರ (cooking competition) ವಿವಿಧ ವಿನ್ಯಾಸಗಳನ್ನೊಳಗೊಂಡ, ಉಡಿಗೆ ತೊಡಿಗೆಗಳು (fancy dress competition) ಲಘು ಗೀತೆಗಳು ಇವುಗಳೆಲ್ಲದರ ಸ್ಪರ್ಧೆ ನಡಿತಾ ಇತ್ತು. ಕೆಲವು ಮುಖ್ಯವಾದ ಹಬ್ಬಗಳಲ್ಲಿ, ಅರಿಶಿನ ಕುಂಕುಮದ ಸಂಭ್ರಮದ ಜೊತೆಗೆ, ಮನರಂಜನೆಯ ಕಾರ್ಯಕ್ರಮ ಇದ್ದೇ ಇರ್ತಿತ್ತು. ಸಂಕ್ರಾಂತಿ ಹಬ್ಬದಲ್ಲಂತೂ, ಕುಸುರಿ ಕಾಳಿನಿಂದ ತಯಾರಿಸಿದ ಸುಂದರವಾದ ಅಲಂಕಾರ್ದ ವಸ್ತುಗಳ ಪ್ರದರ್ಶನದೊಂದಿಗೆ ಸಂಗೀತ ಸೌರಭದ ಸವಿ, ಮತ್ತು ಯೆಳ್ಳು ಬೆಲ್ಲದ ಮಧುರ ಮಿಲನ್ದ ಸವಿಸವಿದು ಚಪ್ಪರಿಸೋ ಹಾಗೆ ಇತ್ರಾ ಇತ್ತು. ಅವರ ಕಾಲದಲ್ಲಿ 1956 ರಲ್ಲಿ ನಡೆದ ಮರೆಯಲಾರದಂಥ ವಸ್ತು ಪ್ರದರ್ಶನ (Exhibition) ಮೈಸೂರು ಕಡೆಯ ಉಡಿಗೆ ತೊಡಿಗೆಗಳು, ಮೈಸೂರ್ ಸಿಲ್ಕ್ ಸೀರೆಗಳು, ಗಂಧದ ಮರದಿಂದ ಮತ್ತು ದಂತದಿಂದ ತಯಾರಿಸಿದ ಕುಶಲ ಕೈಗಾರಿಕೆಯ ವಸ್ತುಗಳು, ಇವುಗಳಲ್ಲದೆ, ಮಹಿಳಾ ವಿಭಾಗದ ಮಹಿಳೆಯರು ಮಾಡಿದ್ದಂಥಾ ನಾಜೋಕಿನ ವಸ್ತುಗಳಲ್ಲದೆ, ಮೈಸೂರು ಕಡೆಯ ರುಚಿ ರುಚಿಯಾದ ತಿಂಡಿಗಳು, ಊಟದ್ದು ಇವುಗಳಿಗೆಲ್ಲಾ ಬೇರೆ ಬೇರೆ stall ಮಾಡಿ ಪ್ರದರ್ಶಿಸಿತ್ತು. ತುಂಬಾ ಜನರು ನೋಡಲು ತಂಡ ತಂಡವಾಗಿ ಬರುತ್ತಿದ್ದರು. ಮೂರು ದಿನ ಪ್ರದರ್ಶನ ನಡೆಯಿತು. ಕುಶಲ ಕೈಗಾರಿಕೆಗಳನ್ನು judge ಮಾಡಲು, ತೀರ್ಪುಗಾರರನ್ನು ಕರೆಸಿತ್ತು. ಶ್ರೀಮತಿ ಶಾರದಮ್ಮನ್ವರ ಮಾವಿನಕಾಯಿ ಗೊಜ್ಜು, ಉಪ್ಪಿನಕಾಯಿ, ಹುರಿಗಾಳು ಚಕ್ಲಿ, ಕೊಡ್‌ಬಳೆ, ಮತ್ತೊಬ್ಬ ಮಹಿಳೆ (ದಿವಂಗರ ಪದ್ಮಮ್ಮ ಗೋಪಾಲಯ್ಯಂಗಾರ್) ಮಾಡಿದ್ದ ಪುಳಿಯೋಗರೆ, ಚಿರೋಟೀ ಇದೆಲ್ಲ ಬಿಸಿ ಬಿಸಿ ಭೋಂಡಾದ ಹಾಗೆ ಖರ್ಚಾಗ್ತಾ ಇತ್ತು ಮತ್ತು ಮಾರಾಟವೂ ಆಗ್ತಾ ಇತ್ತು. ಅದ್ನೆಲ್ಲಾ ಈಗ್ಲೂ ಜ್ಞಾಪಿಸಿಕೊಂಡ್ರೆ, ಬಾಯಲ್ಲಿ ನೀರೂರುತ್ತೆ. ಪ್ರದರ್ಶನದ ಕಡೆಯ ದಿನ, ಬಹುಮಾನ ವಿತರಣೆ ಆಯ್ತು. ತೀರ್ಪುಗಾರರು ನಿರ್ಣಯಿದ್ದಂತೆ, ಕುಶಲ ಕೈಗಾರಿಕೆಗಳ ವಸ್ತುಗಳ ಪೈಕಿ, ಎಂಬ್ರಾಯಿಡರಿ Panel ಗಳಲ್ಲದೆ $1^{st}$, $2^{nd}$, $3^{rd}$ ಮತ್ತು consolation ಬಹುಮಾನಗಳಲ್ಲದೆ, ಅಸೋಸಿಯೇಷನ್‌ನ ಆಗಿನ ಗಣ್ಯ ವ್ಯಕ್ತಿಗಳ ಪೈಕಿ ಒಬ್ಬರಾಗಿದ್ದ, ದಿವಂಗತ ಸುಂದರ್ ರಾಜಯಂಗಾರ್‌ರ ಸ್ಪೆಷಲ್ ಬಹುಮಾನ 50 ರೂ. ನಂಗೆ ಸಿಕ್ಕಿತ್ತು. ಬೆಲೆ ಕಟ್ಟಲಾರದ ಆ ಬಹುಮಾನಗಳು, ನನ್ನ ಕಲೆಗೆ ಬಂದದ್ದು ಇಂದಿಗೂ ಹೆಮ್ಮೆಯೆನಿಸುತ್ತೆ.

ನಾನು ಸುಮಾರು 1957 ಅಥಾವಾ 1958 ರಲ್ಲಿ ಅಧ್ಯಕ್ಷಳಾಗಿದ್ದೆ. ಇಂದ್ರಮ್ಮ ಡಿ. ಅಯ್ಯಂಗಾರ್ ಮತ್ತು ದಿವಂಗರ ಮುತ್ತು ಮೂರ್ತಿ ಕಾರ್ಯದರ್ಶಿಗಳಾಗಿದ್ರು. ಜಯಮ್ಮ ಸಿ.ಎಸ್. ಮತ್ತಿತರು ಕಮಿಟಿಯಲ್ಲಿದ್ರು. ನನ್ನ ಹಿಂದಿನವರು ನಡೆಸುತ್ತಿದ್ದ ಕಾರ್ಯಕ್ರಮಗಳನ್ನೇ ನಾವು ಮುಂದುವರಿಸಿದೆವಾದ್ರು ಇನ್ನೂ ಬೇರೆ ಬೇರೆ ಕಾರ್ಯಕ್ರಮಗಳನ್ನು ಮಾಡ್ತಾ ಇದ್ದೆವು. Text tile Millsಗಳಾದ Paragon, Shakti ಮತ್ತು Godrej, Plastic Factroy ಇದಕ್ಕೆಲ್ಲಾ, ಎರಡೆರಡು ಬಸ್ ಏರ್ಪಾಡು ಮಾಡ್ಕೊಂಡು, ಒಳ್ಳೆ ಮದ್ವೆ ದಿಬ್ಬಣ ಹೊರಡೋ ಹಾಗೆ (ಬಾಜ ಬಜಂತ್ರಿ ಇರ್ತಾ ಇರಲಿಲ್ಲ ಅಷ್ಟೆ) ಮಹಿಳಾ ವಿಭಾಗದವರೆಲ್ಲಾ ಅಸೋಸಿಯೇಷನ್ನಿಂದ ಹೊರಟು ಅಲ್ಲಿಗೆ ಭೇಟಿ ಕೊಡ್ತಾ ಇದ್ವು. ಹೋದ ಕಡೆಯಲ್ಲೆಲ್ಲಾ ನಮಗೆ V.I.P. Treatment ಸಿಕ್ತಾ ಇತ್ತು. ಗೈಡ್ ಗೊತ್ತು ಮಾಡಿರುತ್ತಿದ್ರು. ಅವರು ನಮಗಳಿಗೆಲ್ಲಾ Explain ಮಾಡಿ ಎಲ್ಲವನ್ನೂ ತೋರಿಸಿಕೊಂಡು ಬರ್ತಾ ಇದ್ರು. ನಾವುಗಳು ಅಲ್ಲೆಲ್ಲಾ visit ಮಾಡಿ ಬಂದ ಮೇಲೆ, ಅಲ್ಲೆಲ್ಲಾ ಯೇನೇನ್ ಮಾಡ್ತಾರೆ, ಹೇಗೆ ಮಾಡ್ತಾರೆ, ಹೇಗಿರುತ್ತೆ ಅನ್ನೊ ವಿಷಯದ ಮೇಲೆ Essay Competition ಇಡ್ತಾ ಇದ್ವು, ಅಸೋಸಿಯೇಷನ್ನಿನ್ನಲ್ಲೇ ಚಲನ ಚಿತ್ರ ತೋರಿಸುವ ಏರ್ಪಾಡು ಮಾಡ್ತಾ ಇದ್ವು, ಮತ್ತು Republic Dayಲಿ, ಅಸೋಸಿಯೇಷನ್‌ಗೆ ಮಹಿಳಾ ವಿಭಾಗದ ಪರವಾಗಿ, ಕನಕದಾಸರ ಒಂದು ದೇವರ ನಾಮವನ್ನು ಆದರಿಸಿ, "ಚಿನ್ಮಯ ರೂಪ" ಅನ್ನೊ ಬ್ಯಾಲೆ ಕೊಟ್ಟಿದ್ವು. ಬಹಳ ಯಶಸ್ವಿಯಾಗಿ ನಡೆದು, ಎಲ್ಲರ ಮೆಚ್ಚಿಕೆಯನ್ನು ಪಡೆದಿತ್ತು. ಅದೇ ಮೊದಲು ಈ ತರಹ ಬ್ಯಾಲೆ ಅಸೋಸಿಯೇಷನ್‌ನ್ನಲ್ಲಿ ಆದದ್ದು. ಮತ್ತು ಯುಗಾದಿ ಹಬ್ಬ ಯಾವ ತರಹ ಆಚರಿಸುತ್ತಾರೆ ಅನ್ನೊದರ ಮೇಲೆ ಸಹ, ಒಂದು ಬ್ಯಾಲೆಯನ್ನು ಮಾಡಿತ್ತು. ಅದಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳು ನಾಟ್ಕ, Group singing, ಬೆಳದಿಂಗಳ ಊಟ, ಎಲ್ಲಾ ನಡಿತಾ ಇತ್ತು. ಒಟ್ನಲ್ಲಿ ಹೇಳೊದಾದ್ರೆ, ಆಗಿನ ಅಸೋಸಿಯೇಷನ್ ವಾತಾವರಣ, ಆಗಿನವರಲ್ಲಿದ್ದ ಹೊಂದಾಣಿಕೆ, ಮತ್ತು ಅಸೋಸಿಯೇಷನ್ ತಮ್ಮ ಮನೆ, ಅಲ್ಲಿ ನಡೆಸುತ್ತಿದ್ದ ಕಾರ್ಯಕ್ರಮಗಳು ತಮ್ಮ ಮನೆಯದೆಂದೇ ತಿಳಿದು, ಸಂಭ್ರಮದಿಂದ ಆಚರಿಸುತ್ತಿದ್ದ ಬಗೆ, ಕಾರ್ಯದರ್ಶಿಗಳ ಕಾರ್ಯದಕ್ಷತೆ, ಅದೆಲ್ಲಾ ಹಚ್ಚ ಹಸಿರಿನಂತೆ, ನಿತ್ಯ ನೂತನದ ಅಚ್ಚಳಿಯದ ಸವಿನೆನಪು.

# ನಾನು ಮತ್ತು ಮೈಸೂರು ಅಸೋಸಿಯೇಷನ್

ನಾನು ಮೊದಲು ಅಸೋಸಿಯೇಷನ್ನಿನಲ್ಲಿ ಕಾಲಿಟ್ಟಿದ್ದು 1944ನೇ ಇಸವಿ 6ನೇ ತಾರೀಕು. ಸೋಮವಾರ ರಾತ್ರಿ. ಆಗ ನನ್ನ ಪೂಜ್ಯ ಗುರುಗಳಾದ ವೀಣಾ ವಿದ್ವಾನ್ ಎ.ಎಸ್.ಚಂದ್ರಶೇಖರಯ್ಯನವರು ಇಲ್ಲಿನ ಕೆಲವು ರಸಿಕರುಗಳ ಮನೆಗಳಲ್ಲಿ ಕಛೇರಿ ಮಾಡುವ ಸಲುವಾಗಿ ಜೊತೆಗೆ ನನ್ನನ್ನೂ ಹಾಗೂ ಮೃದಂಗ ವಿದ್ವಾನ್ ಪಾಲಘಾಟ್ ಆಯ್ಯಾಮಣಿ ಅಯ್ಯರ್‌ರವರ ತಮ್ಮ ಪಾಲಘಾಟ್ ರಾಮಯ್ಯರ್‌ರವರನ್ನು ಕರೆತಂದಿದ್ದರು. ಇಷ್ಟು ವರ್ಷಗಳ ಮೇಲೆ ಆ ತಾರೀಖು ಇಷ್ಟು ನಿಖಿರವಾಗಿ ಹೇಗೆ ಗೊತ್ತು ಎಂದು ಕೇಳಬಹುದು. ಆಗ ನಾನು ಬೆಂಗಳೂರು Small cause court ನಲ್ಲಿ Assistant Cash Nazir ಆಗಿ ಕೆಲಸ ಮಾಡುತ್ತಿದ್ದೆ. ಗುರುಗಳ ಜೊತೆಗೆ ಭಾನುವಾರ ಮುಂಬಯಿಗೆ ಹೋಗುವ ಸಲುವಾಗಿ ಬುಧವಾರಕ್ಕೆ ಮುಂಥೆಯೇ ಹದಿನೈದು ದಿನಗಳ ರಜೆಗೆ ಅರ್ಜಿ ಕೊಟ್ಟಿದ್ದೆ. ಜಡ್ಜ ಸಾಹೇಬರು ನೋಡೋಣ ಎಂದು ದಿನ ತಳ್ಳಿ ಕೊನೆಗೆ 4ನೇ ತಾರೀಖು ಶನಿವಾರ ರಜೆ ಈಗ ಕೊಡಲಾಗುವುದಿಲ್ಲ. ಪ್ರಯಾಣ ಮುಂದುವರೆಸಿ" ಎಂದು ಹೇಳಿಬಿಟ್ಟರು.ನಾನು ಕೂಡಲೇ ನನ್ನ ವಶದಲ್ಲಿದ್ದ ಲೆಕ್ಕ ಪತ್ರಗಳು ಪುಸ್ತಕಗಳು, ಸ್ಟೇಷನರಿ ಮತ್ತು ಎಲ್ಲಾ ಕಾಗದ ಪತ್ರಗಳ ಪಟ್ಟಿಮಾಡಿ ಶಿರಸ್ತೇದಾರರಿಗೆ ಒಪ್ಪಿಸಿ ರುಜು ತೆಗೆದುಕೊಂಡು ಅಂದೇ ಜಡ್ಜ ಸಾಹೇಬರಿಗೆ ನನ್ನ ರಾಜಿನಾಮೆ ಕೊಟ್ಟೂ 5ನೇ ತಾರೀಖು ಸಂಜೆ ಪೂನಾದಲ್ಲಿ Electric traineಗೆ ಬದಲಾಯಿಸಿ ರಾತ್ರಿ ಮುಂಬಯಿಯಲ್ಲಿ ಪ್ರಸಿದ್ಧ ಲಾಯರಾಗಿದ್ದ ಬಿ. ನಾರಾಯಣ ಸ್ವಾಮಿಯವರಿಗೆ ಅವರ ಮಾವಂದಿರಾದ ಮೈಲಾರ ಜೋಯಿಸರು ಕೊಟ್ಟಿದ್ದರು. ಆವರ ಹಾಗೂ ಆಗ ಅಸೋಸಿಯೇಷನ್ನಿನ ಕಾರ್ಯದರ್ಶಿಗಳಾಗಿದ್ದ ಬಿ. ಜಿ. ಆಚಾರ್, ಖ್ಯಾತ ಪತ್ರಕರ್ತ ಜೆ. ಎನ್. ಐಯ್ಯರ್‌ರವರುಗಳು ನಮ್ಮಗಳಿಗೆ ಮೈಸೂರು ಅಸೋಸಿಯೇಷನ್ನಿನಲ್ಲಿ ವಸತಿ ಏರ್ಪಡಿಸಿದರು. ಆ ಸಮಯದಲ್ಲಿ ಮೈಸೂರು ಅಸೋಸಿಯೇಷನ್ನಿನ ಪುಸ್ತಕ ಭಂಡಾರವನ್ನು ಆಗಿನ ಮುಂಬಯಿ ಸ್ಟೇಟಿನ ಮುಖ್ಯಮಂತ್ರಿಗಳಾಗಿದ್ದ ಬಿ. ಜಿ. ಖೇರ್‌ರವರಿಂದ ಉದ್ಘಾಟನೆ ಮಾಡಿಸಲಿದ್ದರು. ಆ ಸಮಾರಂಭಕ್ಕೆ ಪೂರ್ವಭಾವಿಯಾಗಿ ನಮ್ಮಿಬ್ಬರ ವೀಣಾವಾದನವನ್ನು ಏರ್ಪಡಿಸಿದ್ದರು. ಅದರಿಂದ ನಮ್ಮಗಳಿಗೆ ಮೈಸೂರು ಅಸೋಸಿಯೇಷನ್ನಿನಲ್ಲಿ ವಸತಿ ಹಾಗೂ ಊಟದ ಉಚಿತ ಏರ್ಪಾಡು ಮಾಡಿ ಸಹಾಯ ಮಾಡಿದ್ದರು. ಇದು ಅಸೋಸಿಯೇಷನ್ನಿನವರ ಕಲಾವಿದರ ಬಗ್ಗೆ ಇರುವ ವಿಶಾಲ ಮನೋಭಾವವನ್ನು ತೋರುತ್ತದೆ. ಅಂದಿನ ಸಮಾರಂಭಕ್ಕೆ ಮುಂಬಯಿನ ಪ್ರಮುಖ ಕನ್ನಡಿಗರಾದ ಬಿ.ನಾರಾಯಣಸ್ವಾಮಿ, ಅರ್.ಡಿ.ಚಾರ್, ಬಿ. ವಿ. ಎಸ್. ಅಯ್ಯಂಗಾರ್, ಬಿ. ಎಸ್. ಚನ್ನಸ್ವಾಮಿ ಮುಂತಾದವರೆಲ್ಲಾ ಬಂದಿದ್ದರು. ನಂತರ ಆ ಪ್ರಮುಖರ ಮನೆಗಳಲ್ಲೆಲ್ಲಾ ನಮ್ಮಗಳ ವೀಣಾವಾದನವನ್ನು ಏರ್ಪಡಿಸಿ ಗೌರವಿಸಿದ್ದರು.

ನನಗೆ ಪೂರ್ವಪರಿಚಿತರಾಗಿದ್ದ ವೀಣಾ ವಿದುಷಿ ಶ್ರೀಮತಿ ಲಲಿತಾ ವೆಂಕಟರಾಮನ್‌ರವರ ಪರಿಚಯವನ್ನು ಗುರುಗಳಿಗೆ ಮಾಡಿಸಿದೆ. ಅವರು ಅವರ ಗುರುಗಳಾದ ವಿದ್ವಾನ್ ಕೃಷ್ಣ ಭಾಗವತರ್‌ರವರ ಪರಿಚಯ ಮಾಡಿಸಿದರು. ಅವರಿಬ್ಬರ ಮುಖಾಂತರ ಅನೇಕ ಕಛೇರಿಗಳಾದವು. ಅಸೋಸಿಯೇಷನ್‌ನ ಆತಿಥ್ಯದ ಜೊತೆಗೆ ನನ್ನ ಸಂಬಂಧಿ ಬಿ.ನರಸಿಂಹಮೂರ್ತಿಯವರ ಮೂವಂದಿರು ಪುಟ್ಟ ಶಾಸ್ತ್ರಿಗಳು, ಗುರುಗಳ ಬಾಲ್ಯ ಮಿತ್ರರಾದ ಲಕ್ಷ್ಮೀಪತಿ ಹಾಗೂ ವೀರರಾಘವನ್ (ಇವರು ಅಸೋಸಿಯೇಷನ್ ನಾಟಕಗಳಲ್ಲಿ ಭಾಗವಹಿಸಿ 'ವೀರಿ' ಎಂದೇ ಪ್ರಸಿದ್ಧರಾಗಿದ್ದರು)

ಮತ್ತು ಅನೇಕ ರಸಿಕರುಗಳ ಮನೆಗಳಲ್ಲಿ ಆತಿಥ್ಯ ನಡೆದಿತ್ತು. ಅಸೋಸಿಯೇಷನ್ನಿನ ಬಾಣಸಿಗ ರಾಮಣ್ಣನವರ ಭೂರಿ ಭೋಜನವಂತು ನಡೆದಿತ್ತು. ಕೊನೆಯದಾಗಿ ಬಿ.ನಾರಾಯಣ ಸ್ವಾಮಿಗಳು ರೂಯಾ ಕಾಲೇಜಿನ ಆವರಣದಲ್ಲಿ ಸಾರ್ವಜನಿಕ ಕಛೇರಿಯನ್ನು ಏರ್ಪಡಿಸಿ ಗುರುಗಳಿಗೆ ಶಾಲು ಹೊದಿಸಿ, ಎರಡು ಚಿನ್ನದ ಪದಕಗಳನ್ನು ಕೊಟ್ಟು ಗೌರವಿಸಿ, ಕಳುಹಿಸಿಕೊಟ್ಟರು. ಹೀಗೆ ಒಂದು ತಿಂಗಳ ಕಾಲ ಅಸೋಸಿಯೇಷನ್ನಿನ ಆಶ್ರಯದಲ್ಲಿದ್ದು ಬೆಂಗಳೂರಿಗೆ ಹಿಂತಿರುಗಿದ್ದೆವು.



ವೈಣಿಕ ವಿದ್ವಾನ್ ಸಿ. ಕೆ. ಶಂಕರನಾರಾಯಣ

ನಂತರ ನಾನು ಪುನಃ ಗುರುಗಳ ಜೊತೆಗೆ ಮುಂಬಯಿಗೆ ಬಂದಿದ್ದು 1950ನೇ ಇಸವಿ ಜನವರಿ 3ನೇ ತಾರೀಖು. ಬಿ.ವಿ.ಅಯಂಗಾರರ ಅಣ್ಣ ಬಿ.ವಿ.ಕೃಷ್ಣ ಅಯ್ಯಂಗಾರರ ಷಡ್ಕ ಶ್ರೀ ಮೂರ್ತಿಯವರ ಮನೆಯಲ್ಲಿ ಪೂನದಲ್ಲಿ ನಾಲ್ಕು ದಿನ್ನೈದ್ದು ಮುಂಬಯಿಗೆ 3ನೇ ತಾರೀಖು ಬಂದವರೇ ಬಾಂಬೆ ಸೆಂಟ್ರಲ್ ಸ್ಟೇಷನ್ ಬಳಿ ಇದ್ದ ಬಿ.ವಿ.ಕೆ.ಅಯ್ಯಂಗಾರರ ಮನೆಯಲ್ಲಿ ವಾರ ಕಾಲವಿದ್ದು ಮಾಟುಂಗಕ್ಕೆ ಹಿಂತಿರುಗಿದೆವು. ಆ ನಂತರ ನಾವು ಗುರುಗಳ ಆಪ್ತ ಸ್ನೇಹಿತರು ಆರ್.ವೆಂಕಟರಾಮಯ್ಯನವರ ಮನೆಯಲ್ಲಿ ಮೊಕ್ಕಾಂ ಮಾಡಿದೆವು. ಅವರ ಸಂಸಾರ ಮೈಸೂರಿನಲ್ಲಿದ್ದುದ್ದರಿಂದ ಒಬ್ಬರೇ ಇದ್ದರು. ಅದು ಆಗಿನ ಜಂಪಡಾಬಾದ್ ಗ್ರೌಂಡ್ ಫ್ಲೋರ್‌ನಲ್ಲಿ. ಆಗ ಮೈಸೂರು ಅಸೋಸಿಯೇಷನ್ನಿಗೆ ಎನ್.ಡಿ.ರಾವ್ ರವರು ಕಾರ್ಯದರ್ಶಿಗಳಾಗಿದ್ದರು. ಗುರುಗಳ ಮಗಳ ಮದುವೆಗಾಗಿ ಹಣ ಒದಗಿಸುವ ಸಲುವಾಗಿ ಇಲ್ಲಿಗೆ ಬಂದಿದ್ದರು. ಆಗ ನಮ್ಮ ಜೊತೆಗೆ ಮೃದಂಗ ವಿದ್ವಾನ್ ಎಚ್. ಪುಟ್ಟಾಚಾರ್‌ರವರು ಬಂದಿದ್ದರು. ಮೊದಲು ಕಛೇರಿ ಅಸೋಸಿಯೇಷನ್ನಿನಲ್ಲೆ ಆಯಿತು. ಅಂದು ಮುಂಬಯಿಯ ಕನ್ನಡ ರಸಿಕರೆಲ್ಲಾ ಬಂದಿದ್ದರು. ಗುರುಗಳ ಪ್ರವಾಸದ ವಿಷಯ ತಿಳಿದ ಆ ರಸಿಕರೆಲ್ಲರೂ ತಮ್ಮ ಮನೆಗಳಲ್ಲೇ ವೀಣಾವಾದನವನ್ನು ಏರ್ಪಡಿಸಿ ಮುಕ್ತ ಹಸ್ತಗಳಿಂದ ಸಹಾಯ ಮಾಡಿದರು. ಈ ಏರ್ಪಾಡುಗಳನ್ನೆಲ್ಲಾ ಬಿ. ನಾರಾಯಣಸ್ವಾಮಿ, ಆರ್. ವೆಂಕಟೇಶ ಮೂರ್ತಿ, ಬಿ. ವಿ. ಎಸ್. ಅಯ್ಯಂಗಾರ್, ಬಿ. ಎಸ್. ಚೆನ್ನಸ್ವಾಮಿ, ಆರ್. ಡಿ. ಚಾರ್, ಎನ್. ಎಮ್. ಅಯ್ಯಂಗಾರ್‌ರವರುಗಳು ಮುಂದೆ ನಿಂತು ಮಾಡಿಸಿದ್ದರು. ಇದಲ್ಲದೆ ಹಿಂದೆಯೇ ಪರಿಚಿತರಾಗಿದ್ದ ಲಲಿತಾ ವೆಂಕಟರಾಮನ್, ಸುಂದರಮ್ಮ ರಾಘವಯ್ಯ ಅವರ ಗುರುಗಳಾದ ಕೃಷ್ಣ ಭಾಗವತರ್‌ರವರುಗಳೂ ಸಹಾ ಅನೇಕ ಕಛೇರಿಗಳನ್ನು ಏರ್ಪಡಿಸಿದ್ದರು. ನಂತರ ಅಹಮದಾಬಾದಿನಲ್ಲಿ ನೆಲೆಸಿದ್ದ ಡಾಕ್ಟರ್ ಎಂ.ಜಿ.ಡಿ.ಗಾವಿಯವರು ಆಹ್ವಾನಿಸಿ ಅಲ್ಲಿನ ಹಿಂದೂಸ್ತಾನಿ ಸಂಗೀತ ಮಂಡಳಿಯಲ್ಲದೆ ಮೂರು ಕಡೆ ಕಛೇರಿಗಳನ್ನು ಏರ್ಪಡಿಸಿದ್ದರು. ಹಾಗೂ 'ಸಾನಂದ್' tate ನ ಮಹಾರಾಜರ ಅರಮನೆಯಲ್ಲಿ ಸಹ ನಮ್ಮಗಳ ಕಛೇರಿಯಾಯಿತು. ಭಾರತಿ ವಿದ್ಯಾಭವನದಲ್ಲಿ ಶ್ರೀಮತಿ ಲೀಲಾವತಿ ಮುನ್ಷಿಯವರು ಏರ್ಪಡಿಸಿದ್ದ ಕಛೇರಿಗಾಗಿ ಮುಂಬಯಿಗೆ ಬಂದು ಅದಾದ ನಂತರ ಪುನಃ ಅಹಮದಾಬಾದಿಗೆ ಹಿಂತಿರುಗಿ ಇನ್ನೆರಡು ಕಛೇರಿಗಳನ್ನು ಮಾಡಿ ಅಜ್ಮೀರಿಗೆ ಗುರುಗಳ ಶಿಷ್ಯೆಯವರ ಅಹ್ವಾನದ ಮೇಲೆ ಹೋಗಿ ಅಲ್ಲೂ ಮೂರು ಕಛೇರಿಗಳನ್ನು ಮಾಡಿದೆವು. ಈ ಮಧ್ಯೆ ಆರ್.ವಿ.ಮೂರ್ತಿಯವರು ದೆಹಲಿಯಲ್ಲಿ ಭಾರತ ಸರ್ಕಾರದ Press Information Officer ಆಗಿದ್ದ ಐಸ್.ಆರ್.ಎಸ್.ರಾಘವನ್‌ರವರಿಗೆ ಕಾಗದ ಬರೆದರು. ಅವರಿಂದಲೂ ಅಹ್ವಾನ ತರಿಸಿದ್ದರು. ಅಜ್ಮೀರಿನಿಂದ ನಾವುಗಳು ದೆಹಲಿಗೆ

ಮಾರ್ಚ್ ಕೊನೇ ವಾರದಲ್ಲಿ ತಲುಪಿ ರಾಘವನ್‌ರವರ ಮನೆಯಲ್ಲೇ ಮೊಕ್ಕಾಂ ಮಾಡಿದೆವು. ಅಲ್ಲಿ ಕರ್ನಾಟಕ ಸಂಘವಲ್ಲದೆ ಇನ್ನೂ ಮೂರು ಕಡೆ ಕಛೇರಿಗಳಾದವು. ಅಲ್ಲದೆ ದೆಹಲಿ ಆಕಾಶವಾಣಿ ಕೇಂದ್ರದಿಂದ ನಮ್ಮ ವೀಣಾವಾದನದ ಪ್ರಸಾರವಾಯಿತು. (ಮುಂಬಯಿ ಮತ್ತು ಅಹಮದಾಬಾದಿನಲ್ಲಿ ಸಹ ನಮ್ಮ ವೀಣಾವಾದನ ಪ್ರಸಾರವಾಗಿತ್ತು) ಏಪ್ರಿಲ್ ಹದಿಮೂರನೇ ತಾರೀಖು ಆಗಿನ, peaker ಆಗಿದ್ದ ಅನಂತ ಶಯನಮ್ ಅಯ್ಯಂಗಾರರು ತಮಿಳು ಯುಗಾದಿಯ ಸಂದರ್ಭದಲ್ಲಿ ಲೋಕ ಸಭಾ ಸದಸ್ಯರ ಹಾಗೂ ದೆಹಲಿರಸಿಕರ ಸಮ್ಮುಖದಲ್ಲಿ ಏರ್ಪಡಿಸಿದ್ದ open air get together ನಲ್ಲಿ ಮೂರು ಗಂಟೆಗಳ ಕಾಲ ನಮ್ಮ ವೀಣಾ ವಾದನವಾಯಿತು. ನಂತರ ನಾವುಗಳು 20ನೇ ತಾರೀಖು ಹೊರಟು ಮುಂಬಯಿಗೆ ಹಿಂತಿರುಗಿದೆವು. 22ನೆ ತಾರೀಖು Reserve Bank ನ ಆವರಣದಲ್ಲಿದ್ದ ಆಗಿನ Deputy governor ಆಗಿದ್ದ ಎಂ.ಜಿಮೇಖರಿಯವರು ಏರ್ಪಡಿಸಿದ್ದ ಕಡೆಯ ವೀನಾ ವಾದನವನ್ನು ಮಾಡಿದೆವು. ಮುಂಬಯಿನ ನಿವಾಸಿಗಳ ಅಣತಿಯ ಮೇರೆಗೆ ನನ್ನನ್ನು ಶೇಶಣ್ಣನವರ ಪರಂಪರೆಯನ್ನು ಮುಂದುವರಿಸೆಂದು ಹೇಳಿ ಇಲ್ಲಿಯೇ ಬಿಟ್ಟೂ 23ನೇ ತಾರೀಕು ನನ್ನ ಗುರುಗಳು ಬೆಂಗಳೂರಿಗೆ ಹಿಂತಿರುಗಿದರು. ಅಂದಿನಿಂದಲೇ ನನ್ನ ಮತ್ತು ಮೈಸೂರು ಅಸೋಸಿಯೇಷನ್ನಿನ ಸಂಬಂಧ ನಿಕಟವಾಯಿತು. ಅಂದಿನಿಂದ ವೀಣಾ ಶಿಕ್ಷಕನಾಗಿ ಮುಂಬಯಿ ವಾಸಿಯಾಗಿ ನಿಂತಿದ್ದೇನೆ.

ನನ್ನ ಮೊದಲ್ ಪಾಠಗಳು ಶ್ಯಾಮಲ್ ಬಂಗಲೆಯಲ್ಲಿದ್ದ ನನ್ನ ಸಂಬಂಧಿ ಪಿ.ಎ.ರಾವ್‌ರವರ ಮಗಳು ಶೈಲ ಕುಮಾರಿ ಹಾಗೂ ಅದೇ ಬಂಗಲೆಯ ಬಿ. ನಾರಾಯಣ ಸ್ವಾಮಿಯವರ ಮಗಳು ಮಹಾಲಕ್ಷ್ಮಿಗೆ ಬಾಯಿ ಹಾಡುಗಾರಿಕೆಯಿಂದ ಪ್ರಾರಂಭವಾದವು. ನನ್ನ ಮೊದಲ್ ವೀಣೆ ಪಾಠ ಲಲಿತಾ ವೆಂಕಟರಾಮರವರ ಮಗಳು ರಾಜಲಕ್ಷ್ಮಿಯಿಂದ ಪ್ರರಂಭವಾಯಿತು. 50ನೇ ಇಸವಿ ಮೇ ತಿಂಗಳು ಪೂರಾ ವೆಂಕಟರಾಯಯ್ಯನವರ ಮನೆಯಲ್ಲೇ ಕಳೆದೆ. ಜೂನ್ ತಿಂಗಳಿಂದ ಆರ್.ವಿ.ಮೂರ್ತಿಯವರು ನನಗೆ ಕನ್ನಡ ಶಾಲೆಯ ಪ್ರಾಂಶುಪಾಲರಾಗಿ ಕಾದಿರಿಸಿದ್ದ B.I.T. Building Flat ನಲ್ಲಿ ಇತರ ಯುವಕರೊಂದಿಗೆ ಇರಲು ಅವಕಾಶ ಮಾಡಿಕೊಟ್ಟರು. ಅಲ್ಲಿ ನಮ್ಮ ಜೊತೆ ಮೂರ್ತಿಯವರ ಸೋದರಳಿಯ ಜಿ.ಸುಬ್ಬಣ್ಣ, ಭಾವಮೈದ ಶ್ರೀನಿವಾಸರಾವ್ (ಚಿನ್ನು), ಕ್ಯಾತನಾಳ್ ಹಾಗೂ ಸುಬ್ರಮಣ್ಯಂರವರುಗಳಿದ್ದರು. ಕೆಲವೇ ದಿವಸಗಳಲ್ಲಿ ಸುಬ್ರಮಣ್ಯಂ ಎಂಬುವವರು ಪರೀಕ್ಷೆಯಲ್ಲಿ ಸರಿಯಾದ ರೀತಿಯಲ್ಲಿ ತೇರ್ಗಡೆಯಾಗಲಿಲ್ಲವೆಂದು ನೇಣು ಹಾಕಿಕೊಂಡರು. ಆಗ ಕೆಲವುದಿನ, ಎನ್.ಡಿ.ರಾವ್‌ರವರು ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು. ಅವಾ ಮನೆಯಲ್ಲೇ ಶ್ರೀ ಗುಂಡಣ್ಣನವರ ನಿಕಟ ಪರಿಚಯವಾಯಿತು. ನಂತರ ಪುನಃ B.I.T.ಗೆ ಹಿಂತಿರುಗಿದಾಗ ಶ್ರೀ.ಕೆ.ವಿ.ಸುಬ್ರಮಣ್ಯಾಶಾಸ್ತ್ರಿ, ವಿಜಯೇಂದ್ರ ರಾವ್, ಗುರುರಾಜ ರಾವ್, ಕೆ.ವಿ.ಶೇಷಾದ್ರಿರವರುಗಳು ಸಹಾ room mates ಆಗಿದ್ದರು. ಅಲ್ಲಿದ್ದಾಗ ನಾನು ಅಸೋಸಿಯೇಷನ್ ಮೆಸ್‌ನಲ್ಲೇ ಊಟಕ್ಕೆ ಹೋಗುತ್ತಿದ್ದೆ. ಅಸೋಸಿಯೇಷನ್ನಿನಲ್ಲಿ ನನ್ನ ಸಹಪಾಠಿ ಟಿ.ಆರ್.ಎಸ್.ಆನಂದಂ ಅಲ್ಲದೆ ಇನ್ನೂ ಅನೇಕ ಸ್ನೇಹಿತರಿದ್ದರು. ಅವರಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ನಲ್ಲಿ ಸಹಪಾಠಿಯಾಗಿದ್ದ ಶ್ರೀ. ಸಿ. ಕೆ. ಕೃಷ್ಣಮೂರ್ತಿ ಹಾಗೂ ಬೆಂಗಳೂರಿನಲ್ಲೇ ಖ್ಯಾತ ನೃತ್ಯಪಟು ರಾಮಗೋಪಾಲ್‌ರವರ ಮನೆಯಲ್ಲಿ ಪರಿಚಿತರಾಗಿದ್ದ ವಿ. ಕೆ. ಮೂರ್ತಿಯವರುಗಳು ಮುಖ್ಯ ಪರಿಚಿತರು.

ವಿ.ಕೆ.ಮೂರ್ತಿ (ಕುಟ್ಟಿ) ಆಗ ಅಸೋಸಿಯೇಷನ್ನಿನ ನಾಟಕ ವಿಭಾಗದಲ್ಲಿ ಪ್ರಧಾನ ಭಾಗವಹಿಸುತ್ತಿದ್ದರು. ನನಗೆ ಕುಟ್ಟೀಯೇ ಲಕ್ಷ್ಮೀರಮಣ, ಪುಟ್ಟಣ್ಣಯ್ಯ, ರಾಮರವ್, ಸುಬ್ಬರಾವ್ ಅವರುಗಳ ಪರಿಚಯ ಮಾಡಿಸಿದರು. 50ನೇ ಇಸವಿ ಆಗಸ್ಟ್ 15ನೇ ತಾರೀಖು ಎಂದಿನಂತೆ ಅಸೋಸಿಯೇಷನ್ನಿನವರು ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಿದರು. ಅಂದು ನಾನೇ ನಿರ್ದೇಶಿಸಿದ ಸೌಭಾಗ್ಯ ಕಿರುನಾಟಕದಲ್ಲಿ ಲಕ್ಷ್ಮೀರಮಣ ಸುಬ್ಬಲಕ್ಷ್ಮಿಯಾಗಿಯೂ, ರಾವು ಸುಬ್ಬ ಕೃಷ್ಣನಾಗಿಯೂ, ಪುಟ್ಟಣ್ಣ ಸಂಗ್ರಮಯ್ಯನಾಗಿಯೂ ಪಾತ್ರವಹಿಸಿದ್ದರು. ನಾನು ಶ್ರೀಮಂತ ಸುಬ್ಬನರಸಿಂಹಯ್ಯನ ಪಾತ್ರ ವಹಿಸಿದ್ದೆ. ನಾಟಕ ಬಹಳ ಚೆನ್ನಾಗಿ ಕಳೆಗೊಂಡಿತು. ಇವರು ಯಾರು ಹೊಸಬರು ಎಂದು ಕೇಳಲು, ನನ್ನ ಪರಿಚಯಸ್ಥರು ಇವರು ವೀನೆ ಮೇಷ್ಟರು, ಹೊಸದಾಗಿ ಬಂದು ಇಲ್ಲಿ ನೆಲೆಸಿದ್ದಾರೆ ಎಂದು ಪರಿಚಯಿಸಿದರು. ಹೀಗೆ ನಾನು ವೀಣೆ ಮೇಷ್ಟರಾಗಿ ಪ್ರಚಾರ ಸಿಕ್ಕಿ ತಳವೂರಲು ಅನುವಾಯಿತು. 50ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಅಧಿವೇಶನದ ಮುಂಬಯಿಯ ಕವಾಸ್‌ಜಿ ಜಹಂಗೀರ್ ಹಾಲ್‌ನಲ್ಲಿ ಆಯಿತು. ಇಲ್ಲಿ ಅದನ್ನು ನಡೆಸುವ ಜವಾಬ್ದಾರಿಯನ್ನು ವರದರಾಜ ಆದ್ಯರವರು ವಿಶೇಷ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ನಿಭಾಯಿಸಿದರು. ಅದಕ್ಕಾಗಿ ಅನೇಕ ಗೋಷ್ಠಿಗಳ ಉಪಸಮಿತಿಗಳನ್ನು ಮಾಡಿದ್ದರು. ನಾನು ಗಮಕ ಗೋಷ್ಠಿಗೆ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆ. ಬಿ.ಡಿ.ಬೆಳವಿಯವರು ಆ ಗೋಷ್ಠಿಗೆ ಅಧ್ಯಕ್ಷರಾಗಿದ್ದರು. ಖ್ಯಾತ ಗಮಕ ಕಲಾಧುರಂಧರ ಸಂ.ಗೋ.ಬಿಂದೂರಾಯರು ಮುಖ್ಯ ಅತಿಥಿಯಾಗಿ ಬಂದಿದ್ದರು. ಅದೇ ಸಂದರ್ಭದಲ್ಲಿ ಅಸೋಸಿಯೇಷನ್ನಿನ ವತಿಯಿಂದ ಪುಟ್ಟಣ್ಣಯ್ಯನ್ವರು ಬರೆದ "ಭಂಡ್ವಾಳು' ನಾಟಕವನ್ನು ಪ್ರದರ್ಶಿಸಿದೆವು. ಆಗೆಲ್ಲಾ ನಾನು B.I.T. Building ಇದ್ದು ಅಸೋಸಿಯೇಷನ್ನಿನ ಬೇರೆ ಬೇರೆ ನಾಟಕಗಳಿಗೆ Rehearsal ಗಾಗಿ ಹೋಗುತ್ತಿದ್ದೆ. ಈ ಮಧ್ಯೆ ಗೊತ್ತಾಗಿದ್ದ ಬೇರೆ ವೀಣೆ ಪಾಠಗಳಿಗೆ ಹೋಗುವ ಸಮಯ ಬಿಟ್ಟೂ ಮಿಕ್ಕೆಲ್ಲ ಸಮಯವನ್ನು ಅಸೋಸಿಯೇಷನ್ನಿನ Law ನಲ್ಲಾಗಲಿ Rehearsal ಕೋಣೆಯಲ್ಲಾಗಲಿ ಕಳೆಯುತ್ತಿದ್ದೆ. ನಾಟಕ ವಿಭಾಗದಿಂದ ನಾವುಗಳು, ಕೈಲಾಸಂರವರ ಹೋಂರೂಲು, ಬಂಡ್ವಾಳ್ವಿಲ್ಲದ್ಬಡಾಯಿ, ಹುತ್ತದಲ್ಲಿ ಹುತ್ತ, ನೆರೆಹೊರ್ಕೆ ನೆರೆ ಹೊರ್ಕೆನೇವೇಯೆ? ಟೊಳ್ಳುಗಟ್ಟಿ, ಪರ್ವತವಾಣಿಯವರ ಮೀನಾಮದುವೆ, ಬಹದ್ದೂರ್ ಗಂಡ, ಉಂಡಾಡಿ ಗುಂಡ, ಬಣ್ಣದ ಬೊಂಬೆ (ಈ ನಾಟಕವನ್ನು ಅಸೋಸಿಯೇಷನ್ನಿನ ರಜತ ಮಹೋತ್ಸವದ ಸಂದರ್ಭದಲ್ಲಿ ಆಡಿದೆವು). ಸಿ. ಎನ್. ಪುಟ್ಟಣ್ಣಯ್ಯನವರ ವಕ್ರಮೂರ್ತಿ, ಬಲಿದಾನ ಹಾಗೂ ಕಾರಂತರ ಸುಧಾರಿತ ಸುಭದ್ರ ನಾಟಕಗಳನ್ನು ಅಲ್ಲದೆ ಧರ್ಮರತ್ನಕರ ಮುಂತಾದ ಅನೇಕ ನಾಟಕಗಳನ್ನು ಅಸೋಸಿಯೇಷನ್ನಿನಲ್ಲಲ್ಲದೇ ಬೇರೆ ಬೇರೆ ಕಡೆಗಳಲಿ ಅಸೋಸಿಯೇಷನ್ನಿನ ಪರವಾಗಿ ಪ್ರದರ್ಶಿಸಿದೆವು. ಆಗ ನಮ್ಮ ತಂಡದಲ್ಲಿ ಕುಟ್ಟೀ ಪುಟ್ಟಣ್ಣಯ್ಯ, ನಾನು ಸುಬ್ಬರಾವ್, ಲಕ್ಷ್ಮೀರಮಣ್, ರಾಮು, ಭೀಮರಾವ್, ದುಗ್ಗಪ್ಪಯ್ಯ, ಕುಂತಿ ದುಗ್ಗಪ್ಪಯ್ಯ, ಟಿ. ಆರ್. ಎಸ್. ಆನಂದಂ, ಬಿ. ಜಿ. ಆಚಾರ್, ಶ್ರೀನಿವಾಸರಾವ್ (ಬೌಡು), ರಾಮಚಂದ್ರರಾವ್, ಮಧುರಾಕೃಷ್ಣಸ್ವಾಮಿ, ಬಿ.ನಾರಾಯಣಸ್ವಾಮಿ, ಲಕ್ಷ್ಮೀಕೃಷ್ಣಸ್ವಾಮಿ ಮುಂತಾದವರೆಲ್ಲಾ ಭಾಗವಹಿಸುತ್ತಿದ್ದರು. ಮಹಿಳಾ ವಿಭಾಗದ ಶ್ರೀಮತಿಯರಾದ ಜಯಮ್ಮ ಸಿ.ಕೆ.ಎಸ್.ರಾವ್, ಸೀತಮ್ಮ ಎಸ್.ಆರ್ ರಾವ್, ಸುಮಿತ್ರ ಪಿ.ಎಸ್.ರಾವ್ ಒಳಗೊಂಡು ಮಹಿಳೆಯರದೇ ತಂಡ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಮೀನಾ ಮದುವೆಯಲ್ಲಿ ಬಿ. ನಾರಾಯಣಸ್ವಾಮಿಯವರೊಂದಿಗೆ ಅವರ ಧರ್ಮಪತ್ನಿ ಶ್ರೀಮತಿ ಶಾರದಮ್ಮನವರೂ ಪಾತ್ರ ವಹಿಸಿದ್ದ ನೆನಪು. ಆ ನಾಟಕದಲ್ಲಿ ನಾನು ಜೋಯಿಸರ ಪಾತ್ರ ವಹಿಸಿದ್ದೆ.

53-54ನೇ ಇಸವಿಯಲ್ಲಿ ಮಹಿಳಾ ವಿಭಾಗಕ್ಕೋಸ್ಕರವಾಗಿ ನಾನು ದೇವರನಾಮಗಳನ್ನು ಹೇಳಿಕೊಟ್ಟು ಅನೇಕರಿಗೆ, ಮಹಿಳೆಯರನ್ನು ತಯಾರು ಮಾಡಿದ್ದೇನೆ.

## ಏಳು ಮನೆ ಚೀಲಿ

ನನಗೆ ಎಲ್ಲದಕ್ಕಿಂತಲೂ ಮುಖ್ಯವಾಗಿ ಬೇಕಾಗಿದ್ದುದು ಹೆಂಡತಿ ಮಕ್ಕಳನ್ನು ಕರೆಸಿಕೊಂಡು ಸಂಸಾರ ಮಾಡಲು ವಸತಿ ಮುಂಬಯಿಯಲ್ಲಿ ಅದರದೇ ದೊಡ್ಡ ಅಡ್ಡಿ. ಆದರೆ ನನ್ನ ಹಿತೈಷಿಗಳಿಂದ ಆಗಾಗ್ಗೆ ಹೆಂಡತಿ ಮಕ್ಕಳನ್ನು ಸ್ವಲ್ಪ ಕಾಲವಾದರೂ ಕರೆಸಿಕೊಳ್ಳಲು ಅನುವಾಗುತ್ತಿದ್ದರು. 1951ನೇ ಇಸವಿ ಮೇ ತಿಂಗಳಲ್ಲಿ ಬಿ. ನಾರಾಯಣ ಸ್ವಾಮಿಯವರ ಸೋದರಳಿಯ ಸತ್ಯನಾರಾಯಣ

ರಾಯರು ರಜೆಗೆ ಬೆಂಗಳೂರಿಗೆ ಹೋದಾಗ ವಡಾಲಾದಲ್ಲಿನ ಅವರ Govt. Quarter ನಲ್ಲಿ ಒಂದೂವರೆ ತಿಂಗಳು ನಮಗೆ ಇರಲು ಬಿಟ್ಟು ಕೊಟ್ಟಿದ್ದರು. ನಂತರ 51 ಅಕ್ಟೋಬರ್ ತಿಂಗಳಿನಿಂದ ಏಳು ತಿಂಗಳು ಕಾಲ ಘಾಟಕೋಪರಿನಲ್ಲಿ ಒಂದು ಚಾಲ್‌ನಲ್ಲಿ ವಾಸಿಸಲು ಬಾಡಿಗೆ ಕೊಟ್ಟಿದ್ದರು. ಆಗ ನಮ್ಮ ಸಂಗಡ ನನ್ನ ಆಪ್ತ ಸ್ನೇಹಿತರಾದ ಕೆ.ವಿ.ಎನ್.ಶಾಸ್ತ್ರಿಗಳು ಅವರ ಪತ್ನಿ ಸಮೇತ ಅದೇ ಚಾಲಿನಲ್ಲಿ ಏಳು ತಿಂಗಳ ಕಾಲ ಇದ್ದರು. ಹೆಂಡತಿಯ ಬಾಣಂತಿನ ಮುಗಿಸಿ ಕೊಂಡು ಬಂದಾಗ ಆ ಮನೆ ಬಿಡಬೇಕಾಗಿ ಬಂತು. ಆ ಸಮಯದಲಿ ಶ್ರೀ ಎಸ್. ಆರ್.ರಾವ್‌ರವರು ಅವರ ಸಹೋದ್ಯೋಗಿ ಶ್ರೀ ಎಂ.ಎಸ್.ಎಸ್.ರಾವ್‌ರವರ ಮನೆಯಲ್ಲಿ ಒಂದು ತಿಂಗಳು ಅವರ ಗೈರು ಹಾಜರಿಯಲ್ಲಿರಲು ಏರ್ಪಾಡು ಮಾಡಿಕೊಟ್ಟರು. ಆನ ನನ್ನ ಸಂಗಡ ನನ್ನ ಮಾತಾ ಪಿತೃಗಳೂ ಸಹ ಇದ್ದರು. ಎಂ.ಎಸ್.ಎಸ್.ರಾವ್‌ರವರು ಹಿಂತಿರುಗಿದ ಕೂಡಲೇ ಮನೆಯವರನ್ನು ತಂದೆ ತಾಯಿಯರನ್ನೊಳಗೊಂಡು ಊರಿಗೆ ರವಾನಿಸಿ ಪುನರಾಯಾನ್ ಮಹಾಕಪಿ ಅಂತ B.I.T. Building ಹಿಂತಿರುಗಿದೆ. ಘಾಟ್‌ಕೋಪರ್ ಮನೆಯ ಏಳು ತಿಂಗಳ ವಾಸದಲ್ಲಿ ಸಾಕಷ್ಟು ಸಾಮಾನು ಜಮಾ ಆಗಿತ್ತು. ಕೆಲವು wooden rack ಆಗ B.I.T. ಯಲ್ಲಿರಲು ಒಂಟಿಯಾಗಿ ಬಂದಿದ್ದ N.K.E.S. ಹೊಸ ಪ್ರಾಂಶುಪಾಲರು ನರಸಿಂಹಯ್ಯನವರಿಗೆ ಕೊಟ್ಟೂ ಮಿಕ್ಕ ಸಾಮಾನುಗಳನ್ನು ನನ್ನ ಶಿಷ್ಯೆ ಶ್ರೀಮತಿ ಮಾಲತಿಯವರ ತಂದೆ ಕೆ. ಆರ್. ಗೋಪಾಲ್ ಅಯ್ಯಂಗಾರರ ಮನೆಯ ಆಟ್ಟದಲ್ಲಿ ಹಾಕಿರಬೇಕಾಯಿತು. ನರಸಿಂಹಯ್ಯನವರ ಜೊತೆಗೆ ನನ್ನ ಹಳೆಯ ಮಿತ್ರ ನಾಡಿಗೇರ್ ಗೋವಿಂದ ರಾವ್ ಸಹ ಬಂದು B.I.T. ಯಲ್ಲಿ ಇದ್ದರು. ಅವರೂ ಅವರ ಶ್ರೀಮತಿ ಸುಲೋಚನಾ ಹಾಗೂ ಮೂರು ವರ್ಷದ ಮಗಳು ರೇಖಾ ಸಹಾ ಅಲ್ಲೇ ಇದ್ದರು. ನರಸಿಂಹಯ್ಯನವರ ಸಂಸಾರ ಬರುತ್ತಲೂ ಗೋವಿಂದರಾವ್ ಮುಲುಂಡ್ ಮನೆಗೆ ಹೋದರು. ನಾನು ನನ್ನ ಇನ್ನೊಬ್ಬ ಶಿಷ್ಯೆಯ ತಂದೆ ಡಾಕ್ಟರ್ ವೈದ್ಯನಾಥನ್‌ರವರ ಮನೆಗೆ ಅವರು ಕೊಟ್ಟ ಒಂದು ರೂಮಿನಲ್ಲಿರಲು ಹೋದೆ. ಅಲ್ಲಿ ಹೋದವನು ನನ್ನ ಶ್ರೀಮತಿ ಹಾಗೂ ಮಕ್ಕಳು ಸುಬ್ಬಣ್ಣ ಹಾಗೂ ದಿನೇಶ್ ಇವರುಗಳನ್ನು ಕರೆಸಿಕೊಂಡೆ. ಅಲ್ಲಿಗೆ ಮೈಸೂರು ಅಸೋಸಿಯೇಷನ್ನಿನಿಂದ ಊಟ ತರಿಸಿಕೊಳ್ಳುತ್ತಿದ್ದೆ. ಬೆಳಗಿನ ಉಪಹಾರ, ಕಾಫಿ, ಮಧ್ಯಾಹ್ನದ ಕಾಫಿ ಡಾಕ್ಟರ್ ಮಾಮಿ ಒದಗಿಸುತ್ತಿದ್ದರು. ಡಾಕ್ಟರ್ ಮನೆಯಿಂದ ನಾವು ಬಿಡಬೇಕಾಗಿ ಬಂದಾಗ ಶ್ರೀಮತಿ ಸೀತಮ್ಮ ಎಸ್.ಆರ್.ರಾವ್ ರವರು ತಾವಿದ್ದ ದೌಲತ್ ವಿಲ್ಲಾದ ಮನೆಯಲ್ಲಿ ಒಂದು ಕೋಣೆಯನ್ನು ಬಿಟ್ಟುಕೊಟ್ಟು ನಾವಿರಲು ಅನುವು ಮಾಡಿಕೊಟ್ಟರು. ಅಲ್ಲೂ ಸಹ ಮೈಸೂರು ಅಸೋಸಿಯೇಷನ್‌ನ್ನಿಂದ ಊಟ ತರಿಸುತ್ತಿದ್ದೆ. ಯಥಾ ಪ್ರಕಾರ ಬೆಳಗಿನ ಉಪಹಾರ, ಕಾಫಿ, ಮಧ್ಯಾಹ್ನದ ಕಾಫಿ, ಸೀತಮ್ಮನವರೇ ಒದಗಿಸುತ್ತಿದ್ದರು. ಈ ಎರಡು ಕಡೆಗಳಲ್ಲೂ ಬಾಡಿಗೆಯಿಲ್ಲದೆ ಉಪಚಾರದ ಸಮೇತ ನನಗೆ ವೀಣೆ ಪಾಠದ ಫೀಸನ್ನೂ ತಪ್ಪದೆ ಕೊಡುತ್ತಿದ್ದರು. ಈ ಸಹಾಯವನ್ನು ಮರೆಯಲು ಸಾಧ್ಯವೇ?


1953 ನೇ ಎಪ್ರಿಲ್ ತಿಂಗಳಲ್ಲಿ ನಾನೊಬ್ಬನೇ ಊರಿಗೆ ಹೋದಾಗ ನನ್ನ ಶ್ರೀಮತಿ ಜಂಕ್ಷಾಬಾದ್‌ನ ಮೊದಲ ಮಹಡಿಯಲ್ಲಿದ್ದ ಶ್ರೀಮತಿ ಕೃಷ್ಣಬಾಯಿಯವರ ಮನೆಯಲ್ಲಿ ಪೇಯಿಂಗೆಸ್ಟ್ ಆಗಿ ಇರುವಂತೆ ಏರ್ಪಾಟು ಮಾಡಿಕೊಂಡಿದ್ದಳು. ಅಲ್ಲಿಗೆ ಗೋಪಾಲ ಅಯ್ಯಂಗಾರ್ಯರ ಮನೆಯಿಂದ ನಾವಿಟ್ಟಿದ ಸಾಮಾನುಗಳನ್ನು ತರಿಸಿಕೊಂಡೆವು. ಅಲ್ಲಿಗೂ ಸಹಾ ಮೈಸೂರು ಅಸೋಸಿಯೇಷನ್ನಿನಿಂದ ಎರಡು ಹೊತ್ತು ರಾಮಣ್ಣನವರ ರಸಕವಳ ತರಿಸಿಕೊಳ್ಳುತ್ತಿದ್ದೆವು. ಇಲ್ಲಿದ್ದಾಗಲೇ ನಾನು ಕನ್ನಡ ಸಂಘದಲ್ಲಿ ಮೈಸೂರು ಸಂಗೀತ ಪಾಠ ಶಾಲೆಯನ್ನು ತೆಗೆದು 8–10 ಮಕ್ಕಳಿಗೆ ಬಾಯಿಪಾಠ ಹೇಳುತ್ತಿದ್ದೆ. ನನ್ನ ಶ್ರೀಮತಿ 1954 ಇಸವಿ ಮಾರ್ಚ್ ತಿಂಗಳಲ್ಲಿ ಬಾಣಂತಿತನಕ್ಕೆ ಚಿಕ್ಕಮಗಳೂರಿಗೆ ಮಕ್ಕಳ ಸಮೇತ ಹೋದಳು. ಆಗ ನಾನು ಕುರ್ಲಾದಲ್ಲಿ ಚಾಲ್‌ನಲ್ಲಿ ವಾಸಿಸುತ್ತಿದ್ದ ಎನ್.ಕೃಷ್ಣ ಅಯ್ಯಂಗಾರ್‌ರವರ ಪತ್ನಿಗೆ ವೀಣೆ ಪಾಠ ಹೇಳುತ್ತಿದೆ. ಅವರು ಅದೇ ಸಮಯದಲ್ಲಿ ಚೆಂಬೂರು ಸ್ಟೇಷನ್ ಬಳಿ ಇದ್ದ ದೊಡ್ಡ Self Contained Flatಗೆ ಬದಲಾಯಿಸಿದವರು ಕುರ್ಲಾ ಮನೆಯನ್ನು ನನಗೆ ಕೊಟ್ಟರು. ಅದಕ್ಕೆ ಬಾಡಿಗೆ ಕೇವಲ ಹತ್ತು ರೂಪಾಯಿಗಳು. ಆಮನೆಯಲ್ಲೇ ಏಳು ವರ್ಷಗಳ ಕಾಲ ವಾಸವಾಗಿದ್ದೆವು. ಅಲ್ಲಿದ್ದಾಗ ಅಸೋಸಿಯೇಷನ್ನಿನ ರಜತ ಮಹೋತ್ಸವವಾಯಿತು. ಆಗಿನ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರವರು ಸಮಾರಂಭದ ಉದ್ಘಾಟನೆ ಮಾಡಿ ಅಧ್ಯಕ್ಷತೆ ವಹಿಸಿದ್ದರು. ನನಗೆ Fancy Dress Competition ನಲ್ಲಿ ಆಸ್ಥಾನ ವಿದ್ವಾನ್ ಆಗಿ ಮಾಡಿದ್ದರಿಂದ ಪ್ರಥಮ ಬಹುಮಾನ ದೊರಕಿತ್ತು. ಅಸೋಸಿಯೇಷನ್ನಿನವರು ಮಹಾರಾಜರ ಅಮೃತ ಹಸ್ತದಿಂದ ನನಗೆ ರಜತ ಪದಕ ಪ್ರಧಾನ ಮಾಡಿಸಿದರು. ಆ ವರುಷ ಜೆ.ಎನ್.ಅಯ್ಯರ್‌ರವರು ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದರು.

ಏಳು ಮನೆ ಚೇಲಿ ಪದವಿಯಿಂದ ಕುರ್ಲಾದಲ್ಲಿದ್ದ ನನ್ನದೆಂಬ ಮನೆಯಲ್ಲಿ ಏಳು ವರುಷ ಕಾಲವಾಸವಾಗಿದ್ದು ಈಗಿರುವ ಚೆಂಬೂರಿನ ಸಿಂಧಿ ಸೊಸೈಟಿಯ ಮನೆಗೆ 1960ನೇ ಇಸವಿ ಡಿಸೆಂಬರ್ 23ನೇ ತಾರೀಖು ಅಡಿಯಿಟ್ಟು ಮುವತ್ತೇಳು ವರುಷಗಳಿಗೂ ಮೀರಿ ವಾಸಿಸುತ್ತಿದ್ದೇನೆ. ಈ ಮನೆಯೂ ಸಹ ಸಿಂಧಿ ಸೊಸೈಟಿಯಲ್ಲೇ ವಾಸವಾಗಿದ್ದ ನನ್ನ ವೀಣಾ ಶಿಷ್ಯೆಯೊಬ್ಬರ ಮುಖಾಂತರ ದೊರಕಿತ್ತು. ಹೀಗೆ ಹೆಜ್ಜೆ ಹೆಜ್ಜೆಗೂ ನನ್ನಿಂದ ವೀಣೆ ಕಲಿಯುತ್ತಿದ್ದವರ ಮುಖಾಂತರವೇ ನನಗೆ ಶಾಶ್ವತವಾದ ವಸತಿ ಸೌಕರ್ಯವಾಗಿ ಇಲ್ಲಿ ನೆಲೆಸಲು ಅನುವಾಗಿದೆ.

ಕುರ್ಲಾದಲ್ಲಿರುವವರೆಗೂ ಅಸೋಸಿಯೇಷನ್ನಿನ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಚೆಂಬೂರಿಗೆ ಬಂದ ಮೇಲೆ ಅನಿವಾರ್ಯವಾಗಿ ಅಸೋಸಿಯೇಷನ್ನಿನ ಸದಸ್ಯತ್ವವನ್ನು ಬಿಡಬೇಕಾಗಿ ಬಂತು. ಅಸೋಸಿಯೇಷನ್ನಿನ ಸಂಪರ್ಕವೂ ಕಡಿಮೆಯಾಗಿ ಗಣಪತಿ ವಿಸರ್ಜನೆ ದಿವಸ ಮಾತ್ರ ಹಾಜರಿ ತಪ್ಪದೆ ಹಾಕುವ ಸಂಪ್ರದಾಯವಾಯಿತು. ನಾನು ಸದಸ್ಯತ್ವವನ್ನು ಬಿಟ್ಟರೂ ನನ್ನ ಶ್ರೀಮತಿ (ಜಯಮ್ಮ ಸಿ.ಕೆ.ಎಸ್.ರಾವ್) ಸದಸ್ಯತ್ವವನ್ನು ಪಡೆದು ನಡೆಸಿಕೊಂಡು ಬಂದು ಸಂಪರ್ಕದ ಕೊಂಡಿಯೊಂದನ್ನು ಉಳಿಸಿದ್ದಾಳೆ. ಆದರೆ ನಾನು ಸದಸ್ಯನಲ್ಲದಿದ್ದರೂ ಅಸೋಸಿಯೇಷನ್ನಿನ ಎಲ್ಲಾ ಕಾರ್ಯಕಾರೀ ಸಮಿತಿಯವರು ನನ್ನ ಮೇಲೆ ಅದೇ ಹಿಂದಿನ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಯಾವುದೇ ವಿಶೇಷ ಸಂದರ್ಭಗಳಲ್ಲಾಗಲೀ, ಯಾರಾದರೂ dignitories ಬಂದಾಗಲಾಗಲೀ ನನ್ನ ಪತ್ರ ಮುಖೇನವಾಗಲೀ ಮುಖತಃ ಆಗಲೀ, ದೂರವಾಣಿ ಸಂಪರ್ಕವಾಗಲೀ ಆಹ್ವಾನಿಸಿ ಗೌರವಿಸಿದ್ದಾರೆ. ಇದಕ್ಕೆ ಅಸೋಸಿಯೇಷನ್ನಿನ ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ನಾನು ಅಭಾರಿಯಾಗಿದ್ದೇನೆ.

ಮೈಸೂರು ಅಸೋಸಿಯೇಷನ್ ಆಗಿಗೂ ಈಗಿಗೂ ಇತೋಪ್ಯತಿಶಯವಾಗಿ ಬೆಳೆದಿದೆ. ಸ್ವರ್ಣ ಮಹೋತ್ಸವ, ವಜ್ರ ಮಹೋತ್ಸವಗಳನ್ನು ವಿಜೃಂಭಣೆಯಿಂದ ನೆರವೇರಿಸಿದೆ. ಬಿ.ಜಿ.ಖೇರ್‌ರವರು ಉದ್ಘಾಟಿಸಿದ ಪುಸ್ತಕ ಭಂಡಾರವು ಸಾಕಷ್ಟು ವಿಸ್ತರಿಸಿ ಸದಸ್ಯರಿಗೆ ಪುಸ್ತಕ ವಿತರಣೆಯನ್ನು ಶ್ಲಾಘ್ಯ ರೀತಿಯಲ್ಲಿ ಮಾಡುತ್ತಿರುವುದಲ್ಲದೆ, ಉಚಿತ ವಾಚನಾಲಯದಲ್ಲಿ ದೈನಿಕ, ಮಾಸಿಕವಾಗಿ ಹಾಗೂ ವಾರಪತ್ರಿಕೆಗಳನ್ನು ತರಿಸಿ, ಓದುಗರಿಗೆ ಅನುವು ಮಾಡಿಕೊಟ್ಟಿದೆ. ಈಚೆಗೆ ಕಟ್ಟಡದ ವಿಸ್ತರಣೆ ಸಂದರ್ಭದಲ್ಲಿ ನಿಲ್ಲಿಸಿದ್ದ Mess ಕಾರ್ಯಕ್ರಮವನ್ನು ಪುನಃ ಪ್ರಾರಂಭಿಸಿರುವುದು ತುಂಬಾ ಹರ್ಷದಾಯಕವಾದ ಸಂಗತಿ. ಇದೇ ರೀತಿ ಮೈಸೂರು ಅಸೋಸಿಯೇಷನ್ನು ತನ್ನ 'ಸಹಸ್ರ ಚಂದ್ರದರ್ಶನ' (81 ವರುಷ) ಮಹೋತ್ಸವಲ್ಲದೆ ಶತಮಾನೋತ್ಸವವನ್ನು ಅದ್ಧೂರಿಯಾಗಿ ನೆರವೇರಿಸಿ ಸದಸ್ಯರುಗಳ ಪರಸ್ಪರ ಸ್ನೇಹ ಸಂಬಂಧಗಳ ಬೆಸುಗೆಯಾಗಿ ಶಾಶ್ವತತ್ವ ಪಡೆಯಲಿ ಎಂದು ಹಾರೈಸಿ ನನ್ನ ಈ ಅನಿಸಿಕೆಗಳನ್ನು ಮುಗಿಸುತ್ತೇನೆ

# ಅಸೋಸಿಯೇಷನ್ ಮತ್ತು ಕನ್ನಡ ಪರಿಚಾರಿಕೆ



✍ **ಡಾ. ಜಿ. ಎನ್. ಉಪಾಧ್ಯ**
ಮುಖ್ಯಸ್ಥರು
ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ

ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರಿರುವ ನಗರ ಮುಂಬೈ. ಮುಂಬೈ ಮಹಾನಗರ ಹಾಗೂ ಆಸುಪಾಸಿನಲ್ಲಿ ಇಪ್ಪತ್ತು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಕನ್ನಡಿಗರು ನೆಲೆಸಿದ್ದಾರೆ. ಮುಂಬೈ ಕನ್ನಡಿಗರದು ಸಾಂಘಿಕ ಚಟುವಟಿಕೆಯಲ್ಲಿ ಎತ್ತಿದ ಕೈ. ಮುಂಬೈಯಲ್ಲಿ ಇಂದಿಗೂ ನೂರಾರು ಕನ್ನಡ ಸಂಘ ಸಂಸ್ಥೆಗಳು ಕ್ರಿಯಾಶೀಲವಾಗಿದ್ದು ಈ ವಾಣಿಜ್ಯ ನಗರಿಯಲ್ಲಿ ಕನ್ನಡದ ತೇರನೆಳೆಯುವ ಕಾಯಕದಲ್ಲಿ ನಿರತವಾಗಿವೆ.

ಮುಂಬೈನ ಪ್ರತಿಷ್ಠಿತ ಕನ್ನಡ ಸಂಘ ಸಂಸ್ಥೆಗಳಲ್ಲಿ ಮೈಸೂರು ಅಸೋಸಿಯೇಷನ್ ಮುಂಚೂಣಿಯಲ್ಲಿದೆ. ಈ ಸಂಸ್ಥೆಗೆ ಈಗ 90ರ ಸಂಭ್ರಮ. ಮೈಸೂರು ಅಸೋಸಿಯೇಷನ್ ಕಳೆದ ಒಂಭತ್ತು ದಶಕಗಳಲ್ಲಿ ಅಪೂರ್ವ ಸಾಧನೆಗೈದಿದೆ. ಮಾತುಂಗಾದ ಹೃದಯಭಾಗದಲ್ಲಿ ತನ್ನದೇ ಆದ ಸ್ವಂತ ಸುಸಜ್ಜಿತ ನಿವೇಶನ್, ಕಟ್ಟಡ, ವಾತಾನುಕೂಲಿತ ಅಡಿಟೋರಿಯಂ (300 ಆಸನಗಳಿರುವ ಅಪರೂಪದ ರಂಗಭೂಮಿ), ವಾಚನಾಲಯ, ಕ್ಯಾಂಟೀನ್ ಎರಡು ಸೊಗಸಾದ ಕಿರು ಸಭಾಗೃಹಗಳು ಹೀಗೆ ಒಂದು ಸುಂದರ ಸುಸಜ್ಜಿತ ಭವ್ಯ ಸಂಸ್ಥೆ ಮೈಸೂರು ಅಸೋಸಿಯೇಷನ್ ಎಂದರೆ ತಪ್ಪಾಗದು. ಮುಂಬೈ ಕನ್ನಡಿಗರ ಅಸ್ಮಿತೆಯ ಸಾಕ್ಷಿಪ್ರಜ್ಞೆ ಮೈಸೂರು ಅಸೋಸಿಯೇಷನ್. ಅದು ಕಳೆದ 90 ವರ್ಷಗಳಿಂದ ಕನ್ನಡ ನಾಡು, ನುಡಿ ಸಾಹಿತ್ಯ ಸಂಸ್ಕೃತಿಯ ಬಲವರ್ಧನೆಗೆ ಶ್ರಮಿಸುತ್ತಾ ಬಂದಿದೆ. ವಡಾಲದಲ್ಲಿರುವ ಎನ್‌ಎಕ್‌ಇಎಸ್ ಸಂಸ್ಥೆಯ ಅಭಿವೃದ್ಧಿಯಲ್ಲೂ ಅಸೋಸಿಯೇಷನ್ ಮಹತ್ವದ ಜವಾಬ್ದಾರಿಯನ್ನು ಹೊಂದಿದೆ.

**ರಂಗಚಟುವಟಿಕೆ:–**

ಮೈಸೂರು ಅಸೋಸಿಯೇಷನ್ ಸುರುವಾತಿನಲ್ಲಿ ರಂಗಭೂಮಿ ಚಟುವಟಿಕೆಗೆ ಆದ್ಯತೆ ನೀಡಿದ್ದು ಗೊತ್ತಾಗುತ್ತದೆ. 1927–28ರ ಸಾಲಿನಲ್ಲಿ ಅದು ನಾಟಕವನ್ನು ಸಾದರ ಪಡಿಸಿದ ಸಂಗತಿ ದಾಖಲಾಗಿದೆ. ಮೈಸೂರು ಅಸೋಸಿಯೇಷನ್‌ನ ಇತಿಹಾಸದ ಕುರಿತು, ಅದರ ಸಾಧನೆಯ ಬಗೆಗೆ ಹಿರಿಯ ಸಂಶೋಧಕರಾದ ಡಾ.ಲೀಲಾ ಅವರು ಮಹತ್ವ ಶೋಧ ಲೇಖನವನ್ನೇ ಬರೆದಿದ್ದಾರೆ. ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದ ಬಗೆಯನ್ನು ಅವರು ಹೀಗೆ ದಾಖಲಿಸಿದ್ದಾರೆ.

"ಮೈಸೂರು ಅಸೋಸಿಯೇಷನ್ ಉದಯವಾದದ್ದು(1925) ಮುಂಬಯಿನ ಗಿರಿಗಾಮ್‌ನ ಒಂದು ಚಿಕ್ಕ ಕೊಠಡಿಯಲ್ಲಿ ಒಂದು ಭಾನುವಾರ ಸಂಜೆ ಐದು ಜನ ವೃತ್ತಿನಿರತರು ಮೈಸೂರಿನವರು; ಕೃಷ್ಣಪ್ಪ, ಹೆಚ್.ಐಯಂಗಾರ್, ಚಿದಂಬರರಾವ್, ಎಂ.ಎಸ್.ನಾರಾಯಣ ರಾವ್ ಮತ್ತು ಬಿ.ಎನ್.ಐಯಂಗಾರ್ ಮುಂಬೈ ಗಿರಿಗಾಂವ್‌ನಲ್ಲಿ ಸೇರಿ ಪ್ರತಿ ಭಾನುವಾರ ತಾವು ಕೂಡಬೇಕೆಂದೂ, ಇದರಿಂದ ಮನಸ್ಸು ವಿಕಾಸ ಹೊಂದುವುದೆಂದೂ ಮತ್ತು ಇದು ಒಂದು ಸಾರ್ವಜನಿಕ ವೇದಿಕೆಗೆ ಅಸ್ಥಿಭಾರವೆಂದೂ ಪ್ರಾರಂಭಿಸಿದರು. ಆದರೆ ಕಾಲಕ್ರಮೇಣ ಸದಸ್ಯರ ಸಂಖ್ಯೆ ಸಾಕಷ್ಟು ಹೆಚ್ಚಿ ಗಿರಿಗಾಮ್‌ನಲ್ಲಿ ಜಾಗ ಸಾಕಾಗದೆ ಮಾತುಂಗಾದಲ್ಲಿರುವ ನೆಪ್ಪು ಗಾರ್ಡನ್ ಬಳಿ ಇರುವ ವಲಜಿಬಾಯಿ ಹಾಲಿನಲ್ಲಿ ಬಾಡಿಗೆಗೆ ತೆಗೆದುಕೊಂಡು ತಮ್ಮ ಚಟುವಟಿಕೆಯನ್ನು ಮುಂದುವರಿಸಿದರು. ಇದಕ್ಕೆಲ್ಲಾ ಒಬ್ಬ ಮುಖ್ಯಸ್ಥ ಮತ್ತು ಜವಾಬ್ದಾರಿ ಹೊರುವ ವ್ಯಕ್ತಿ ಬೇಕೆಂದು ಮನಗಂಡು ಆಗ ಮುಂಬೈನಲ್ಲಿ ಹೆಸರುಮಾಡಿದ್ದ ದಿವಾನ್ ಬಹದ್ದೂರ್ ಕೆ.ರಾಮಸ್ವಾಮಿಯವರು ತಮ್ಮ ಒಪ್ಪಿಗೆಯನ್ನು ತಕ್ಷಣ ಕೊಟ್ಟರು. ಮೈಸೂರು ಅಸೋಸಿಯೇಷನ್ ಉದಯವಾದದ್ದು(ಈಜಿಥ 26, 1926) ವಿಧ್ಯುಕ್ತವಾಗಿ ಪ್ರೊ.ಎನ್.ಎಸ್.ಸುಬ್ಬರಾಯರಿಂದ (ಆಗ ಎನ್.ಎಸ್.ಸುಬ್ಬರಾಯರು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಿಲರ್ ಆಗಿದ್ದರು.) ಎಚಿಟಿ 9, 1927 ಆರಂಭಿಸಲ್ಪಟ್ಟಿತು. 1960 ಸೊಸೈಟಿ ರಿಜಿಸ್ಟ್ರೇಷನ್ ಆಯಿತು. ಕ.ರಾಮಸ್ವಾಮಿಗಳು ಪ್ರೆಸಿಡೆಂಟರಾಗಿಯೂ, ಚಂದ್ರಶೇಖರ ಶರ್ಮ ಮೊದಲನೆ ಸೆಕ್ರೇಟರಿಯಾಗಿ ಕಾರ್ಯಸ್ತರಾದರು".

ಮೈಸೂರು ಅಸೋಸಿಯೇಶನ್ ಇಂದು ರಂಗಭೂಮಿ ಸಂಗೀತ, ಕಲೆ, ಸಾಹಿತ್ಯ ಸಂಸ್ಕೃತಿ ಹೀಗೆ ವಿಭಿನ್ನ ನೆಲೆಗಳಲ್ಲಿ ಕರ್ನಾಟಕ ಮಹಾರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಿದೆ. ಅಸೋಸಿಯೇಷನ್‌ನ ಸಾಧನೆಯನ್ನು ಗುರುತಿಸಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದ್ದು ಈಗ ಇತಿಹಾಸ.


ಮೈಸೂರು ಅಸೋಸಿಯೇಷನ್ ನಲ್ಲಿ ಒಳ್ಳೆಯ ಗ್ರಂಥಾಲಯವಿದ್ದು ಮೌಲಿಕ ಪುಸ್ತಕಗಳ ಸಂಗ್ರಹವಿದೆ. ಅಸೋಸಿಯೇಷನ್ ಕಳೆದ ಮೂರು ದಶಕಗಳಿಂದ ತನ್ನದೇ ಆದ ಮುಖವಾಣಿ 'ನೇಸರು' ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವುದು ಉಲ್ಲೇಖನೀಯ ಅಂಶ. ಅಸೋಸಿಯೇಶನ್ ಅನೇಕ ರಾಷ್ಟ್ರಮಟ್ಟದ ನಾಟಕೋತ್ಸವಗಳನ್ನು ಆಯೋಜಿಸಿದ್ದು ಸ್ಮರಣೀಯ ಅಂಶ. ಮಾಸ್ತಿ ಸಾಹಿತ್ಯ ಉತ್ಸವ, ತೇಜಸ್ವಿ ಸಾಹಿತ್ಯ ಉತ್ಸವ, ಡಿವಿಜಿ ಸಂಸ್ಮರಣೆ ಶ್ರೀರಂಗ ಸಂಸ್ಮರಣೆ ಮೊದಲಾದ ಮಹತ್ವದ ವಿಚಾರ ಸಂಕಿರಣಗಳನ್ನು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಹಯೋಗದಲ್ಲಿ ನಡೆಸಿದೆ ಎಂಬುದು ಅಭಿಮಾನದ ಸಂಗತಿ. ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರ ತನ್ನ ಮಳಿಗೆಯನ್ನು ಮುಂಬೈಯಲ್ಲಿ ತೆರೆಯಲು ಮೈಸೂರು ಅಸೋಸಿಯೇಶನ್ ಸಹಕಾರ ಕೇಳಿದ್ದು ಹೆಮ್ಮೆಯ ವಿಷಯ.

**ದತ್ತಿ ಉಪನ್ಯಾಸ ಮಾಲಿಕೆ:–**


ಮೈಸೂರು ಅಸೋಸಿಯೇಶನ್ ಕಳೆದ ಮೂರುವರೆ ದಶಕಗಳಿಂದ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಜೊತೆಗೂಡಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದೆ. ಅಸೋಸಿಯೇಷನ್ ತನ್ನ ಬಂಗಾರ ಹಬ್ಬದ ನೆನಪಿಗೆ ಮುಂಬೈ ವಿಶ್ವವಿದ್ಯಾಲಯದಲ್ಲಿ ದೊಡ್ಡ ಮೊತ್ತದ ದತ್ತಿ ನಿಧಿಯೊಂದನ್ನು ಸ್ಥಾಪಿಸಿದ್ದು ಇದರ ಬಡ್ಡಿ ಹಣದಲ್ಲಿ ಪ್ರತಿವರ್ಷ ತಪ್ಪದೆ ಜಂಟಿಯಾಗಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಉಪನ್ಯಾಸ ಮಾಲಿಕೆ ಈಗ ಮುಂಬೈಯಲ್ಲಿ ಮನೆಮಾತಾಗಿದೆ. ಈ ಮಾಲಿಕೆಯಲ್ಲಿ ಶಿವರಾಮ ಕಾರಂತ, ಕೀರ್ತಿನಾಥ ಕುರ್ತುಕೋಟಿ, ಯು.ಆರ್.ಅನಂತಮೂರ್ತಿ, ಹಾಮಾನಾಯಕ್, ಚಂದ್ರಶೇಖರ ಕಂಬಾರ, ಎಂ.ಎಂ.ಕಲಬುರ್ಗಿ, ಜಿ.ಎಸ್.ಶಿವರುದ್ರಪ್ಪ, ಚಿದಾನಂದ ಮೂರ್ತಿ, ಎಚ್.ಎಸ್.ವೆಂಕಟೇಶಮೂರ್ತಿ, ಚನ್ನವೀರಕಣವಿ, ವಿವೇಕ ರೈ, ನಿಸಾರ್ ಅಹಮದ್, ನರಹಳ್ಳಿ, ಕಾಯ್ಕಿಣಿ ಮೊದಲಾದ ಸಾಹಿತಿಗಳು ಸಾಧಕರು ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದಾರೆ.

ಈ ಮಾಲಿಕೆಯಲ್ಲಿ ಉಪನ್ಯಾಸ ನೀಡಿದ ಅನೇಕ ವಿದ್ವಾಂಸರು ತಮ್ಮ ವಿಚಾರಧಾರೆಯನ್ನು ಲೇಖನರೂಪದಲ್ಲಿ ತಂದಿರುವುದು ಗಮನೀಯ ಅಂಶ. ಮೈಸೂರು ಅಸೋಸಿಯೇಷನ್ ಕ್ರಿಯಾಶೀಲತೆಗೆ, ಅದ್ಭುತ ಸಾಧನೆಗೆ ಅನೇಕರು ಶ್ರಮಿಸಿದ್ದಾರೆ. ಅವರ ಸಾಧನೆ ಸಾರ್ಥಕವಾಗಿದೆ. ಕಳೆದ ಮೂರು ದಶಕಗಳಿಂದ ಈ ಸಂಸ್ಥೆಯ ಏಳಿಗೆಗೆ ಶ್ರಮಿಸುತ್ತಿರುವ ಡಾ. ಮಂಜುನಾಥ್, ಮಂಜುನಾಥಯ್ಯ ಅವರ ಸಾಧನೆ ಎಲ್ಲರಿಗೂ ಅನುಕರಣೀಯ ಅಂಶ. ಮೈಸೂರು ಅಸೋಸಿಯೇಷನ್ ಶತಮಾನೋತ್ಸವದತ್ತ ದಾಪುಗಾಲು ಹಾಕುತ್ತಿದೆ. ಅಸೋಸಿಯೇಷನ್ ಇನ್ನಷ್ಟು ಸಾಧನೆ ಮಾಡುವಂತಾಗಲಿ ಎಂದು ಮನಸಾ ಹಾರೈಸುವೆ. ■


## ಅಸೋಸಿಯೇಷನ್‌ಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಸಂದರ್ಶಕರ ಡೈರಿಯಲ್ಲಿ ಬರೆದ ಗಣ್ಯರ ಹಸ್ತಾಕ್ಷರ.





ಪಿ.ಬಿ. ಶ್ರೀನಿವಾಸರ ಹಸ್ತಾಕ್ಷರ.





ಹಂಪಾನಾ ಅವರ ಹಸ್ತಾಕ್ಷರ.





ಕೆ.ಎಸ್. ಅಶ್ವಥ್ ಅವರ ಹಸ್ತಾಕ್ಷರ.




ಪಂ. ಭೀಮಸೇನ ಜೋಶಿ ಅವರ ಹಸ್ತಾಕ್ಷರ.



ಗಂಗೂಬಾಯಿ ಹಾನಗಲ್ ಮತ್ತು ಕೃಷ್ಣಾ ಹಾನಗಲ್ ಅವರ ಹಸ್ತಾಕ್ಷರ.




ದೇ. ಜವರೇಗೌಡ ಅವರ ಹಸ್ತಾಕ್ಷರ.

**ಪ್ರಥಮ ಸ್ಥಾನ ಪಡೆದ ಕವನ : ರೂ. 10,000/-**

# ದಣಪೆಯ ಈಚೆ ಬದಿಗೆ

ಎತ್ತಗೋ ಫೇರಿ ಹೊರಟ ಕಾಲು ಬಾಲಗಳಿಲ್ಲದ ಅಸಂಖ್ಯ
ರೇಖೆಗಳು ಹಠಾತ್ತನೆ
ನಿಂತು ಬಿಟ್ಟವೆ ತುಟಿ ಮೇಲೆ..
ಇರುಳಲ್ಲಿ ಬಯಕೆಗಳ ರಂಧ್ರ ಕೊರೆಯುವ
ನತ್ತು ಬತ್ತಿಸಿಕೊಂಡಿದೆ ಹೊಳಪ..
ಕೇಳುವುದಿಲ್ಲವೇ, ರೆಪ್ಪೆಗಳ ಕಾಲ್ಮಣೆ ಮೇಲೆ
ಕುಳಿತ ಕನಸು ಯಾವಾಗ ಎದ್ದು ಹೋಗುತ್ತದದೆಂದು?
ಮುಂಗುರುಳು ಮಾತ್ರ ಕತ್ತಲನೇ ಕುಡಿದು ಬದುಕಿದೆ
ಬರೀ ನಿನ್ನ ಸ್ಪರ್ಶದ ಇಚ್ಛೆಗಲ್ಲ,
ಮತ್ತೇನನೋ ಬಚ್ಚಿಡಲು...

* * *

ಕಿಟಕಿಯ ಎರಕಿಲುಗಳಲ್ಲಿ ಮಡಚಿಟ್ಟ ಬಿಂಜಲುಗಳ
ಅಂಚು ಹೊಲಿಯಬೇಕಿತ್ತು,
ನೂಲು ಮುಗಿದಿದೆ..
ಉಗುರಿನ ಬಣ್ಣ ಹುರುಪೆ ಏಳುತ್ತಿರುವಾಗ,
ಬೆರಳು ನಿನ್ನ ತಲೆಗೂದಲ ವಾಡೆಯಲ್ಲೆಲವ ಭ್ರಮೆಯಲ್ಲೇ ಸುಖಿಸಿ
ಸುಮ್ಮಗಿದೆ..
ನನ್ನ ಹೆರಳು ಕೆದರುವ ಬದಲು ಅದೇನು ಜಂತಿಗಳ, ಜೋಮು
ಹಿಡಿದ ಪಾಟಿ ಕಲ್ಲುಗಳು ನೋಡುತ್ತ ನಿಂತಿದ್ದಿ?
ಬರೀ ಕನಸಿನ ಬಿಲ್ಲೆಗಳ ಅಚ್ಚು ಹಾಕುವ
ಟಂಕಶಾಲೆಯಾಗಿದೆ ಎದೆಗೂಡು..
ಕಿಂಕರ್ ಹೂವಿನ ಪಕಳೆ ಹಾಸಿದ ಕಣ್ಣುಗಳು ಕಂಬನಿಯ ತಂಬುಕಿತ್ತು
ಬರಿದಾಗುವುದೊಂದು ಬಾಕಿ...

* * *

ನಿನ್ನ ಅಂಗಾಲ ಗೆರೆಗಳ ಕಲೆ ಮೂಡುತ್ತಿದೆ ಇಲ್ಲೆಲ್ಲ,
ಬರುವಾಗ ರಂಗೋಲಿಯ ಮೆಟ್ಟಿಕೊಂಡು ಬಂದೆಯೇ?
ಹೋಗುವಾಗ ದಣಪೆಯ ಸರಗೋಲ ಹಾಕಿಕೊಂಡು ಹೋಗು,
ಅಂಗಳದ ತುಂಬ ಹೂ ಗಿಡಗಳು, ಈಗಷ್ಟೇ ಕಣ್ತೊಡೆದ
ಸೇವಂತಿಗೆ ಹಿಳ್ಳುಗಳು..
ಹರಿವೆಕಣ್ಣದಲ್ಲಿ ಸೊಪ್ಪು ಮುರಿದಿಲ್ಲ ಬೇರೆ..
ನೀರು ಹಾಕಿ ವಾಗತಿ ಮಾಡಬೇಕಿತ್ತು,
ಅವರಿವರು ಕೇಳಿದರೆ ಧಾರಾಳ ಕಿತ್ತ
ಕೊಡಬೇಕಿತ್ತು,
ಹಾಳು ಕೈ ನಡುಗುತ್ತದೆ..
ಅರೆ! ಹೊರಡುವುದಿಲ್ಲವೇ?
ಶಾಲೆಯಿಂದ ಪುಟ್ಟಿ ಬರುವ ಹೊತ್ತಾಯ್ತು!



– ಚೈತ್ರಿಕಾ ಶ್ರೀಧರ್ ಹೆಗಡೆ, ಸಿದ್ಧಾಪುರ

**ದ್ವಿತೀಯ ಸ್ಥಾನ ಪಡೆದ ಕವನ : ರೂ. 5,000/-**

# ಅಪರೂಪಕೊಮ್ಮೊಮ್ಮೆ

ಅಪರೂಪಕೊಮ್ಮೊಮ್ಮೆ ನನ್ನವನು ನಕ್ಕಾಗ
ಮಲ್ಲಿಗೆಯ ಮೊಗುಗಳು ಅರಳಿದಂತೆ
ಇರುಳ ಸೆರಗನು ಹೊದ್ದ ಮುಗಿಲ ಮಂಟಪದಲ್ಲಿ
ತುಂಬು ಚಂದ್ರನ ಬಿಂಬ ಮೂಡಿದಂತೆ

ಅಪರೂಕೊಮ್ಮೊಮ್ಮೆ ನಡುಬಳಸಿ ನಿಂತಾಗ
ಜೀವ ಮಿಡಿತದ ಹಾಡು ಗುನುಗಿದಂತೆ
ಮುಸ್ಸಂಜೆ ನಶೆಯೇರಿ ಹಾಲಬೆಳದಿಂಗಳದು
ಇಳಿದಿಳಿದು ಇಳೆಯೆಲ್ಲ ನಾಚಿದಂತೆ

ಅಪರೂಕೊಮ್ಮೊಮ್ಮೆ ಮಡಿಲ ಮಗುವಾದಾಗ
ಹೃದಯ ಹೂಬನವಾಗಿ ಹಿಗ್ಗಿದಂತೆ
ಹರಿವ ನದಿ ನೀರ ಅಲೆ ಮೌನದಾಲಾಪದಲಿ
ದಿವ್ಯಸಂಗೀತವನು ಹಾಡಿದಂತೆ

ಅಪರೂಕೊಮ್ಮೊಮ್ಮೆ ಗೆಳೆಯನಂತಾದಾಗ
ಎದೆಯ ಕಳವಳವೆಲ್ಲ ಕರಗಿದಂತೆ
ಮೊದಲ ಮಳೆ ಬಂದ ಕ್ಷಣ ನೆಲವೆಲ್ಲ ತಂಪಾಗಿ
ಹುಡಿಮಣ್ಣ ಸೌಗಂಧ ಹರಡಿದಂತೆ

ಅಪರೂಕೊಮ್ಮೊಮ್ಮೆ ಸವಿಗನಸು ಕಂಡಿರುಳು
ನಿದ್ದೆಗಣ್ಣಲೆ ನಕ್ಕು ಮಗ್ಗುಲಾದಂತೆ
ಬಾನ ಮನೆಯಂಗಳದಿ ಇರುಳ ನೀರನು ಚೆಲ್ಲಿ
ಚುಕ್ಕಿಗಳ ರಂಗೋಲಿ ಬಿಡಿಸಿದಂತೆ.

ಅಪರೂಕೊಮ್ಮೊಮ್ಮೆ ನಾ ಮುನಿದುಕೊಂಡಾಗ
ಬಳಿಸಾರಿ ಮೈದಡವಿ ಒಲಿಸಿಕೊಂಡಂತೆ
ದೇವರೆದುರಿನ ದೀಪ ಕುಡಿ ಚಾಚಿದಂತೆಲ್ಲ
ಬಳುಬಳುಕಿ ಗುಡಿಯೆಲ್ಲ ಬೆಳಗಿದಂತೆ.



– ಛಾಯಾ ಭಗವತಿ, ವಿಜಯನಗರ

## ತೃತೀಯ ಸ್ಥಾನ ಪಡೆದ ಕವನ : ರೂ. 3,000/-

# ಹೆಣ್ಣಾಗಬೇಕು

ಹಕ್ಕಿಯಾಗಬೇಕು
ಪಂಜರದಲ್ಲಿ ಬಂಧಿಯಾಗಲಾರದ, ಗಿಳಿಪಾಠಕ್ಕೆ ಪಕ್ಕಾಗದ
ಆಕಾಶದೆತ್ತರಕ್ಕೆ ಹಾರಿ
ನೀಲಿಬಾನಲಿ ಬಿಮ್ಮನೆ ವಿಹರಿಸುವ ಹದ್ದಾಗಬೇಕು.

ಹೂವಾಗಬೇಕು
ಯಾರ ಜಡೆಯೂ ಏರದ,
ದೊಡ್ಡ ಮಹಲುಗಳ ಚಿತ್ತಾರದ ಹೂದಾನಿ ಸೇರದ
ತನ್ನಷ್ಟಕ್ಕೆ ತಾನು ಬಿರಿದು ಕಂಪು ಚೆಲ್ಲುವ ಆಕಾಶ ಮಲ್ಲಿಗೆಯಾಗಬೇಕು
ನದಿಯಾಗಬೇಕು

ಅಣೆಕಟ್ಟುಗಳ ಗೋಡೆಯ ಹಿಂದೆ ಕಣ್ಣೀರಿಡದ,
ಕಣಿವೆ ಕಂದರಗಳ ಕೊರೆದು,
ಕಾಡು ಮೇಡುಗಳಲ್ಲಿ ಜಲಪಾತವಾಗಿ
ಸೊಕ್ಕಿ ಧುಮ್ಮಿಕ್ಕುವ ಬ್ರಹ್ಮಪುತ್ರೆಯಾಗಬೇಕು(ಕಾಳಿಯಾಗಬೇಕು)

ಹೆಣ್ಣಾಗಬೇಕು
ಮೊಲೆಕಟ್ಟಿನ ಭಾರ, ಬಣ್ಣಗಳ ಸೋಗು, ಮೂಗುತಿಯ ಹೊರೆ
ಕಾಲಂದಿಗೆಗಳ ಬೇಡಿ, ಇದಾವುದೂ ಇಲ್ಲದ,
ಸಾಗರನ ಅನಂತತೆಯ ಬೆತ್ತಲೆ ಮೈಗೆ ಆವಾಹಿಸಿಕೊಂಡು
ಕಡಲ ಗಾಳಿ, ಅಲೆಗಳಿಗೆ ಸಡ್ಡು ಹೊಡೆದು ನಿಂತ
ಅಪ್ಪಟ ಪ್ರಕೃತಿಯಾಗಬೇಕು.



– ವೀಣಾ ಬಡಿಗೇರ, ಬೆಳಗಾವಿ

## 'ನೇಸರು' ಜಾಗತಿಕ 'ಕನ್ನಡ ಕವನ ಸ್ಪರ್ಧೆ' - 2016ರ ಫಲಿತಾಂಶ

1. ಪ್ರಥಮ ಸ್ಥಾನ ಪಡೆದ ಕವನ – ದಣಿವೆಯ ಈಚೆ ಬದಿಗೆ.
   ಕವಿ – ಚೈತ್ರಿಕಾ ಶ್ರೀಧರ್ ಹೆಗಡೆ, ಸಿದ್ದಾಪುರ ತಾಲೂಕು
2. ದ್ವಿತೀಯ ಸ್ಥಾನ ಪಡೆದ ಕವನ – ಅಪರೂಪಕ್ಕೊಮ್ಮೊಮ್ಮೆ
   ಕವಿ – ಛಾಯಾ ಭಗವತಿ, ವಿಜಯನಗರ, ಬೆಂಗಳೂರು
3. ತೃತೀಯ ಸ್ಥಾನ ಪಡೆದ ಕವನ – ಹೆಣ್ಣಾಗಬೇಕು
   ಕವಿ – ವೀಣಾ ಬಡಿಗೇರ, ಬೆಳಗಾವಿ

ಪ್ರೋತ್ಸಾಹಕ ಬಹುಮಾನಕ್ಕೆ ಅರ್ಹವಾದ ಕವನಗಳು.

ಕವನ – ನಾನೊಬ್ಬನೇ ಇದ್ದೇನೆ
ಕವಿ – ಗಣಪತಿ ದಿವಾನ, ಉಡುಪಿ
ಮತ್ತು
ಕವನ – ಎಲೆ ಎಲೆಯ ಎದೆಯ ದನಿ
ಕವಿ – ರಾಮಚಂದ್ರ ಪೈ, ಮೂಡುಬಿದರೆ

## ಪ್ರೋತ್ಸಾಹಕ ಬಹುಮಾನ ಪಡೆದ ಕವನ : ರೂ. 1,000/-

# ನಾನೊಬ್ಬ ಇದ್ದೇನೆ

ಬದುಕು ಸಾಗರದಲ್ಲಿ ಸುಳಿ ಎದ್ದು ಗುಳಿ ಬಿದ್ದು,
ಈಜಲಾಗದು ಇನ್ನು ಎನ್ನ ಕೈಲಿ.
ಅಯ್ಯಾ ಇದ್ದಿರಿ ದೇವರು ನೀವೆಲ್ಲ,
ಇತ್ತ ನೋಡಿರಿ ಒಮ್ಮೆ- ನಾನೊಬ್ಬ ಇದ್ದೇನೆ.

ದೋಣಿ ಹತ್ತಿದರವರು. ಕಂಡಿಲ್ಲ ಇದುವರೆಗೆ,
ನೀವೇರಿ ಕುಳಿತಂಥಾ ದೊಡ್ಡ ಹಡಗು.
ಮೂಲೆಯಲು ಆದೀತು ಹತ್ತಿ ಕೂರಿಸಿಕೊಳ್ಳಿ,
ಬೇರೇನೂ ಬೇಕಿಲ್ಲ – ನಾನೊಬ್ಬ ಇದ್ದೇನೆ.

ವೇಗದಲಿ ಹೋಗುವುದು ನಿಮಗೆ ತಿಳಿದಿದೆಯಂತೆ.
ನನಗ್ಯಾರು ಕಲಿಸಿಲ್ಲ ಅದನೆಲ್ಲವ.
ಅಕ್ಷರವು ಬರಲಿಲ್ಲ, ಮಾತು ಮರೆಯಲು ಇಲ್ಲ.
ಸುಮ್ಮನಿರುವೆನು ನೋಡಿ – ನಾನೊಬ್ಬ ಇದ್ದೇನೆ.

ಬಣ್ಣ ಬಣ್ಣದ ಹೂ ಸುವಾಸನೆಯ ರುಚಿ ಗೊತ್ತು.
ಮುಳ್ಳುಕಡ್ಡಿಯ ಕಟು ನೋವು ಗೊತ್ತು.
ಬದುಕಿನಾಟದಿ ಕಲಿತ ಪಾಠಗಳು ಮಾತ್ರ,
ಮತ್ತೇನೂ ತಿಳಿಯದವ – ನಾನೊಬ್ಬ ಇದ್ದೇನೆ.

ನಮಗದೇ ಆಕಾಶ, ಸುರಿಯುವ ಹನಿ ನೀರು.
ಹಸಿರಮ್ಮ ಕೊಡುವಂಥ ಜೀವಗಾಳಿ.
ಮಣ್ಣು ಮೈ ಬಣ್ಣ, ರಕ್ತ ಕೆಂಪೇ ಎನದು,
ಬೇರೆ ಮಾಡುವಿರೇಕೆ – ನಾನೊಬ್ಬ ಇದ್ದೇನೆ.

ಹೊಟ್ಟೆಯೊಳಗೊಳಗಿಂದ ಹೊತ್ತಿ ಉರಿಯುವ ಬೆಂಕಿ.
ಕಣ್ಣು ತುಂಬಿದೆ ಬೆಂದು ಆವಿ ನೀರು.
ಸಾಧಿಸಲು ಬರುವೆ ನಾ, ಹಿಂದೆ ಉಳಿಸುವಿರೇಕೆ,
ಜೊತೆಗೆ ಸೇರಿಸಿಕೊಳ್ಳಿ – ನಾನೊಬ್ಬ ಇದ್ದೇನೆ.

ಬಿದ್ದವರ ಒದೆಯದಿರಿ, ಎತ್ತಿ ಕರೆಯಿರಿ ಮುಂದೆ.
ನಮಗೂ ಆ ದೂರ ಸೇರಬೇಕು.
ನಾನು ಬಂದು ಮುಂದೆ, ನಮ್ಮವರನೆತ್ತುವೆನು.
ಅವಕಾಶ ಕಲ್ಪಿಸಿರಿ – ನಾನೊಬ್ಬ ಇದ್ದೇನೆ.



– ಗಣಪತಿ ದಿವಾನ, ಉಡುಪಿ

## ಪ್ರೋತ್ಸಾಹಕ ಬಹುಮಾನ ಪಡೆದ ಕವನ : ರೂ. 1,000/-

# ಎಲೆಎಲೆಯ ಎದೆಯ ದನಿ

ಯಾವ ಜನ್ಮದ ಋಣವೋ ನಮ್ಮೆಲ್ಲರನು ಮತ್ತೆ
ಏಕಸೂತ್ರದೆ ಇಲ್ಲಿ ಬಂಧಿಸಿಹುದು
ಬೇಡಿಕೊಳ್ಳದೆ ನಾವು ಕಳೆದ ವಸಂತದಲ್ಲಿ
ಒಂದೆ ವೃಕ್ಷದ ಮೇಲೆ ಪಲ್ಲವಿಸಿದೆವು

ಮೊದಲು ಮುಂಜಾವದಲಿ ಬರಿ ಮೂಕ ಮರ್ಮರವು
ಮೆಲುದನಿಯ ಪಿಸುಗು ರವಿಯುದಿಸುವತನಕ
ಮಂದಮಾರುತ ಬೀಸಿ, ಅಲುಗಲುಗಿ ತಲೆದೂಗಿ
ನಮ್ಮಿರವ ಸಾರಿದೆವೆಮಗೆ ಮೌನ ಕನಕ

ಹಿಮದ ಚಾದರ ಹೊದ್ದು ಮುಸುಕೆಳೆದು ಮಲಗಿದೆವು
ಚಳಿಯ ಚುಮುಚುಮು ಮಸುಕು ನಸುಕಿನಲ್ಲಿ
ಮಳೆಯ ಹನಿಯಲಿ ಮಿಂದು ಹಳೆ ನೆನಪಿನಲಿ ನೆಂದು
ಹಸಿರೆ ಉಸಿರಾಗಿ ನಳನಳಿಸಿತಿಲ್ಲಿ

ನೆಲದೊಡಲಿನಿಂದೆಮಗೆ ಅನ್ನ ನೀರನು ಉಣಿಸಿ
ಸಾಕಿ ಸಲಹಿದಳಾಕೆ ತಾಯಿಬೇರು
ಬಿರುಬಿಸಿಲ ಬೇಗೆಯಲಿ ನೆಳಲ ತಂಪನು ಸುರಿಸಿ
ಜೀವಕಳೆ ಮರಳಿಸಿದವರು ಯಾರು?

ಕಾಲ ಮಾಗಿದ ಬಳಿಕ ತೆರಳದೇ ವಿಧಿಯಿಲ್ಲ
ಜಗದ ನಿಯಮವ ಮೀರಿ ನಡೆವುದೆಂತು?
ಅಗಲಿಕೆಯ ನೋವು ಎದೆಯೊಳಗೆ ತುಂಬಿರಲು
ಮನವು ಮರೆಯುವುದೆ ಕರುಳು ನಂಟು?

ಒಂದೆ ಕುಡಿಯಲಿ ಜನಿಸಿ ಬಾಳಿದೆವು ಜೊತೆಯಾಗಿ
ಈ ಎಲ್ಲ ಆರು ಋತುಮಾನಗಳಲಿ
ಮರುಜನುಮವ ತಳೆದು ಒಂದೆಡೆಯೇ ಚಿಗುರೋಣ
ಬರಲಿರುವ ಹೊಸ ಸಂವತ್ಸರದಲಿ.

– ರಾಮಚಂದ್ರ ಪೈ, ಮೂಡುಬಿದರೆ



# ವಿಜೇತ ಕವಿಗಳ ಕಿರುಪರಿಚಯ

**ಚೈತ್ರಿಕಾ ಶ್ರೀಧರ್ ಹೆಗಡೆ:** ಮೂಲತಃ ಉತ್ತರಕನ್ನಡ ಜಿಲ್ಲೆಯ ಹಾರ್ಸಿಕಟ್ಟೆಯ ಸಿದ್ಧಾಪುರದವರು. ಎಂ. ಜಿ. ಸಿ. ಕಾಲೇಜಿನಲ್ಲಿ ಬಿ.ಕಾಂ. ಪದವಿಯನ್ನು ಪಡೆದಿದ್ದಾರೆ. ಫ್ರಿಲಾನ್ಸರ್ ಆಗಿ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕವಿತೆ, ಕಥೆಗಳನ್ನು ಓದುವುದು, ಬರೆಯುವುದು, ಹಾಡುವುದು ಇವರ ಹವ್ಯಾಸವಾಗಿದೆ. ಈವರೆಗೆ ಐವತ್ತಕ್ಕೂ ಹೆಚ್ಚು ಕವನಗಳನ್ನು ಬರೆದಿದ್ದಾರೆ. ಕವನ ಸಂಕಲನವನ್ನು ತರುವ ನಿರೀಕ್ಷೆಯಲ್ಲಿದ್ದಾರೆ. ಐದರಿಂದ – ಆರು ಕಥೆಗಳನ್ನು ಕೂಡ ಬರೆದಿದ್ದಾರೆ.

ಮೊಬೈಲ್: 9483415086/9483451598

ಇಮೇಲ್: chaitra8may@gmail.com

**ಛಾಯಾ ಭಗವತಿ :** ಕಲ್ಬುರ್ಗಿ ಜಿಲ್ಲೆಯ ನಾರಾಯಣಪುರ ಡ್ಯಾಮಿನಲ್ಲಿ 1977ರಲ್ಲಿ ಹುಟ್ಟಿ, ಅಲ್ಲಿಯೇ ಬೇಳೆದು ಬಾಲವಾಡಿಯಿಂದ ನಾಲ್ಕನೆಯ ಇಯತ್ತೆಯವರೆಗೆ ಓದು. ನಂತರ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಎಸ್ಸೆಸ್ಸೆಲ್ಸಿವರೆಗೆ ಶಿಕ್ಷಣ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಪಿಯುಸಿ ಅಭ್ಯಾಸ.
ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಬಿ.ಎಸ್ಸಿ. ಗುಲ್ಬರ್ಗ ವಿಶ್ವವಿದ್ಯಾಲಯದಿಂದ 2000ದಲ್ಲಿ ಮೊದಲ ಸ್ಥಾನ ಹಾಗೂ ಎರಡು ಚಿನ್ನದ ಪದಕಗಳೊಡನೆ ಎಂ.ಎ. ಇಂಗ್ಲಿಷ್ ಸ್ನಾತಕೋತ್ತರ ಪದವಿ. ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಹಾಗೂ ಎಂಇಐ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಅರೆಕಾಲಿಕ ಇಂಗ್ಲಿಷ್ ಅಧ್ಯಾಪಕಿಯಾಗಿಯೂ ಕೆಲಸ ಮಾಡಿದ ಅನುಭವ. ಬಳಿಕ ಸಾಫ್ಟ್‌ವೇರ್‌ನ, ಸುಜಯ್ ನೆಟ್ ಪ್ರೈ. ಲಿ., ಇಂಟಿಗ್ರಾ ಮೈಕ್ರೊಸಾಫ್ಟ್, ಫಿಲಿಪ್ಸ್ ಸಾಫ್ಟ್‌ವೇರ್ ಸಿಸ್ಟಮ್ಸ್, ಮುಂತಾದ ಕಂಪನಿಗಳಲ್ಲಿ ಟೆಕ್ನಿಕಲ್ ರೈಟಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವವಿದೆ. 'ಪುಟಾಣಿ ಕೆಂಪು ಶೂ', 'ಚಂದ್ರನಿಗೆ ಟ್ಯಾಟೂ' ಇವರ ಕವನ ಸಂಕಲನಗಳು ಸಂಚಯ, ತಿಂಗಳು, ಮಲ್ಲಿಗೆ, ಹೊಸತು, ಮಯೂರ ಮುಂತಾದ ಪತ್ರಿಕೆಗಳಲ್ಲಿ ಕವಿತೆಗಳು, ಲಲಿತ ಪ್ರಬಂಧಗಳು ಪ್ರಕಟವಾಗಿವೆ. 'ನೆಮ್ಮದಿಯ ಬದುಕಿಗೆ ನಾಲ್ಕು ಮಾತುಗಳು' ಎಂಬ ಪುಟ್ಟ ಅನುವಾದದ ಪುಸ್ತಕವನ್ನು ಬೆಂಗಳೂರಿನ 'ದಿವ್ಯ ಜೀವನ ಸಂಘ'ದವರು ಪ್ರಕಟಿಸಿದ್ದಾರೆ.
ಬೆಂಗಳೂರು ಆಕಾಶವಾಣಿಯಲ್ಲಿ ಎಫ್ಎಮ್ ರೈನ್‌ಬೋ ನಿರೂಪಕಿಯ ಕೆಲಸವನ್ನು ಎರಡು ವರ್ಷ ಮಾಡಿದ ಕೆಲಸ ಅವರಿಗೆ ತುಂಬ ಖುಷಿ ಕೊಟ್ಟ ಕೆಲಸ. ಮೊದಲ ಕಥೆ 'ಹೊಲವೆ ನಮ್ಮ ಬದುಕು' ಕನ್ನಡ ಸಂಘರ್ಷ ಸಮಿತಿಯವರು ಏರ್ಪಡಿಸಿದ್ದ ರಾಜ್ಯ ಮಟ್ಟದ ಕಥಾ ಸ್ಪರ್ಧೆಯಲ್ಲಿ ಅನುಪಮಾ ನಿರಂಜನ ಸ್ಮೃತಿ ಮೊದಲ ಬಹುಮಾನ ಗಳಿಸಿದೆ. ಉದಯವಾಣಿಯ ಕರಾವಳಿ ಆವೃತ್ತಿಯಲ್ಲಿ ನನ್ನ ಹಿಮಾಲಯದ ಪ್ರವಾಸ ಕಥನ ಹಿಮಗಿರಿಯಾನ 12 ವಾರಗಳ ಕಾಲ ಪ್ರಕಟಗೊಂಡಿದೆ. ಸಧ್ಯಕ್ಕೆ ಅನುವಾದ ಕ್ಷೇತ್ರದಲ್ಲಿ ಮನೆಯಿಂದಲೇ ಕೆಲಸ. ಶೇಕ್ಸ್‌ಪಿಯರನ 12 ನಾಟಕಗಳನ್ನು ಚುಟುಕಾಗಿ, ಕಥಾ ರೂಪದಲ್ಲಿ ಮಕ್ಕಳಿಗಾಗಿ ಅನುವಾದಿಸಿದ್ದಾರೆ.

**ಶ್ರೀಮತಿ ವೀಣಾ ಬಡಿಗೇರ :** ಇವರು ಮೂಲತಃ ಕೊಪ್ಪಳ ಜಿಲ್ಲೆಯವರು. ಇಂಜಿನಿಯರಿಂಗ್ ಪದವೀಧರರಾದ ಇವರು ಇಂಡಸ್ಟ್ರೀಯಲ್ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಶಿಕ್ಷಕ ವೃತ್ತಿಯಲ್ಲಿ ಆಸಕ್ತರಾಗಿರುವ ಇವರು ದಯಾನಂದ ಸಾಗರ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ಇಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದಾರೆ. ಮದುವೆಯ ನಂತರ ಬೆಳಗಾವಿಗೆ ಸ್ಥಳಾಂತರಗೊಂಡಿದ್ದರಿಂದ ಪ್ರಸ್ತುತ ಗೊಗ್ಟೆ ಇನ್ಸ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಬೆಳಗಾವಿ ಇಲ್ಲಿ ಅಸಿಸ್ಟಂಟ್ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಾಲ್ಯದಿಂದಲೇ ಸಾಹಿತ್ಯ ಮತ್ತು ಸಂಗೀತದಲ್ಲಿದಲ್ಲಿ ಆಸಕ್ತರಾಗಿರುವ ಇವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಧಾರವಾಡರ ವಿದುಷಿ ಶ್ರೀಮತಿ ಲತಾ ಬುರ್ಲಿಯವರಲ್ಲಿ ಕಲಿತಿದ್ದಾರೆ. ಹಲವಾರು ಕವಿಗೋಷ್ಟಿಗಳಲ್ಲಿ ಭಾಗವಹಿಸಿರುವ ಇವರಿಗೆ ಹಲವಾರು ಪ್ರಶಸ್ತಿಗಳೂ ಕೂಡ ಬಂದಿವೆ.

ಮೊಬೈಲ್: 8147526764
ಇಮೇಲ್: gulmoharveena@gmail.com

**ನಾನು ಗಣಪತಿ ದಿವಾಣ :** ಅವರು ಮೂಲತಃ ಕಾಸರಗೋಡಿನವರಾದರೂ , ಕಳೆದ ಹದಿನಾರು ವರ್ಷದಿಂದ ಉಡುಪಿಯಲ್ಲೇ ನೆಲೆನಿಂತಿದ್ದಾರೆ. ಇವರು ಪ್ರಸ್ತುತ ಎಂ.ಜಿ.ಎಂ. ಕಾಲೇಜಿನಲ್ಲಿ ಪ್ರಥಮ ಬಿ.ಎಸ್ಸಿ. ವಿದ್ಯಾರ್ಥಿ. ಇವರ ತಂದೆ ದಿವಾಣ ಗೋಪಾಲಕೃಷ್ಣ ಭಟ್ ಉಡುಪಿಯ ಅಂಬಲಪಾಡಿ ದೇವಾಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಓದುವುದು, ಛಾಯಾಗ್ರಹಣ, ಚಿತ್ರಕಲೆ, ಯಕ್ಷಗಾನದಲ್ಲಿ ಆಸಕ್ತಿ ಹೊಂದಿದ್ದಾರೆ.

**ರಾಮಚಂದ್ರ ಪೈ:** ಅವರು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ ನಿವಾಸಿ, ಸ್ಥಳೀಯ ಶ್ರೀ ಮಹಾವೀರ ಕಾಲೇಜಿನಲ್ಲಿ ವಾಣಿಜ್ಯ ಪದವಿ ಪಡೆದ ಬಳಿಕ, "ಆಕರ್ಷನ್" ಎಂಬ ಜವಳಿ ಮಳಿಗೆಯನ್ನು ನಡೆಸುತ್ತಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲೇ ಇದ್ದ ಸಾಹಿತ್ಯಾಸಕ್ತಿ, ಬರೆಯುವ ಹವ್ಯಾಸ ಹಾಗೇ ಮುಂದುವರಿದಿದೆ. ಹಲವಾರು ಕಥೆ, ಕವಿತೆಗಳು ನಾಡಿನ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಾಹಿತ್ಯ ಸಮ್ಮೇಳನ, ಸಾಹಿತ್ಯ ಅಕಾಡೆಮಿ, ಮೈಸೂರು ದಸರಾ ವತಿಯಿಂದ ನಡೆಸಲಾರ ಕವಿಗೋಷ್ಟಿಗಳಲ್ಲಿ ಭಾಗವಹಿಸಿರುತ್ತಾರೆ. ಆಕಾಶವಾಣಿಯಲ್ಲಿ ಹಾಗೂ ದೂರದರ್ಶನದಲ್ಲಿ ಇವರ ಭಾವಗೀತೆಗಳು ಪ್ರಸಾರಗೊಂಡಿವೆ. ವೈಶಾಲಿ ಕಾಸರವಳ್ಳಿ ನಿರ್ದೇಶಿಸಿದ 'ಮುತ್ತಿನ ತೋರಣ' ಧಾರವಾಹಿಯಲ್ಲಿ ಇವರ ಭಾವಗೀತೆಯನ್ನು ಅಳವಡಿಸಿಕೊಂಡಿದ್ದಾರೆ. ಇವರ ಮೂರು ಕವನ ಸಂಕನಗಳು ಪ್ರಕಟವಾಗಿವೆ. 'ಕನಸುಗಳೇ ಬನ್ನಿ' ಇದು ಕಡೆಂಗೋಡ್ಲು ಕಾವ್ಯ ಪ್ರಶಸ್ತಿಯನ್ನು ಪಡೆದಿದೆ. ಇನ್ನೊಂದು ಕವನಸಂಕಲನ 'ವಾಸ್ತವಿಕತೆಯ ತೆಕ್ಕೆಯಲ್ಲಿ', ಮತ್ತು 'ಅಳಿಸಿ ಹೋಗುವ ಮುನ್ನ' ಸಾಹಿತ್ಯ ಸಮ್ಮೇಳನದ ಅನುದಾನ ಪಡೆದು ಪ್ರಕಟವಾಗಿದೆ.

# 'ನೇಸರು' ಜಾಗತಿಕ 'ಕನ್ನಡ ಕವನ ಸ್ಪರ್ಧೆ'- 2016ರ – ತೀರ್ಪುಗಾರರ ಅನಿಸಿಕೆ

## ಡಾ. ಎಚ್. ಎಸ್. ವೆಂಕಟೇಶ ಮೂರ್ತಿ



ಮುಂಬಯಿಯ ಮೈಸೂರು ಅಸೋಸಿಯೇಷನ್ ಸಂಸ್ಥೆಯು ತನ್ನ ತೊಂಭತ್ತನೇ ವಸಂತದ ಆಚರಣೆಯನ್ನು ಅಂತಾರಾಷ್ಟ್ರೀಯ ಕನ್ನಡ ಕವನ ಸ್ಪರ್ಧೆಯೊಂದನ್ನು ಏರ್ಪಡಿಸುವ ಮೂಲಕ ಅತ್ಯಂತ ಸಾರ್ಥಕವಾಗಿ ಆಚರಿಸಿ ಕೊಳ್ಳುತ್ತಿರುವುದು ಸಂತೋಷದ ವಿಷಯ. ಸಂಸ್ಥೆಯ ಅಧ್ಯಕ್ಷರು ಸ್ಪರ್ಧೆಗೆ ಬಂದಿದ್ದ 279 ಕವಿತೆಗಳ ಕಟ್ಟನ್ನು ನನಗೆ ಮೌಲ್ಯಮಾಪನಕ್ಕಾಗಿ ಕಳುಹಿಸಿದಾಗ ಕಾವ್ಯದ ಈ ಭರಾಟೆ ಬೆರಗನ್ನುಂಟು ಮಾಡಿತು. ಗುಂಪಿನಲ್ಲಿ ಸ್ವರೂಪ ಹೀನವಾಗದೆ ಕಾವ್ಯತ್ವದಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವ ಕೆಲವಾದರೂ ಗಟ್ಟಿ ಕವನಗಳು ಕಾಣಿಸಿಕೊಂಡಿದ್ದು ನೆಮ್ಮದಿಯ ಸಂಗತಿ.

ಪ್ರಥಮ ಬಹುಮಾನ ಪಡೆದಿರುವ "ದಣಪೆಯ ಆಚೆ ಬದಿಗೆ" ತನ್ನ ನುಡಿಗಟ್ಟಿನಿಂದಲೇ ನನ್ನನ್ನು ಆಕರ್ಷಿಸಿತು. ಪ್ರಾದೇಶಿಕತೆಯ ಮೊಹರುಗಳಿಂದ ತನ್ನನ್ನು ಕಟ್ಟಿಕೊಳ್ಳುವ ಈ ಕವನ ನವ್ಯಕಾವ್ಯದ ಧ್ವನಿ ರಮ್ಯತೆ ಮತ್ತು ಪ್ರತಿಮಾ ಸ್ವರೂಪದಿಂದ ಸೂಕ್ಷ್ಮ ಭಾವಾಭಿವ್ಯಕ್ತಿಯನ್ನು ಸಾಧಿಸುತ್ತದೆ. ಗೃಹಿಣಿಯೊಬ್ಬಳ ಮನಸ್ಸಿನ ಲಹರಿಗಳನ್ನು ಪ್ರಾಕೃತಿಕ ವಿವರಗಳ ಮೂಲಕ ಕಟ್ಟಿಕೊಡುವ ಕವನ ಮಾತೆಲ್ಲವನ್ನೂ ಸಾಂಕೇತಿಕತೆಗೆ ಒಗ್ಗಿಸುವ ಸುಂದರ ಕಲಾನಿರ್ಮಿತಿಯಾಗಿದೆ. ಮತ್ತೆ ಮತ್ತೆ ನನ್ನನ್ನು ಓದು, ಮತ್ತು ನನ್ನ ಬಗ್ಗೆ ಚಿಂತಿಸು ಎಂದು ಓದುಗರನ್ನು ಆಹ್ವಾನಿಸುವ ಈ ರಚನೆ ಬಹುಕಾಲ ಮನಸ್ಸಿನಲ್ಲಿ ಉಳಿಯುವಂತಿದೆ.

ದ್ವಿತೀಯ ಬಹುಮಾನ ಗಳಿಸಿರುವ "ಅಪರೂಪಕೊಮ್ಮೊಮ್ಮೆ", ತನ್ನ ಸಂರಚನೆಯಿಂದ ಆಕರ್ಷಕವೆನ್ನಿಸುವ ಕವಿತೆ. ನಿಯತವಾದ ಲಯಗಾರಿಕೆಯನ್ನು ಬಳಸಿಯೂ, ಅದನ್ನು ಭಾವಾನುಸಾರಿಯಾಗಿ ನಿರ್ವಹಿಸುವ ಕಲೆಗಾರಿಕೆ ಮೆಚ್ಚುವಂತಿದೆ. ರಮ್ಯವೆನಿಸುವ ಪರಿಭಾಷೆಯನ್ನು ಬಳಸಿಯೂ ರಮ್ಯತೆಯಿಂದ ದಾಟಿಕೊಂಡು ಅಸ್ಮಿತೆಯನ್ನು ಸಾಧಿಸುವುದು ಕವಿತೆಯ ವಿಶೇಷವಾಗಿದೆ. ಮೂರನೇ ಬಹುಮಾನ ಗಳಿಸಿದ ಹೆಣ್ಣಾಗಬೇಕು ಮೊದಲೆರಡು ಕವಿತೆಗಳಿಗಿಂತ ಹೆಚ್ಚಾಗಿ ಸ್ಪಷ್ಟತೆಯ ಕಡೆ ಒಲಿಯುವ ಕವಿತೆ. ನಾಲಕ್ಕು ವಿಭಿನ್ನವಾದ ಪ್ರತೀಕಗಳ ಮೂಲಕ ಆಧುನಿಕ ಹೆಣ್ಣಿನ ಆಂತರ್ಯವನ್ನು ಕಟ್ಟಿಕೊಡುವ ಕವನ ಕಾವ್ಯಾಸಕ್ತರ ಮನಸ್ಸನ್ನು ಸೆಳೆಯುವಂತಿದೆ.ಪ್ರೋತ್ಸಾಹಕ ಬಹುಮಾನ ಪಡೆದಿರುವ "ನಾನೊಬ್ಬ ಇದ್ದೇನೆ" ತಳ ವರ್ಗದ ಅಸ್ಮಿತೆಯನ್ನು ತೀರ ಭಿನ್ನವಾದ ಧ್ವನಿ ಮಾರ್ಗದಲ್ಲಿ, ಬಿಗಿಯಾದ ಬಂಧದಲ್ಲಿ ಕಟ್ಟಿಕೊಡುವ ಕವಿತೆ. "ಎಲೆ ಎಲೆಯ ದನಿ" ತನ್ನ ಗೀತಾತ್ಮಕತೆ ಮತ್ತು ಪ್ರತಿಮಾ ಸಂಯೋಜನೆಯಿಂದ ನಮ್ಮನ್ನು ಆಕರ್ಷಿಸುವ ಸುಂದರ ಕವಿತೆ. ಕನ್ನಡ ಕಾವ್ಯದ ಆತ್ಮಸಾಧನೆಯ ಇತಿಮಿತಿ ಮತ್ತು ಹೃದಯ ಮಿಡಿತಗಳನ್ನು ಚೆನ್ನಾಗಿ ಅಭಿವ್ಯಕ್ತಿಸುವ ಇಂಥ ಕವಿತೆಗಳ ಸೃಷ್ಟಿಕರ್ತರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು.

* * *

**ಕಿರುಪರಿಚಯ :** ಎಚ್ಚೆಸ್ವಿ ಎಂದೇ ಕನ್ನಡಿಗರಿಗೆ ಆಪ್ತಗೆಳೆಯರಿಗೆ, ಪರಿಚಿತರಾಗಿರುವ, ಡಾ. ಎಚ್.ಎಸ್.ವೆಂಕಟೇಶ ಮೂರ್ತಿಯವರು, ಕವಿತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ, ಮೊದಲಾದ ಪ್ರಕಾರಗಳಲ್ಲಿ ಕೈಯಾಡಿಸಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ. "ಬೆಂಗಳೂರು ವಿಶ್ವವಿದ್ಯಾಲಯದಿಂದ" ಎಂ.ಎ.ಪದವಿ ಪಡೆದು, ಕನ್ನಡದಲ್ಲಿ ಕಥನ ಕವನಗಳು ಮಹಾಪ್ರಬಂಧ ಮಂಡಿಸಿ, "ಪಿ.ಎಚ್.ಡಿ ಪದವಿ" ಪಡೆದು ಕೊಂಡಿದ್ದಾರೆ. ಬೆಂಗಳೂರಿನ ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ, ಅಲ್ಲೇ ಪ್ರಾಧ್ಯಾಪಕನಾಗಿ ನಿವೃತ್ತರಾಗಿದ್ದಾರೆ. ಇವರ ಪ್ರಮುಖ ಕೃತಿಗಳು, "ಪರಿವೃತ್ತ", "ಬಾಗಿಲು", "ಬಡಿವ ಜನಗಳು", "ಬಾನಸವಾಡಿಯ ಬೆಂಕಿ", "ತಾಪಿ", "ನೂರು ಮರ", "ನೂರು ಸ್ವರ", "ಹೆಜ್ಜೆಗಳು", ಮೊದಲಾದ ಕವನ, ಕಥೆ, ವಿಮರ್ಶಾಗ್ರಂಥಗಳನ್ನು ರಚಿಸಿದ್ದಾರೆ. ಇವರ ಸಾಧನೆಗೆ ಸಂದ ಪ್ರಶಸ್ತಿಗಳು ಹಲವಾರು, ಕರ್ನಾಟಕ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,

## ಬಿ. ಎಸ್. ಕುರ್ಕಾಲ್



ಮುಂಬಯಿ ಕನ್ನಡಿಗರ ಹಿರಿಯ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾದ ಮೈಸೂರು ಅಸೋಸಿಯೇಷನಿಗೆ ಈಗ ತೊಂಬತ್ತರ ಸಂಭ್ರಮ. ಈ ಶುಭಾವಸರದಲ್ಲಿ ಈ ಸಂಸ್ಥೆಯ ಮುಖವಾಣಿ 'ನೇಸರು' ತಿಂಗಳೋಲೆಯ ಮೂಲಕ ಸಮಸ್ತ ಕನ್ನಡಿಗರಿಗಾಗಿ ಕವನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಗೆ ನಮ್ಮ ನಿರೀಕ್ಷೆಗೆ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಸ್ಪಂದಿಸಿರುತ್ತಾರೆ. ಸುಮಾರು ಇನ್ನೂರ ಎಂಬತ್ತಕ್ಕೂ ಹೆಚ್ಚು ಕವಿಗಳು ಸ್ಪರ್ಧೆಯಲ್ಲಿ ಭಾಗವಹಿಸಿರುವುದು ಅಭಿನಂದನೀಯ.

ಸ್ಪರ್ಧೆಗೆ ಬಂದ ಪ್ರತಿಯೊಂದು ಕವನವನ್ನು ಕೂಲಂಕಷವಾಗಿ ಪರಿಶೀಲಿಸಿ ಉತ್ತಮ ಕವಿತೆಗಳನ್ನು ಆಯ್ಕೆ ಮಾಡಲು ಮೂರು ಮಂದಿ ಪರೀಕ್ಷಕರ ಸಮಿತಿಯನ್ನು ನೇಮಿಸಲಾಗಿತ್ತು. ಆ ಸದಸ್ಯರ ಹೆಸರು ಈ ಕೆಳಗಿನಂತಿದೆ.

1. ಡಾ. ಜಿ. ಎನ್. ಉಪಾಧ್ಯ – ಮುಂಬಯಿ ವಿವಿಯ ಕನ್ನಡ ವಿಭಾಗದ ಮುಖ್ಯಸ್ಥರು
2. ಬಿ. ಎಸ್. ಕುರ್ಕಾಲ್ – ಹಿರಿಯ ಕವಿ, ಮುಂಬಯಿ
3. ಎಚ್. ಎಸ್. ವೆಂಕಟೇಶ ಮೂರ್ತಿ – ಖ್ಯಾತ ಕವಿ, ಬೆಂಗಳೂರು

ಮೇಲೆ ಸೂಚಿಸಿದ ನಾವು ಮೂವರು ಎಲ್ಲ ಕವಿತೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಿರುತ್ತೇವೆ. ಆಗ ನಮಗಾದ ಅನುಭವ ಭಿನ್ನ ಭಿನ್ನ ಬಗೆಯದ್ದು. ಹಲವಾರು ಕವಿತೆಗಳು ತೀರಾ ಕೆಳಮಟ್ಟದವುಗಳಾದ್ದರಿಂದ ಅವುಗಳನ್ನು ಪ್ರಥಮ ಸುತ್ತಿನಲ್ಲೇ ಕೈ ಬಿಡಬೇಕಾಯಿತು. ಇನ್ನು ಕೆಲವರು ವರ ಕವಿಗಳಾದ ಬೇಂದ್ರೆ ಕುವೆಂಪು ಅವರ ಕವನಗಳ ತುಣುಕುಗಳನ್ನು ಪೋಣಿಸಿ ಕಳುಹಿಸಿಕೊಟ್ಟಿದ್ದಾರೆ. ಇದು ಹಿರಿಯ ಕವಿಗಳಿಗೆ ಮಾಡುವ ಅಪಚಾರ ಮಾತ್ರವಲ್ಲ ಅಪರಾಧವೂ ಹೌದು. ಉಳಿದವುಗಳಲ್ಲಿ ಅನೇಕ ಉತ್ತಮ ಕವಿತೆಗಳು ಮೂಡಿ ಬಂದಿರುವುದು ಸಮಾಧಾನಕರ.

* * *

**ಕಿರುಪರಿಚಯ :** ಬಿ.ಎಸ್.ಕುರ್ಕಾಲರು 1932 ರಲ್ಲಿ ಉಡುಪಿಯ "ಕುಂಜಾರುಗಿರಿ"ಯಲ್ಲಿ ಜನಿಸಿ ಅನಂತರ ಮಾಯಾನಗರಿ, ಮುಂಬೈನ್ನು ಪ್ರವೇಶಿಸಿ, ಭಾವಗೀತೆಗಳ ಕವಿಯೆಂದೇ ಗುರುತಿಸಲ್ಪಟ್ಟಿದ್ದಾರೆ. ಆದರ್ಶ ಶಿಕ್ಷಕ, ಅಂಕಣಕಾರ, ನಾಟಕಕಾರ ಹಾಗೂ ಕವಿಯೆಂದು ಹೆಸರು ಮಾಡಿದ ಅವರು, ತಮ್ಮ ಪ್ರತಿಭೆಯ ನಾನಾ ಮುಖಗಳನ್ನು ಕನ್ನಡ ನಾಡು–ನುಡಿಗಳಿಗಾಗಿ ಮುಡಿಪಾಗಿಟ್ಟಿದ್ದಾರೆ. ಸದಾ ಸಾಹಿತ್ಯ ಕೃಷಿಯಲ್ಲಿ ನಿರತರಾಗಿದ್ದಾರೆ. ಇವರ ಪ್ರಮುಖ ಕೃತಿಗಳು ನನ್ನ ನಿನ್ನ ಅಂತರಂಗ, ಶ್ರಾವಣ, ಲಹರಿ, ರಾಗರಶ್ಮಿ, ಚಿಲಿಪಿಲಿ ಮುಂತಾದವು. ಲಕ್ಷ್ಮೀಛಾಯೆ ವಿಚಾರ ವೇದಿಕೆಯ ಮೂಲಕ ಜಯಂತಿ ಕುರ್ಕಾಲ್ ಸಾಹಿತ್ಯ ಪ್ರಶಸ್ತಿಯನ್ನು ಪ್ರತಿವರ್ಷವೂ ನಡೆಸಿಕೊಂಡು ಬರುತ್ತಿದ್ದಾರೆ. ಕರ್ನಾಟಕಶ್ರೀ, ವಸುದೇವ ಭೂಪಾಲಂ ದತ್ತಿ ಪ್ರಶಸ್ತಿ, ಸಾಧನ ಶಿಖರ ಇನ್ನೂ ಮುಂತಾದ ಪ್ರಶಸ್ತಿಗಳು ಸಂದಿವೆ.



ನೇಸರುವಿನ ಓದುಗರಿಗೆಲ್ಲರಿಗೂ
ಯುಗಾದಿ ಹಬ್ಬದ ಶುಭಾಶಯಗಳು

# ನಾನು ಮುಂಬಯಿ ಸೇರಿದೆ

ನಮ್ಮ ಯಜಮಾನರು ಸಿ.ಕೆ.ಶಂಕರ ನಾರಾಯಣರಾಯರು, 50ನೇ ಇಸವಿಯಲ್ಲಿ ಮುಂಬಯಿಗೆ ಬಂದರು. ಇಲ್ಲಿಯ ಮನೆಯ ತೊಂದರೆಯಿಂದ ನನ್ನನ್ನು, ಮಕ್ಕಳನ್ನು ಕರೆಸಿಕೊಳ್ಳುವುದು ತೊಂದರೆಯಾಯಿತು. ಇಲ್ಲಿಯ ಬೇಸಿಗೆಯ ರಜಕ್ಕೆ ಊರಿಗೆ ಹೋಗುವವರ ದಯೆಯಿಂದ, ಅಂದರೆ ಶ್ರೀಮಾನ್ ಸತ್ಯನಾರಾಯಣರಾವ್ ಅಂತ ನಮಗೆ ತಿಳಿದದವರು ಅವರು, ನಾವು ರಜಕ್ಕೆ ಊರಿಗೆ ಹೋಗುತ್ತೇವೆ. ನಿಮ್ಮ ಮನೆಯವರನ್ನು ಕರೆಸಿಕೊಳ್ಳೀಂತ ತಿಳಿಸಿದರು. ಅದರಂತೆ ನಮ್ಮ ಭಾವನವರಿಗೆ ಕಾಗದ ಬರೆದರು. ಆದರೆ ನಮ್ಮ ಮನೆ ಪದ್ಧತಿ ಅವರವರ ಕಾಗದವನ್ನು ಅವರೇ ನೋಡಬೇಕು. ನಮ್ಮ ಭಾವನವರು ಊರಿನಲ್ಲಿ ಇರಲಿಲ್ಲ. ಅಷ್ಟರಲ್ಲಿ ಇಲ್ಲಿಂದ ತಾರು (ಟೆಲಿಗ್ರಾಂ) ಏನು ಬಂದರೂ ನಮಗೆ ಪ್ರಯೋಜನವಾಗಲಿಲ್ಲ. ಏನು ವಿಷ್ಯಾಂತ ಗೊತ್ತಿರಲಿಲ್ಲ. ಅಂತೂ ಅವರು ಬಂದು ಟಪಾಲು ನೋಡಿ, ಅಂದಿನ ರಾತ್ರಿನೇ ಅವರ ಭಾವಮ್ಮೈದುನ (ಕೃಷ್ಣಾಂತ) ಅವರ ಸಂಗಡ ನಮ್ಮನ್ನು ಕಳಿಸಿದರು. ನನಗಂತೂ ಕನ್ನಡ ನಾಡಿನಿಂಡ ಹೊರಗೆ ಬಂದೇ ಗೊತ್ತಿರಲಿಲ್ಲ. ಭಾಷೆ ಅಂತೂ ನಮ್ಮ ಕನ್ನಡ ಬಿಟ್ಟು ಬೇರೆ ಏನೂ ಬರುತ್ತಿರಲಿಲ್ಲ. ಆಗಿನ ಕಾಲದಲ್ಲಿ ಮೊದಲು ರೈಲು ಹತ್ತಿದವರಿಗೆ ಜಾಗ ಹಾಗಾಗಿ ಮಕ್ಕಳನ್ನು ಪೆಟ್ಟಿಗೆ ಮೇಲೆ ಕೂಡಿಸಿ ಇದ್ದ ಜಾಗದಲ್ಲೇ ಅಂತೂ ಮುಂಬಯಿಗೆ ಪ್ರಯಾಣ ಬೆಳೆಸಿದೆವು. ಮಕ್ಕಳಿಗಂತೂ ಖುಷಿಯೋ ಖುಷಿ. ಎರಡು ರಾತ್ರಿ ಒಂದು ಹಗಲು ರೈಲಿನಲ್ಲಿ ಕಳೆದು ದಾದರಿನಲ್ಲಿ ಬಂದು ಇಳಿದೆವು. ಕೈಗಾಡಿಯಲ್ಲಿ ಸಾಮಾನು ಹಾಕಿಸಿಕೊಂಡು ವಡಾಲದಲ್ಲಿ ಇರುವ ಸರಕಾರಿಯ ಮನೆ 1ಎಮ್, 3ನೇ ಮನೆ ಅಲ್ಲಿಗೆ ಬಂದೆವು. ನಾವು ನಾವು ಹುಟ್ಟಿದಾರಭ್ಯ ತಂಪಾದ ಊರಿನಲ್ಲಿದ್ದವರು ಶೆಖೆಯು ನಮಗೆ ಪರಿಚಯವಿರಲಿಲ್ಲ. ಇಷ್ಟು ಶೆಖೆನಾಂತ ಕೇಳಿದರೆ ಅದಕ್ಕೇ ಈಗ ಮನೆ ಸಿಕ್ಕಿರೋದೂಂತ, ಈ ಬೇಸಿಗೆಯಲ್ಲಿ ಎಲ್ಲರೂ ಊರಿಗೆ ಹೋಗುತ್ತಾರೇಂತ ತಿಳೀತು.

ನಾವು ಬಂದ 2ನೇ ದಿನ ನಮ್ಮ ಯಜಮಾನರ ಆಪ್ತ ಸ್ನೇಹಿತರಾದ ಕೆ.ವಿ.ಎಸ್.ಶಾಸ್ತ್ರಿಗಳಂತ, ಅವರು ಕೆಲಸದ ಮೇಲೆ ಸೂರತ್ತಿಗೆ ಹೋಗಿದ್ದವರು ಬಂದರು. ಮಕ್ಕಳು ಇವರು ಯಾವ ಮಾವಾಂತ ಅವರ ತಂದೆಯನ್ನು ಕೇಳಿ, ತಕ್ಷಣ ಸೂರತ್ ಮಾವಾಂತ ಅವರುಗಳೇ ಕೂಗೋಕ್ಕೆ ಶುರು ಮಾಡಿದರು. ಆಗಿನಿಂದಲೂ ಅವರು ನಮ್ಮ ಮನೆಯವರಿಗೆಲ್ಲಾ ಸೂರತ್ ಮಾವ, ತಾತ ಆಗಿದ್ದಾರೆ. ಅವರ ವಿಷಯವೆಲ್ಲಾ ತಿಳಿದುಕೊಂಡು ನಿಮ್ಮ ಶ್ರೀಮತಿಯವರನ್ನೂ ಕರೆಸೀಂತ ಕೇಳಿದ್ದಕ್ಕೆ, ನಮ್ಮ ಕೇಳಿಕೆಯನ್ನು ನೆರವೇರಿಸಿದರು. ಅವರ ಶ್ರೀಮತಿಯವರು ಅವರ ಅಣ್ಣನ ಸಂಗಡ ಬಂದರು. ಅವರು ಬಂದ ಮೇಲೆ ನಮಗೆ ತುಂಬಾ ಚೆನ್ನಾಗಿತ್ತು. ಅವರು ಬಂಡ ವಾರಕ್ಕೆ ಮಳೆಗಾಲ ಪ್ರಾರಂಭ ಆಯಿತು. ನಮಗೆ ಮನೆಯನ್ನು ಕೊಟ್ಟವರು ವಾಪಾಸ್ಸು ಬಂದರು. ನಾವು ಆ ಸಮಯದಲ್ಲಿ ಮೈಸೂರು ಅಸೋಸಿಯೇಷನ್ನಿನ ರಸ್ತೆ ಮತ್ತು ಶ್ರೀಮತಿ ಸೀತಮ್ಮನವರು ಮತ್ತು ಶ್ರೀಮಾನ್ ಗೋಪಾಲ ಅಯ್ಯಂಗಾರ್ ಮನೆ ಪರಿಚಯ ಆಗಿತ್ತು. ಅವರ ಸಹಾಯವನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಅವರುಗಳ ಒಳ್ಳೆಯತನ ಇನ್ನೂ ಅದೇ ತರಹ ಇದ್ದಾರೆ. ಊರಿಗೆ ಹೊರಡೊದಂತ ಆದ ಮೇಲೆ ಒಂದು ದಿನ ಕೆಲಸ ಬಿಟ್ಟು, ಆ ಮಳೆಯಲ್ಲೇ ನಮ್ಮನ್ನು ಟ್ಯಾಕ್ಸಿಯಲ್ಲಿ ಬೊಂಬಾಯಿ ಸುತ್ತಿಸಿ ಶಾರದಾ ಭವನದಲ್ಲಿ ಊಟ ಹಾಕಿಸಿ ಹಾಗೇ ಊರಿನ ರೈಲನ್ನು ಹತ್ತಿಸಿದರು. ಆ ಸಮಯದಲ್ಲಿ ನಾವು ಸ್ನೇಹಿತರು ಒಂದು ಬಾಲ್ಕನಿಯಷ್ಟು ಜಾಗ ಸಿಕ್ಕಿದರೂ, ನಾವು ಇಲ್ಲಿಯೇರಬಹುದಾಗಿತ್ತೂಂತ ಮಾತಾಡಿಕೊಂಡೆವು. ಆಗ ನಮಗೆ 'ಅಷ್ಟೇ' ಅರಮನೆಯಾಗಿತ್ತು.

ದೀಪಾವಳಿ ಮುಂಚೆ ಘಾಟ್‌ಕೋಪರ್‌ನಲ್ಲಿ ತುಗಾನಿಭವನ್ ಅಂತ ಅಲ್ಲಿಯ ಚಾಲಿನಲ್ಲಿ ಮನೆ ಸಿಕ್ಕಿತು. ಅಲ್ಲಿಗೆ ಬಂದೆವು. ನಾವು ಬಂದ ಸ್ವಲ್ಪ ದಿನಕ್ಕೆ ನಮ್ಮ ಸ್ನೇಹಿತರನ್ನು ಅಂದರೆ ಶಾಸ್ತ್ರಿಗಳು (ಸೂರತ್‌ಮಾನ) ಸುಶೀಲಮ್ಮ ಇವರನ್ನು ಕರೆಸಿಕೊಂಡೆವು. ಆಗ ಅಸೋಸಿಯೇಷನ್ನಿನಲ್ಲಿ ಬೆಳ್ಳಿಹಬ್ಬ ಆಯಿತು. ಆಗ ನಮಗೆ ದಿನವೂ ಮಾತುಂಗಾಕ್ಕೆ ಬರುವ ಅವಕಾಶ. ಆಗ ಮೈಸೂರು ಮಹಾರಾಜರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಬಂದಿದ್ದರು. ಆಗ ಕನ್ನಡ ಸಂಘಕ್ಕೂ ಬಂದಿದ್ದರು ಅಸೋಸಿಯೇಷನ್ನಿನಲ್ಲಿ ಸಿಲ್ವರ್ ಸಸಿ(ಮರ) ಹಾಕಿದ್ದರು. ಈಗ ಅದು ಹೆಮ್ಮರ ಆಗಿದೆ. ಆಗಿನ ಕಾಲದಲ್ಲಿ ಘಾಟ್‌ಕೋಪರ್ ಮಾತುಂಗಕ್ಕೆ ನಾಲ್ಕಾಣೆ ಇರಬಹುದು. ಬಸ್ಸು ಇರಲಿಲ್ಲ. ನಮ್ಮ ಮನೆಯಿಂದ ಸ್ಟೇಷನ್ನಿಗೆ ಹತ್ತೋ ಹದಿನೈದೋ ನಿಮಿಷದ ನಡೆಯುವ ಸಮಯವಿತ್ತು. ನಮ್ಮ ಯಜಮಾನರಿಗೆ ನಾಟಕದ ಹಂಬಲ ಜಾಸ್ತಿ. ಅವ್ರು ಅವರ ಸ್ನೇಹಿತರು ಆಸೋಸಿಯೇಷನ್‌ನಲ್ಲಿ ಸೇರುತ್ತಿದ್ದರು. ರಾತ್ರಿ ತುಂಬಾ ಹೊತ್ತಾದರೂ ಮನೆ ನೆನಪೇ ಅವರಿಗೆ ಇರುತ್ತಿರಲಿಲ್ಲ. ಹಾಗಾಗಿ ನಾನೂ ನನ್ನ ಮಗನನ್ನು ಕರೆದುಕೊಂಡು ಹೋಗುತ್ತಿದ್ದೆ. ಆಗ ಅಲ್ಲಿ ಅಂಗಳದಾಲಿ ಹುಲ್ಲನ್ನು (ಲಾನನ್ನು) ಚೆನ್ನಾಗಿ ಬೆಳೆಸಿದ್ದರು. ಸಂಜೆ ಹೊತ್ತು ಬೆತ್ತದ ಕುರ್ಚಿ (ಮೋಡಾ) ಹಾಕಿರುತ್ತಿದ್ದರು. ನಮಗೆ ಅಲ್ಲಿ ಮಾತಾಡುತ್ತಾ ಕುಳಿತಿದ್ದರೇ ಹೊತ್ತೇ ಗೊತ್ತಾಗುತ್ತಿರಲಿಲ್ಲ. ಅಷ್ಟರಲ್ಲಿ ನನ್ನ ಮಗನಿಗೆ ಪುಟ್ಟಣ್ಣ ಚಪಾತಿಗೆ ಸಕ್ಕರೆ ಬೆರೆಸಿ ತಂದು ಕೊಡುತ್ತಿದ್ದರು. ಆವನು ಬಹಳ ಇಷ್ಟಪಟ್ಟು ತಿನ್ನುತ್ತಿದ್ದನು. ನಾವೂ ಎಷ್ಟೋ ಸಲ ರಾಮಣ್ಣೋರ ಮಾಡುವ ಅಡಿಗೆ ನೆನಪು ಬಂದರೆ ಅಲ್ಲೇ ಊಟ ಪೂರೈಸಿಕೊಂಡು ಮನೆಗೆ ಬರುತ್ತಿದ್ದೆವು. ಮಾಟುಂಗಾದಲ್ಲಿ ರೈಲನ್ನು ಹತ್ತಿದ ಕೂಡಲೇ ನಮ್ಮ ಮಗ ನಿದ್ದೆ ಮಾಡುತ್ತಿದ್ದ. ಘಾಟ್‌ಕೋಪರ್‌ನಲ್ಲಿ ಇಳಿದು ನಿಲ್ದಾಣದಿಂದ ಹೊರಗೆ ಬಂದರೆ ಅಲ್ಲಿ ಕುದುರೆಗಾಡಿ, ಅವನಿಗೆ ತುಂಬಾ ಇಷ್ಟವಾದ್ದು. ಸರಿ ಹತ್ತು ನಿಮಿಷ ನಡೆಯೋದು ತಪ್ಪುತ್ತಿತ್ತು. ಈ ಮಧ್ಯೆ ಶಾಸ್ತ್ರಿ ಕೆಲಸದ ಮೇಲೆ ಅಹಮದಾಬಾದಿಗೆ ಪತ್ನಿ ಸಮೇತರಾಗಿ ಹೊರಟಾಗ ನಮ್ಮ ಮೂರು ವರುಷದ ದಿನೇಶನನ್ನು ಕರೆದುಕೊಂಡು ಹೋದರು. ಅಲ್ಲಿ ಒಂದುದಿನ ಹಾಗೂ ಹೀಗೂ ಅವರ ಜೊತೆಗೆ ಇದ್ದವನು 'ಅಣ್ಣ ಬೇಕು ಅಮ್ಮ ಬೇಕು' ಎಂದು ರಗಳೆ ಮಾಡಿ

✍ ಜಯಮ್ಮ ಸಿ.ಕೆ.ಎಸ್.ರಾವ್

ಅವರು ನಮಗೆ ಟೆಲಿಗ್ರಾಂ ಕೊಟ್ಟು ಸುಶೀಲಮ್ಮನವರ ಸಂಗಡ ಅವನನ್ನು ಕಳುಹಿಸಿಕೊಟ್ಟರು. ನಮ್ಮ ಯಜಮಾನರು ದಾದರ್ ಹಾಗೂ ಬಾಂಬೆ ಸೆಂಟ್ರಲ್ ಸ್ಟೇಷನ್‌ಗಳಿಗೆ ಹೋಗಿ ಅವರು ಸಿಕ್ಕದೆ ಹ್ಯಾಪ್ ಮೋರೆ ಹಾಕಿಕೊಂಡು ಬಂದರೆ ಸುಶೀಲಮ್ಮನವರು ನಾವಿದ್ದ ತುಗಾನಿ ಭವನಕ್ಕೆ ಬರುವ ಗುಜರಾಥಿಗಳ ಸಂಗಡ ಮನೆ ತಲಪಿ ಹರಟೆ ಹೊಡೆಯುತ್ತಿದ್ದರು. ನಂತರ ಹಿಂತಿರುಗಿದರು ಅಹಮದಾಬದಿಗೆ. ಹೀಗೇನೆ ಆರು ತಿಂಗಳು ಕಳೆಯಿತು. ಆ ಹೊತ್ತಿಗೆ ಬೇಸಿಗೆ ಶುರುವಾಗಿ ನೀರಿಗೇನು ಕಷ್ಟ ಆಯಿತು. ಎಲ್ಲವುದಕ್ಕೂ ಭಾವಿ ನೀರು ಬಿಟ್ಟರೆ ಬೇರೆ ಏನೂ ಇರಲಿಲ್ಲ. ನಲ್ಲಿ ನೀರಂತೂ ಅಲ್ಲಿ ಇರಲಿಲ್ಲ. ಹಾಗಾಗಿ ಆ ಮನೆ ಬಿಡೋ ಹಾಗಯಿತು. ನಮ್ಮ ಸ್ನೇಹಿತರು ಊರಿಗೆ ಹೋಗಬೇಕಾಗಿ ಬಂತು. ಅವರು ಹೊರಟರು. ನಮ್ಗೆ ವಡಾಲದಲ್ಲಿ ಮನೆ ಸಿಕ್ಕಿತು. ಎರಡು ತಿಂಗಳಿಗೋಸ್ಕರ ಅವರು ಊರಿಗೆ ಹೋದರು. ಅಲ್ಲಿದ್ದೆವು. ಮನೆಯನ್ನು ನಮ್ಮ ಸ್ನೇಹಿತರಾದ ಶ್ರೀಮತಿ ಸೀತಮ್ಮನವರ ಸಹಾಯದಿಂದ ಸಿಕ್ಕಿತು. ಅಷ್ಟರಲ್ಲಿ ನಮ್ಮ ಅತ್ತೆ ಮಾವನವರು ಕಾಶಿಯಾತ್ರೆ ಮುಗಿಸಿಕೊಂಡು ಬಂದಿದ್ದರು. ಯಥಾ ಪ್ರಕಾರ, ನಮಗೆ ಮನೆಕೊಟ್ಟ ಅವರುಗಳು ಬಂದಿದ್ದರು. ಆಗ ನಮ್ಮ ಅತ್ತೆ ಮಾವನವರನ್ನು ಕರೆದುಕೊಂಡು ಬೆಂಗಳೂರಿಗೆ ಹೊರಟಿದ್ದಾಯ್ತು. ಅವರಿಗೋ ಅಸೋಸಿಯೇಷನ್ ನೋಡೋ ಆಸೆಯಿತ್ತು. ಆಗ ಅವಕಾಶವಾಗಲಿಲ್ಲ. ಬೆಂಗಳೂರಿಗೆ ಹೋದೆವು.

ಅಸೋಸಿಯೇಷನ್ ವಿಷಯ ಕಾಗದ ಬಂದರೆ ಅಲ್ಲಿಂದ ಎಂದಿಗೆ ಬರುತ್ತೇನೋಂತ ಅನ್ನಿಸುತ್ತಿತ್ತು. ಏಳೆಂಟು ತಿಂಗಳಾದ ಮೇಲೆ ಮತ್ತೆ ಅಸೋಸಿಯೇಷನ್‌ಗೆ ಬರೋ ಅವಕಾಶ ಆಯ್ತು. ನಮ್ಮ ಮನೆ ವೈದ್ಯರು ಡಾ. ವೈದ್ಯನಾಥನ್ ಆಗಿನಿಂದಲೇ ಅವರ ಮಗಳಿಗೆ ವೀಣೆ ಹೇಳಿಸುತ್ತಿದ್ದರು. ಅವರು ನಮಗೋಸ್ಕರ ಅವರ ಮನೇಲಿ ಒಂದು ರೂಮನ್ನು ಕೊಟ್ಟಿದ್ದರು. ಊಟವನ್ನು ಎರಡು ಹೊತ್ತು ಅಸೋಸಿಯೇಷನ್ನಿಂದ ತರಿಸುತ್ತಿದ್ದೆವು. ಅವರ ಮನೇಲಿ 3 ತಿಂಗಳಿದ್ದೆವು. ಅವರುಗಳ ಮನೆಗೆ ನೆಂಟರು ಬರುವವರಿದ್ದರು. ಆಗ ನಮಗೆ ನಮ್ಮ ಸೀತಮ್ಮನವರೇ ಮನೆಯನ್ನು ಬಿಟ್ಟುಕೊಟ್ಟು ಊರಿಗೆ ಹೋದರು. ನಮಗೆ


ಅಸೋಸಿಯೇಷನ್ ಇನ್ನೂ ಹತ್ತಿರವಾಯಿತು. ಮನೇಲೂ ನಮಗೆ ಬೇಕೂ ಅನ್ನಿಸಿದನ್ನು ಮಾಡಿಕೊಳ್ಳುತ್ತಿದ್ದೆವು. ಆಗ ನಮ್ಮ ಯಜಮಾನರು ಊರಿಗೆ ಹೊರಟು ಬಿಡಿ ಅಂತ ಹೇಳುತ್ತಿದ್ದರು. ನಮಗೆ ಇಷ್ಟವಿರಲಿಲ್ಲ. ಹಾಗಾಗಿ ನನ್ನ ಇಷ್ಟದಂತೆ ಸೀತಮ್ಮನವರು ನಮ್ಮನ್ನು ಉಳಿಸಿಕೊಂಡರು. ಅಷ್ಟು ಹೊತ್ತಿಗೆ ನನಗೆ ಸಾಕಷ್ಟು ಜನರ ಪರಿಚಯ ಆಗಿತ್ತು. ಅದರಲ್ಲಿ ವಯಸ್ಸಾದವರೂ ಇದರು. ಅವರುಗಳು ದೆಸೆಯಿಂದ, ಅವರ ಸೊಸೆ ನಾಗವೇಣಮ್ಮಾಂತ ಅವರು ಕಲೀನಾದಲ್ಲಿ ಈಗ ಇದ್ದಾರೆ. ಆಗ ಅಸೋಸಿಯೇಷನ್ ಹತ್ತಿರ ಇದ್ದರು. ಆಗ ನಮಗೆ ಸ್ನೇಹ ಆಗಿದ್ದು. ಈಗಲೂ ಮನೆ ದೂರ ಇದ್ದರೂ ನಾವುಗಳು ಸೇರಿದಾಗಲೆಲ್ಲಾ ಅದೇ ಹಿಂದಿನ ವಿಷಯ ನೆನಪು ಮಾಡಿಕೊಳ್ಳುತ್ತೇವೆ. ಅವರ ಅತ್ತೆಯವರ ಸ್ನೇಹಿತರ ಮನೆಯಲ್ಲಿ ಒಂದು ರೂಮನ್ನು ಕೊಡಿಸಿದರು. ಅಸೋಸಿಯೇಷನ್ ಎದುರು ಜಮ್‍ಷಡಾಬಾದ್‍ನಲ್ಲಿ ಅಲ್ಲಿಗೆ ಬಂದ ಮೇಲೆ ಮಕ್ಕಳಿಬ್ಬರನ್ನು ಕನ್ನಡ ಶಾಲೆಗೆ ಸೇರಿಸಿದೆವು. ಆಗ ಅಸೋಸಿಯೇಷನ್‍ನಿಂದ ನನ್ನ ಮಗ ಡಬ್ಬವನ್ನು ತರುತ್ತಿದನು. ನಾನು ಕೆಳಗಿನಿಂದ ಮೇಲಕ್ಕೆ ತೆಗೆದುಕೊಂಡು ಹೋಗುತ್ತಿದ್ದೆನು. ಶನಿವಾರ ಬರುವುದನ್ನೇ ಕಾಯುತ್ತಿದ್ದು, ಸಂಜೆ ಸಮಯದಲ್ಲಿ ಸಿಹಿ ತಿಂಡಿ ಕಾರ್ದು ಮಾಡುತ್ತಿದ್ದರು. ಅದನ್ನು ತರುತ್ತಿದ್ದು ತಿಂದು ಖುಷಿ ಪಡುತ್ತಿದ್ದರು. ತಿಂಗಳಲಿ ಎರಡು ಭಾನುವಾರ ಮಸಾಲೆ ದೋಸೆ ಮಾಡುತ್ತಿದ್ದರು. ಬಹಳ ಚೆನ್ನಾಗಿರುತ್ತಿತ್ತು. ಮಾವಿನ ಹಣ್ಣಿನ ಸಮಯದಲ್ಲಿ ಮಾವಿನ ಹಣ್ಣಿನ ರಸ ಮಾಡುತ್ತಿದ್ದರು. ಅದೆಲ್ಲ ಈಗಲೂ ಸವಿನೆನಪು.

ನಾರಾಯಣ ಸ್ವಾಮಿಗಳು ಅಧ್ಯಕ್ಷರಾಗಿದ್ದ ಗಣಪತಿ ಗೌರಿ ಹಬ್ಬ ಅಲ್ಲಿ ಅದ್ದೂರಿಯಾಗಿ ನಡೆಸುತ್ತಿದ್ದರು. ಗಣಪತಿ ವಿಸರ್ಜನೆ ದಿನ ಬಸ್ಸು ಕಾರುಗಳಲ್ಲಿ ದಾದರ್ ಬೀಚ್‍ಗೆ ಕರೆದುಕೊಂಡು ಹೋಗುತ್ತಿದ್ದರು. ಅಲಿಯ ಊಟ ಸ್ಮರಿಸಿಕೊಳ್ಳಬೇಕು. ಯಾರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ವಾಪಾಸ್ಸು ಅವರವರ ಜಾಗಕ್ಕೂ ಹಾಗೂ ಹೀಗೂ ತಲುಪಿಸುತ್ತಿದ್ದರು. ಅದೇ ವರ್ಷ ಮಹಿಳಾ ಶಾಖೆ (ಲೇಡೀಸ್ ಸೆಕ್ಷನ್) ಪ್ರಾರಂಭ ಆಯ್ತು. ಶ್ರೀಮತಿ ಶಾಮಲಾಂಬ ವರದರಾಜನ್ ಅಧ್ಯಕ್ಷರಾಗಿದ್ದರು. ಮೊದಲ್ ಕಾರ್ಯಕ್ರಮ ಚಿಕ್ಕಮಕ್ಕಳಿಂದ ಚಿಕ್ಕದೊಂದು ನಾಟಕ ಕಲಿಸಿ ಆಡಿಸಿದ್ದೆವು. ನಾಟಕದ ಹೆಸರು 'ಮನೆಮಾರಾಟಕ್ಕಿದೆ' ಅದರಲ್ಲಿ ಬಿ.ಎಸ್.ಎಸ್.ರಾವ್ ಮಕ್ಕಳು ಸರೋಜ, ಲೀಲ, ಮೋಹನ, ಸುಬ್ಬಣ್ಣ, ಅವರ ವಯಸ್ಸಿಗೆ ನಾನು ಹೇಳಿಕೊಟ್ಟಿದ್ದನ್ನು ಚೆನ್ನಾಗಿಯೇ ಮಾಡಿದ್ದರು. ಅದಾದ ನಂತರ, ಶ್ರೀಮತಿ ಶಾಮಾಲಾಂಭರವರು ಮಹಿಳೆಯರನ್ನೆಲ್ಲಾ ವೈತರಣ ಡ್ಯಾಂ ಕಟ್ಟಿಸುವ ಜಾಗಕ್ಕೆ ಕರೆದುಕೊಂಡು ಹೋಗಿದ್ದರು. ಅಲಿ ಬಹಳ ಏರ್ಪಾಟು ಮಾಡಿದ್ದರು. ಮರೆಯುವುದಕ್ಕೇ ಸಾಧ್ಯವಿಲ್ಲ. ಅಷ್ಟು ಚೆನ್ನಾಗಿತ್ತು. ಪ್ರತಿ ತಿಂಗಳು ಹಿಂದೂಸ್ಥಾನ್ ಲಿವರ್ ಪ್ರೀಮಿಯರ್ ಆಟೋಮೋಬೈಲು, ಪಾರ್ಲೆ ಬಿಸ್ಕಿಟ್ ಫ್ಯಾಕ್ಟರಿ, ಗಾಡ್ರೇಜು, ನ್ಯಾಶನಲ್ ಪಾರ್ಕು, ಬೆಸನ್‍ಪೋರ್ಟ್ ಇನ್ನೂ ಅನೇಕ ಕಡೆಗಳಿಗೆ ಕರೆದುಕೊಂಡು ಹೋಗುತ್ತಾ ಇದ್ದರು. ಆನವರಿ 26 ರಂದು ಹೆಂಗಸರದೇ ಕಾರ್ಯಕ್ರಮ ನಾಟಕ, ಫ್ಯಾನ್ಸಿಡ್ರೆಸ್ ಮತ್ತು ಅಸೋಸಿಯೇಷನ್ನಿನೊಳಗೇ ನಮಗೆ ಆಟ. ಸಂಕ್ರಾಂತಿ ಕಾರ್ಯಕ್ರಮ ಎಳ್ಳು ಮಾಡಿ ಆಚಾರಿಸುತ್ತಿದ್ದೆವು. ಈಗ್ಗೈನ ಜನರೇಷನ್ನವರು ಅದೇ ತರಹ ನಡೆಸುತ್ತಿದ್ದಾರೆ. ಅದರಲ್ಲಿ ಭಾಗವಹಿಸಲು ನಮಗೆ ವಯೋಧರ್ಮದಿಂದ ಕಷ್ಟವಾಗಿದೆ. ಆದರೂ ಕೆಲವು ಕಾರ್ಯಕ್ರಮಕ್ಕೆ ಸಾಮಾನ್ಯವಾಗಿ ತಪ್ಪಿಸುವುದಿಲ್ಲ. ಕಷ್ಟಪಟ್ಟುಕೊಂಡು ಹೋಗುವ ಆಸೆಯಿದೆ. ಹೋಗುತ್ತೇವೆ. ನಾನೂ ಈಗಿನ ಹೆಣ್ಣುಮಕ್ಕಳಿಗೆ ಹೇಳುತ್ತೇನೆ. ನಾವುಗಳು ಅಸೋಸಿಯೇಷನ್ನಿಗೆ ಅಂಟುಕೊಂಡಿದ್ದೆವು. ನಮ್ಮ ಅತ್ತೆಯವರನ್ನೂ ಕರೆದುಕೊಂಡು ಹೋಗುತ್ತಿದ್ದೆವು. ಕೆಲವು ಜಾಗಗಳು ಅವರಿಗೆ ತುಂಬಾ ಇಷ್ಟ ಆಗಿತ್ತು. ಮಿಂಟ್ ಮತ್ತು ಪಾರ್ಲೆ ಬಿಸ್ಕತ್ ಕಾರ್ಖಾನಿನ ಬಹಳ ನೆನಪು ಮಾಡಿಕೊಳ್ಳುತ್ತಿದ್ದರು.

ನಾನು ಮುಂದೆ ಹೋಗಲು ಬಹಳ ಸಂಕೋಚ ಮಾದಿಕೊಳ್ಳುತ್ತಿದ್ದೆನು. ನನಗೆ ಶ್ರೀಮತಿ ಸೀತಮ್ಮನವರು ಮತ್ತು ಸುಮಿತ್ರಮ್ಮ ಪಿ.ಎಸ್.ರಾವ್ ಅವರಿಂದ ಸಂಕೋಚ ಕಡಿಮೆ ಆಯ್ತು. ಶ್ರೀಮತಿ ಸೀತಮ್ಮನವರು ಅಧ್ಯಕ್ಷರಾಗಿದ್ದ ಸಮಯದಲ್ಲಿ ನಾನೂ ಅವರ ಕಮಿಟಿಯಲ್ಲಿದ್ದೆ. ಆಗ ಒಂದು ಕಾರ್ಯಕ್ರಮದಲ್ಲಿ ಶ್ರೀಮತಿ ವೆಂಕಟಲಕ್ಷಮ್ಮನವರ ಭಾರತ ವಾಚನವಿತ್ತು. ತಂಬೂರಿ ಮೀಟ ಬೇಕಾಗಿತ್ತು. ಸೀತಮ್ಮನವರು, ಜಯಮ್ಮ ನೀವು ತಂಬೂರಿ ಶೃತಿ ಹಾಕೆಂದರು. ಮೊದಲನೆಯ ಸಲ ವೇದಿಕೆಯ ಮೇಲೆ ಕೂರಬೇಕಾಗಿತ್ತು. ಅವರ ಧೈರ್ಯ ಹೇಳಿ ಕುಳಿಸಿದರು. ನನಗೆ ಮುಂದಿರುವ ಜನರನ್ನು ನೋಡೋಕೆ ಭಯ. ಎಲ್ಲ ತಂಬೂರಿ ಕೆಡುವುತ್ತೆನೋಂತ. ತಲೆ ಎತ್ತಿ ನೋಡೋ ಸಾಹಸಕ್ಕೆ ಹೋಗಲಿಲ್ಲ. ಆಮೇಳೆ ಸೀತಮ್ಮನವರೇ ಹೇಳಿದರು, ಶೃತಿ ಚೆನ್ನಾಗಿ ಹಾಕಿದ್ರೀಂತ ವಿಷಯ ಚಿಕ್ಕದು ಈಗ. ಆಗಿನ ಕಾಲಕ್ಕೆ ನನಗೆ ಅದೇ ಭಾರಿ ಆಗಿತ್ತು. ಆಮೇಲೆ ಸ್ವಲ್ಪ ಸ್ವಲ್ಪ ಸಂಕೋಚ ಬಿಟ್ಟು ಸಣ್ಣ ಪುಟ್ಟ ನಾಟಕ ಫ್ಯಾನ್ಸಿ ಡ್ರೆಸ್, ಆಟ ಎಲ್ಲಾವುದಕ್ಕೂ ಸೇರುತ್ತಿದ್ದೆ. ಆಗೆಲ್ಲ ನಾವುಗಳೆ ಹೆಂಗಸರು ಅವರ ಮಕ್ಕಳು ಸೇರಿ ಕಾರ್ಯಕ್ರಮ ಮಾಡುತ್ತಿದ್ದೆವು.

ಆಗಿನ ನಮ್ಮ ಜೊತೆಯವರೆಲ್ಲಾ ಪ್ರೈಮರಿ ಮಿಡಲ್ ಸ್ಕೂಲ್ ಓದಿದ್ದವರೇ ಆಗಿ ಗೃಹಿಣಿಯರು ಮಾತ್ರ ಆಗಿದ್ದವರು, ಇಷ್ಟರ ಮಟ್ಟಿಗೆ ಮುಂದುವರೆದಿದ್ದೆವು. ಗಂಡಸರ ಜೊತೆಗೂಡಿ ನಾಟಕಗಳಲಿ ಪಾತ್ರಗಳನ್ನು ವಹಿಸುತ್ತಿರಲಿಲ್ಲ. ಹೆಣ್ಣು ಪಾತ್ರಗಳನ್ನು ಗಂಡಸರೇ ಮಾಡುತ್ತಿದ್ದರು. ಆಗಿನ ಹೆಣ್ಣು ಪಾತ್ರಗಳಲಿ ಮುಖ್ಯವಾಗಿ ಲಕ್ಷ್ಮೀರಮಣ, ಸುಬ್ಬರಾವ್, ಗೋಪಾಲ್, ವರದರಾಜನ್ ಮತ್ತು ವಿಧವೆ ಪಾತ್ರಗಳಲ್ಲಿ ಆನಂದು, ಶ್ರೀನಿವಾಸ್ ರಾವ್ (ಚೌಡು), ಸಿ.ವಿ.ನಂಜುಂಡಯ್ಯ ಮುಂತಾದವರು ಮಾಡುತ್ತಿದ್ದರು. ಮೊದಲ ಬಾರಿಗೆ ಶ್ರೀಮತಿ ಮಧುರಾ ಕೃಷ್ಣಸ್ವಾಮಿ **"ಬಂಡ್ವಾಳಿಲ್ಲದ್ಬಡಾಯಿ"** ಯಲ್ಲಿ ಜೀವು ಪಾತ್ರ ವಹಿಸಿದ ನಂತರ ಹೆಣ್ಣು ಪಾತ್ರಗಳನ್ನು ಹೆಂಗಸರೇ ಮಾದುವ ಪರಿಪಾಠವಾಯಿತು. ಲಕ್ಷ್ಮೀಕೃಷ್ಣಸ್ವಾಮಿ, ಸುಶೀಲಾ ಜಯಭೀಮರಾವ್ ಮುಂತಾದವರು ಮುಂದೆ ಬಂದರು. ಈಗ ಯಾವ ಅಡೆ ತಡೆಯೂ ಇಲ್ಲದೆ ಹೆಣ್ಣು ಪಾತ್ರಗಳಿಗೆ ಹೆಣ್ಣುಮಕ್ಕಳೇ ಬರುತ್ತಿದ್ದಾರೆ. ಅಲ್ಲದೆ ಈಗಿನ ಜನರೇಶನ್ ಎಲ್ಲ ಹೆಣ್ಣು ಮಕ್ಕಳೂ ಓದಿ ಡಿಗ್ರಿ ಪಡೆದುಕೊಂಡು ಗಂಡಸರಿಗೆ ಸರಿಸಮವಾಗಿ ಎಲ್ಲಾ ವಿಷಯದಲ್ಲೂ ಸಹಕರಿಸುತ್ತಿರುವುದು ಸಂತಸದ ಸಂಗತಿ. ಈಗಿನ ವಿಸ್ತರಿಸಿದ ಕಟ್ಟಡಕ್ಕೆ ಸರಿಜೋಡಿಯಾಗಿ ಹೆಂಗಸರೂ ಸಹ ಮೈಸೂರು ಅಸೋಸಿಯೇಷನ್ನಿನ ಇಂದಿನ ಅಭ್ಯುದಯಕ್ಕೆ ಕಾರಣರಾಗಿದ್ದಾರೆ. ಗಂಡು ಹೆಣ್ಣಿನ ಸಮ ಜೋಡಿಯಾಗಿ ಬಾಳ್ಲೆ, ಅಸೋಸಿಯೇಷನ್ನು ಹೀಗೆ ಇನ್ನೂ ಪ್ರವೃದ್ಧಮಾನಕ್ಕೆ ಬರಲಿ ಎಂದು ಹಾರೈಸುತ್ತೇನೆ. ●

**ಡಾ. ಜಿ.ಎಸ್. ಶಿವರುದ್ರಪ್ಪ 1995ರಲ್ಲಿ ಅಸೋಸಿಯೇಷನ್‍ಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಸಂದರ್ಶಕರ ಡೈರಿಯಲ್ಲಿ ಬರೆದ ಹಸ್ತಾಕ್ಷರ.**



# ಅಸೋಸಿಯೇಶನ್‌ನ ಹಳೆಯ ಮಧುರ ನೆನಪುಗಳು


























# ಅಸೋಸಿಯೇಷನ್ "ನಡೆದು ಬಂದ ದಾರಿ"

**ಹಿನ್ನೆಲೆ:** ಹೊರನಾಡಿನಲ್ಲಿಯೇ ಅತಿ ಹಳೆಯದಾದ ಸಂಸ್ಥೆ – ಕನ್ನಡಕ್ಕೆಂದೇ ದುಡಿಯುತ್ತಿರುವ ಸಂಸ್ಥೆಯೆಂದರೆ, "ಮೈಸೂರು ಅಸೋಸಿಯೇಷನ್". ಹೆಸರೇ ಹೇಳುತ್ತಿರುವಂತೆ, ಮೈಸೂರು ಸಂಸ್ಥಾನದಿಂದ ವಲಸೆ ಬಂದ ಕನ್ನಡಿಗರು ಒಡಗೂಡಿ ಮುಂಬಯಿಯಲ್ಲಿ ಹುಟ್ಟುಹಾಕಿದ ಕನ್ನಡ ಕೂಟ ಇದಾಗಿದೆ. ಹಾಗೆ ನೋಡಿದರೆ, ಕನ್ನಡಿಗರು, ದೆಹಲಿ ಮತ್ತು ಕಲ್ಕತ್ತೆಯಲ್ಲಿಯೂ ಮೈಸೂರು ಅಸೋಸಿಯೇಷನ್‌ಗಳನ್ನು ಸ್ಥಾಪಿಸಿದರು. ದೆಹಲಿಯ ಮೈಸೂರು ಅಸೋಸಿಯೇಷನ್, 1974 ರ ನಂತರ ತನ್ನ ಹೆಸರನ್ನು ಕರ್ನಾಟಕ ಸಂಘವಾಗಿ ಮಾರ್ಪಡಿಸಿಕೊಂಡಿತು. ಕಲ್ಕತ್ತೆಯಲ್ಲಿ, ಟಸ್ಟ್‌ನ ಹೆಸರು ಇಂದೂ ಮೈಸೂರು ಅಸೋಸಿಯೇಷನ್ ಆಗಿದ್ದು, ಚಟುವಟಿಕೆಗಳು ಕರ್ನಾಟಕ ಸಂಘದ ಹೆಸರಾಗಿ ಜರುಗುತ್ತಿವೆ. ಆದರೆ ಮುಂಬಯಿಯಲ್ಲಿ 'ಮೈಸೂರು ಅಸೋಸಿಯೇಷನ್' ಆಗಿಯೇ ಉಳಿದಿದೆ. ಇದಕ್ಕೆ ಒಂದು ಕಥೆ ಹಿಂದಿದೆ. 1974 ರಲ್ಲಿ ಮೈಸೂರು ರಾಜ್ಯ ಕರ್ನಾಟಕವಾದಾಗ, ಮುಂಬಯಿಯಲ್ಲಿಯೂ ಸಂಘದ ಹೆಸರನ್ನು 'ಕರ್ನಾಟಕ' ಎಂದು ಹೆಸರಿಡಬೇಕೆಂದು ಚರ್ಚೆಯಾಗುತ್ತಿರುವಾಗ, ಆಗಿನ ಕರ್ನಾಟಕದ ಮುಖ್ಯ ಮಂತ್ರಿಗಳಾದ ಶ್ರೀ.ದೇವರಾಜ ಅರಸು ಹಾಗೂ ಹಣಕಾಸಿನ ಮಂತ್ರಿಗಳಾದ ಶ್ರೀ.ಎಸ್.ಎಂ.ಕೃಷ್ಣರವರು ಅಸೋಸಿಯೇಷನ್‌ನ ಬಂಗಾರ ಹಬ್ಬದ ಸಲುವಾಗಿ ಭೇಟಿಯನ್ನಿತ್ತಿದ್ದರು. ಮಾತನಾಡುವಾಗ "ಮೈಸೂರು", "ಮೈಸೂರು ಮಲ್ಲಿಗೆ", "ಮೈಸೂರು ಶ್ರೀಗಂಧ", "ಮೈಸೂರು ಎಲೆ", "ಮೈಸೂರು ಸ್ಯಾಂಡಲ್ ಸೋಪ್", "ಮೈಸೂರು ಪಾಕ್"ನಂತಹಾ ಕಂಪಿನ, ರುಚಿಯಾದ ವಸ್ತುಗಳಿಗೆ ಬೇರಾಗಿದೆ. ಈ ಕಂಪು–ರುಚಿಗಳಿಗೆ ಯಾರೂ "ಕರ್ನಾಟಕ ಮಲ್ಲಿಗೆ", "ಕರ್ನಾಟಕ ಪಾಕ್" ಎಂದು ಕರೆಯುವುದಿಲ್ಲ. ಆದ್ದರಿಂದ ನೀವು ಸಂಘದ ಹೆಸರನ್ನು ಕಾಪಾಡಿಕೊಂಡು ಬನ್ನಿ" ಎಂದು ತಿಳುವಳಿಕೆ ನೀಡಿದರು. ಇಂತಹ ಕಂಪಿನ – ರುಚಿಯ ಕೂಟ ಮೈಸೂರು ಅಸೋಸಿಯೇಷನ್ ಇದೀಗ 90 ವರ್ಷ ಕಳೆದು 91 ರ ಹರೆಯಕ್ಕೆ ಕಾಲಿಟ್ಟಿದೆ.

**ಹುಟ್ಟು:** 1926, ಫೆಬ್ರುವರಿ 26 ರಂದು ಸಂಜೆ, ಗಿರಿಗಾಂನ ಮನೆಯೊಂದರಲ್ಲಿ 7 ಮಂದಿ ಕೂಡಿ ಕಟ್ಟಿದ ಅಸೋಸಿಯೇಷನ್ ನಡೆದು ಬಂದ ದಾರಿ ಇನ್ನೂ



1930ರ **ಅಸೋಸಿಯೇಶನ್‌ನ ಸದಸ್ಯರು.**

ಹಸಿರಾಗಿದೆ. ಶ್ರೀ. ಚಂದ್ರಶೇಖರ ಶರ್ಮಾರವರು ಬರಹಗಾರರು ಹಾಗೂ ಕಟ್ಟಾ ಕನ್ನಡದ ಅಭಿಮಾನಿಗಳು ಅವರನ್ನೇ ಮೊಟ್ಟಮೊದಲನೆಯ ಕಾರ್ಯದರ್ಶಿಗಳಾಗಿ ಆರಿಸಲಾಯಿತು. ಶ್ರೀ.ಗಂಗಾಧರಯ್ಯನವರು ವೃತ್ತಿಯಲ್ಲಿ ಅಡ್ವೋಕೇಟ್ ಆದರೂ, ಮೂಲತಃ ಕಲಾವಿದರು. ಅವರೇ ಉಪ ಅಧ್ಯಕ್ಷರಾದರು. ಆಗಿನ ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಉನ್ನತ ಹುದ್ದೆಯಲ್ಲಿದ್ದ ರಾವ್ ಬಹಾದ್ದೂರ್ ಬಾಂಬೆ ರಾಮಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. 1915 ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು, ಚೀಫ್ ಎಂಜಿನಿಯರ್ ಪದವಿಯಿಂದ ನಿವೃತ್ತಿಯಾದಾಗ, ಅವರ ಅಧಿಕಾರ ಭಾರವೆಲ್ಲಾ ಬಾಂಬೆ ರಾಮಸ್ವಾಮಿಯವರ ಮೇಲೆ ಬಂದಿತು. ಅವರು 1915 ರಲ್ಲಿ ಬ್ರಿಟನ್ನಿನ ಸಾರ್ವಭೌಮ ಐದನೆಯ ಎಡ್ವರ್ಡ್ ಮುಂಬಯಿಗೆ ಬಂದಿಳಿದಾಗ, ಅವರನ್ನು ಸ್ವಾಗತಿಸಲೋಸುಗ, ಭಾರತದ ಹೆಬ್ಬಾಗಿಲ"ನ್ನು ಕಟ್ಟುವ ಹೊಣೆ ರಾಮಸ್ವಾಮಿಯವರದಾಗಿತ್ತು. ಈಗಲೂ ಕೂಡ ಗೇಟ್ ವೇ ಆಫ್ ಇಂಡಿಯಾದ ಒಳಹೊಕ್ಕು ತಲೆ ಎತ್ತಿದಾಗ, ನಿಮಗೆ ಮೊದಲು ಕಾಣುವ ಹೆಸರು ಬಾಂಬೆ ರಾಮಸ್ವಾಮಿ.




✍ ಡಾ. ಬಿ. ಆರ್. ಮಂಜುನಾಥ್

ಆಗ ಮುಂಬಯಿಯಲ್ಲಿ ಮೈಸೂರು ಸಂಸ್ಥಾನದಿಂದ ಬಂದ ಇಂಜಿನಿಯರ್, ಲಾಯರ್, ವ್ಯಾಪಾರಿಗಳ ಒಂದು ದೊಡ್ಡ ಹಿಂಡೇ ಇತ್ತು. ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡಿಗರು ಮುಂಚೂಣಿಯಲ್ಲಿದ್ದರು. ಅವರೆಲ್ಲರೂ ಕೂಡಿ 1915 ರಲ್ಲಿ ಬ್ರಿಟನ್‌ನ ಸಾರ್ವಭೌಮ ಭೇಟಿಯನ್ನಿತ್ತಾಗ, ಕನ್ನಡದಲ್ಲಿಯೇ ಒಂದು ಬಿನ್ನವತ್ತಳೆಯನ್ನಿತ್ತಿದ್ದರು. ಇದು ಮುಂಬಯಿಯ ಇತಿಹಾಸದಲ್ಲಿಯೇ ಒಂದು ದಾಖಲೆಯಾಗಿ ನಿಂತಿದೆ.

**ಪತ್ರಿಕೆ/ಶಾಲೆ:** ಹುಟ್ಟಿದ ಮೈಸೂರು ಅಸೋಸಿಯೇಷನ್‌ಗೆ ಒಂದು ನೆಲೆ ಬೇಕಾಯಿತು. ಹೀಗಾಗಿ ಮಾತುಂಗಾದ, ನಪ್ಪೂ ಗಾರ್ಡನ್ಸ್‌ನಲ್ಲಿರುವ ವೇಲ್‌ಜಿ ಭಾಯಿ ಹಾಲ್‌ನಲ್ಲಿ, ಆಫೀಸ್‌ಗಾಗಿ ಜಾಗ ದೊರೆಯಿತು. ಚಂದ್ರಶೇಖರ ಶರ್ಮಾರವರು ಮೊದಲನೆಯ ವರ್ಷವೇ, "ಪ್ರಬೋಧಕ" ಎಂಬ ತಿಂಗಳ ಪತ್ರಿಕೆಯನ್ನು ಮೊದಲು ಮಾಡಿದರು. ಅಂತೆಯೇ, ಮಾಟುಂಗದಲ್ಲಿಯೇ ಒಂದು ಕನ್ನಡ ಶಾಲೆಯನ್ನು ಮೊದಲು ಮಾಡಿದರು. ಕೇವಲ ಒಬ್ಬ ಶಿಕ್ಷಕಿಯನ್ನು ಹೊಂದಿನ ಶಾಲೆ ಸರ್ಕಾರದ ನೆರವಿಲ್ಲದೆ, ಬಹುವರ್ಷ ಉಳಿಯಲಿಲ್ಲ. ಅಂತೆಯೇ ಚಂದ್ರಶೇಖರ ಶರ್ಮಾರವರು 1929 ರಲ್ಲಿ ಮತ್ತೆ ಕನ್ನಡ ನಾಡಿಗೆ ತೆರಳಿದಾಗ, "ಪ್ರಬೋಧಕ" ಮುಂದುವರೆಯಲಿಲ್ಲ. ಮತ್ತೆ "ಪ್ರಬೋಧಕ" 1983 ರಲ್ಲಿ ಶ್ರೀ. ಎಂ. ಎ. ಎನ್. ಪ್ರಸಾದ್ ಅವರ ಮುಂದಾಳುತನದಲ್ಲಿ "ನೇಸರು" ಎಂಬ ಹೆಸರಿನಲ್ಲಿ ಮತ್ತೆ ಮರುಹುಟ್ಟು ಪಡೆದಿದೆ. ಅಂತೆಯೇ ಶಾಲೆ, ಈಗಿನ ರಾಷ್ಟ್ರೀಯ ಕನ್ನಡ ವಿದ್ಯಾಸಂಸ್ಥೆಯಾಗಿದೆ.

**ಕಟ್ಟಡ:** ಮುಂಬಯಿಯಲ್ಲಿ ಸಂಘಗಳಿಗೆ ತಮ್ಮದೇ ಕಟ್ಟಡವನ್ನು ಹೊಂದುವ ಕನಸಿತ್ತು. ಅಂದಿನ ನಗರದ ನಡುವಿನಲ್ಲಿ ಅಂದರೆ, ವಿ.ಟಿ. ಹಾಗೂ ಗಿರಿಗಾಂಗಳಲ್ಲಿ, ಈ ಕನಸು ನನಸಾಗುವುದು ಆಗುತ್ತಲೇ ಇರಲಿಲ್ಲ. ಆದರೆ ಸರ್.ಎಂ.ವಿಶ್ವೇಶ್ವರಯ್ಯನವರು, ಮುಂಬಯಿ ನಗರ ಬಡಾವಣೆಗೆ ಒಂದು ಯೋಜನೆ ಹಾಕಿದ್ದರು. ಈ ಯೋಜನೆಯೇ, ದಾದರ್–ಮಾಟುಂಗಾ, ವಡಾಲಾ–ಶಿವ್ರಿ ಯೋಜನೆಯಾಗಿತ್ತು. ಈ ಬಡಾವಣೆಯಲ್ಲಿ ಶ್ರೀ ಬಾಂಬೆ ರಾಮಸ್ವಾಮಿ ಮತ್ತಿತರ ಗಣ್ಯರ ಶಿಫಾರಸಿನ ಫಲವಾಗಿ, ಮಾತುಂಗದ ಭಾವುದಾಜಿ ರಸ್ತೆಯಲ್ಲಿ 1930 ರಲ್ಲಿ ಒಂದು 100 X 80 ಅಡಿಗಳ ಒಂದು ನಿವೇಶನ ದೊರಕಿತ್ತು. ಈ ನಿವೇಷನದಲ್ಲಿ 1932 ರಲ್ಲಿ "ವಾಣಿ ವಿಲಾಸ್ ಮೆಮೋರಿಯಲ್ ಹಾಲ್" ಕಟ್ಟಲಾಯಿತು. ಒಂದೇ ಮಜಲಿನ ಈ ಕಟ್ಟಡ ಸುಂದರವಾಗಿ, ಮುಂದೆ ಒಂದು ಹುಲ್ಲುಗಾವಲು, ಪಕ್ಕದಲ್ಲಿ ಒಂದು ಗಂಗಾಧರನ ವಿಗ್ರಹವನ್ನು ಹೊಂದಿತ್ತು. 1934 ರಲ್ಲಿ, ಈ ಕಟ್ಟಡಕ್ಕೆ ಇನ್ನೊಂದು ಮಜಲನ್ನು ಏರಿಸಲಾಯಿತು. ಅಸೋಸಿಯೇಷನ್ನಿನ ಸದಸ್ಯರಿಗೆ ಇದೊಂದು ಹೆಗ್ಗಳಿಕೆಯಾಯಿತು. ಮುಂಬಯಿಯ ಕನ್ನಡ ಸಂಘಗಳಲ್ಲಿ, ತನ್ನದೇ ಕಟ್ಟಡ ಹೊಂದಿದ ಸಂಸ್ಥೆಗಳಲ್ಲಿ, ಅಸೋಸಿಯೇಷನ್ ಮೊದಲಾಯಿತು. ಸಂಜೆ ಎಲ್ಲಾ ಸದಸ್ಯರೂ ಹುಲ್ಲುಗಾವಲಿನ ಮೇಲೆ ಕೂತು ಮೈಸೂರು ಕಾಫಿ ಕುಡಿಯುವುದು, ಕನ್ನಡದಲ್ಲಿಯೇ ಮಾತುಕತೆಯಾಡುವುದಕ್ಕೆ, ಈ ಕಟ್ಟಡ ಅವಕಾಶ ಮಾಡಿಕೊಟ್ಟಿತು. ಇದಕ್ಕಾಗಿಯೇ ಅಸೋಸಿಯೇಷನ್ "ನಾಡಿನಾಚೆಯ ಮನೆ" ಎಂದು ಹೆಸರಾಯಿತು.

**ರಾಯ–ಭೇಟಿ:** ಅಸೋಸಿಯೇಷನ್ ಬೇಗನೆ ತನ್ನ ಚಟುವಟಿಕೆಗಳ ಮೂಲಕ "ಮುಂಬಯಿಯಲ್ಲಿ ಮೈಸೂರು ಸಂಸ್ಥಾನದ ರಾಯಭಾರಿ" ಎಂದು



**ಮೈಸೂರಿನ ದಿವಾನ್ ಸರ್ ಎಮ್. ಮಿಜಾ ಇಸ್ಮಾಯಿಲ್** (1935) **ಅಸೋಸಿಯೇಶನ್‌ಗೆ ಭೇಟಿಯಿತ್ತಾಗ.**

ಹೆಸರು ಮಾಡಿದ್ದ ಕಾರಣ ಅಂದಿನ ಎಲ್ಲಾ ದಿವಾನರೂ ಅಸೋಸಿಯೇಷನ್‌ಗೆ ಭೇಟಿ ನೀಡುವುಅದನ್ನು ನಿರ್ಧರಿಸಿದ್ದರು. 1935 ರಲ್ಲಿ ಸರ್.ಶ್ರೀ.ಅರ್ಕಾಟ್ ರಾಮಸ್ವಾಮಿ ಐಯ್ಯರ್ ಅವರು ಅಂತೆಯೇ ಮೈಸೂರು ಸಂಸ್ಥಾನದ ಆಗಿನ ದಿವಾನರಾಗಿದ್ದ ಸರ್ ಶ್ರೀ.ಮಿರ್ಜಾ ಇಸ್ಮಾಯಿಲ್ ಅವರು ಅಸೋಸಿಯೇಷನ್‌ಗೆ 1935 ರಲ್ಲಿ ಭೇಟಿಯಿತ್ತು, ಚಟುವಟಿಕೆಗಳನ್ನು ನೋಡಿ, ತಮ್ಮ ಸಲಹೆಗಳನ್ನಿತ್ತರು.


ಅಂತೆಯೇ 1937 ರಲ್ಲಿ ಅಂದಿನ ದಿವಾನರಾದ ಸರ್.ಎಂ.ವಿಶ್ವೇಶ್ವರಯ್ಯನವರು ಅಸೋಸಿಯೇಷನ್ನಿಗೆ ಭೇಟಿಯನ್ನಿತ್ತರು. ಅವರು, ಕೇವಲ ಸಾಹಿತ್ಯಿಕ ಹಾಗೂ ಕಲಾ ಚಟುವಟಿಕೆಗಳ ಕಾಲವಲ್ಲದೆ, ಶಿಕ್ಷಣಕ್ಕೂ ಗಮನ ನೀಡಬೇಕು ಎಂದು ಹೇಳಿದ ತಿಳುವಳಿಕೆಯ ಫಲವೇ. ರಾಷ್ಟ್ರೀಯ ಕನ್ನಡ ವಿದ್ಯಾಸಂಸ್ಥೆ, ಇಂದು ದೊಡ್ಡ ಮರವಾಗಿ ನಿಂತಿದೆ.

ಇದೇ ಸಮಯದಲ್ಲಿ ಮೈಸೂರು ಅಸೋಸಿಯೇಷನ್, ಕರ್ನಾಟಕ ಸಂಘ ಹಾಗೂ ಕರ್ನಾಟಕ ಸ್ಪೋರ್ಟ್ಸ್ ಅಸೋಸಿಯೇಷನ್ ಒಡಗೂಡಿ ನೀಡಿದ ಕರೆಯನ್ನು ಮನ್ನಿಸಿ, ಕನ್ನಡ ಸಾಹಿತ್ಯ ಪರಿಷತ್ತು ತನ್ನ 21ನೆಯ ಅಧಿವೇಶನವನ್ನು ಮುಂಬಯಿಯಲ್ಲಿ ಜರುಗಿಸಿದ್ದುದು ಹೆಮ್ಮೆಯ ವಿಷಯ.

1937ರಲ್ಲಿ ಮೈಸೂರಿನ ಅರಸರಾದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್, ಯುವರಾಜರಾದ ಕಂಠೀರವ ನರಸರಾಜ ಒಡೆಯರ್, ರಾಜಪುತ್ರಿಯರು, ಅಸೋಸಿಯೇಷನ್‌ಗೆ ಭೇಟಿ ನೀಡಿ, ಸದಸ್ಯರಿತ್ತ ಔತಣವನ್ನು ಒಪ್ಪಿಸಿಕೊಂಡರು. ಸ್ವಾತಂತ್ರ್ಯಾನಂತರ ಶ್ರೀ.ಕೆಂಗಲ್ ಹನುಮಂತಯ್ಯನವರು 1952 ರಲ್ಲಿ ಭೇಟಿ ಇತ್ತರು. ಅಸೋಸಿಯೇಷನ್ನಿನ ಬೆಳ್ಳಿ ಹಬ್ಬದಲ್ಲಿ 1952 ರಲ್ಲಿ ಮಹಾರಾಜರಾದ ಶ್ರೀ. ಜಯಚಾಮರಾಜೇಂದ್ರ ಒಡೆಯರು ಬಂದು ತಮ್ಮ ಚಿನ್ನದ ಕೈಯಿಂದ ಒಂದು ನವವಸಂತ ಅಶೋಕ ಮರವನ್ನು ಹುಟ್ಟು ಹಾಕಿದ್ದುದು ಇಂದೂ ನೆನಪಿದೆ. ಆ ಮರ ಇನ್ನೂ ಹಸಿರಾಗಿದೆ.


**ಆಟ :** ಮೊದಲ ದಿನಗಳಂದಿನಿಂದಲೂ, ಅಸೋಸಿಯೇಶ್ನ್, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಚೆಸ್, ಕೇರಂ, ಬಿಲಿಯರ್ಡ್ಸ್ ಹಾಗೂ ಟೇಬಲ್ ಟೆನ್ನಿಸ್‌ಗಳಿಗೆ ಹೆಸರಾದ ಸಂಸ್ಥೆ. ಬ್ಯಾಸ್ಕೆಟ್‌ಬಾಲ್‌ನಲ್ಲಿಯಂತೂ, ಅಸೋಸಿಯೇಷನ್ ತಂಡ 4 ಬಾರಿ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಛಾಂಪಿಯನ್ ಆಗಿ ಗೆದ್ದು ಬಂದಿದ್ದು ಇತಿಹಾಸವಾಗಿದೆ. ಅಸೋಸಿಯೇಷನ್ನಿನ ತಂಡದಲ್ಲಿ, ಶ್ರೀಯುತ ಏ.ಖ.ಏ.ಐಯ್ಯಂಗಾರ್, ಸೀತಾರಾಂ, ರಾಘವೇಂದ್ರ, ಪಾರ್ಥಸಾರಥಿ, ರಾಮಪ್ರಸಾದ್, ಜಮುನಾ ವರದಾಚಾರಿ, ಪಿ.ಎನ್.ರಾಮರಾವ್, ನೀಲಕಂಠ ಇವರುಗಳನ್ನುಇಲ್ಲಿ ಸ್ಮರಿಸಬಹುದು.

ಪ್ರತಿವರ್ಷ ಆಟ ಪಟುಗಳು, ಮೈಸೂರು ಅಸೋಸಿಯೇಷನ್ನಿನ ಪಂದ್ಯಗಳನ್ನು ಎದುರು ನೋಡುತ್ತಿದ್ದುದನ್ನು ನಾವಿಲ್ಲಿ ನೆನೆಯಬಹುದು. ಕರ್ನಾಟಕ ಮಹಾರಾಷ್ಟ್ರದ ಎಲ್ಲಾ ಹೆಸರಾಂತ ಆಟಪಟುಗಳು, ಮುಂಬಯಿಗೆ ಬಂದಾಗ ಅಸೋಸಿಯೇಷನ್‌ಗೆ ಭೇಟಿ ಇತ್ತು ಇಲ್ಲಿಯ ಆಟ ಪಟುಗಳನ್ನು ಹುರಿದುಂಬಿಸುತ್ತಿದ್ದುದನ್ನು ನಾವೆಲ್ಲರೂ ನೋಡಿದ್ದೇವೆ. ಹೀಗೆ ಟಿ. ವಿ. ಎಸ್. ಪ್ರಸನ್ನ, ಜಿ. ವಿಶ್ವನಾಥ್, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ಚಂದ್ರಶೇಖರ್ ಎಲ್ಲರೂ ಅಸೋಸಿಯೇಷನ್‌ಗೆ ಭೇಟಿ ಇತ್ತಿದ್ದರು. ಅಂತೆಯೇ ಶ್ರೀ. ಸುನಿಲ್ ಗವಾಸ್ಕರ್ ಮತ್ತು ವೆಂಗ್‌ಸರ್ಕಾರ್ ಅವರೂ ಅಸೋಸಿಯೇಷನ್‌ಗೆ ಭೇಟಿ ಇತ್ತಿದ್ದರು.



**ಜೆ.ಎನ್. ಐಯ್ಯರ್ ಮತ್ತು ನಾರಾಯಣ ಸ್ವಾಮಿ ಅವರು ಕ್ರೀಡಾಳುಗಳನ್ನು ಅಭಿನಂದಿಸುತ್ತಿರುವುದು.**

ಅಸೋಸಿಯೇಷನ್, ಬ್ಯಾಸ್ಕೆಟ್ ಬಾಲ್ ಪಂದ್ಯಕ್ಕಾಗಿ ಸೇಠ್ ಜಮ್ನಾದಾಸ್ ಮೆಮೋರಿಯಲ್ ಶೀಲ್ಡ್ ಬಿಲಿಯಡ್ಸ್‌ಗಾಗಿ ನಾನ್ಜಿ ಮೆಮೋರಿಯಲ್ ಮತ್ತು ಪ್ರಹ್ಲಾದ್ ಮೆಮೋರಿಯಲ್ ಟ್ರೋಫಿ ಟೇಬಲ್ ಟೆನ್ನಿಸ್ ಗಾಗಿ ಬಿ.ವಿ.ಎಸ್.ಐಯಂಗಾರ್ ರೋಲಿಂಗ್ ಟ್ರೋಫಿಗಳನ್ನು ಸ್ಥಾಪಿಸಿ, ಮುಂಬಯಿಯ ಎಲ್ಲಾ ಕ್ಲಬ್‌ಗಳಿಗೂ, ಪ್ರತಿವರ್ಷ ಕರೆ ನೀಡುತ್ತಿತ್ತು.



**ಬಾಸ್ಕೆಟ್ ಬಾಲ್ ಟೂರ್ನಮೆಂಟ್**

**ಸಾಹಿತ್ಯ:** ಸಾಹಿತಿ ಮತ್ತು ಕಲಾವಿದರಿಂದಲೇ ಮೊದಲಾದ ಅಸೋಸಿಯೇಷನ್‌ನಲ್ಲಿ ಇವೆರಡಕ್ಕೂ ಮೊದಲ ಪಂಕ್ತಿಯ ಶ್ರೀ ಚಂದ್ರಶೇಖರ ಶರ್ಮರ ನಂತರ, ಅನೇಕ ಸಾಹಿತಿಗಳಿಗೆ ಇದು ತವರುಮನೆಯಾಯಿತು. ಇಲ್ಲಿ ನಾನು ನಾಟಕೇತರ ಸಾಹಿತ್ಯವನ್ನು ನೆನೆಯುತ್ತೇನೆ. ಕವಿತೆ ಮತ್ತು ಕತೆ ಎಲ್ಲರ ಮನ ಸೂರೆಗೊಳ್ಳುವ ಸಾಹಿತ್ಯ ಬಗೆಗಳು. ನಮ್ಮವರೇ ಆದ ಶ್ರೀಮತಿ ಉಮಾರಾವ್, ಶ್ರೀಮತಿ ಧುಂಡ್ಯಿ, ಶ್ರೀ ಚಕ್ರಪಾಣಿ, ಶ್ರೀ ಮುತಾಲಿಕ ದೇಸಾಯಿ, ಡಾ. ಮಂಜುನಾಥ್, ಶ್ರೀಮತಿ ಗೀತಾ ವಿಶ್ವನಾಥ್ ಅವರುಗಳಲ್ಲದೇ



**ಡಾ. ಶಿವರಾಮ ಕಾರಂತ**

ಕರ್ನಾಟಕದ ಎಲ್ಲಾ ಸಾಹಿತಿಗಳೂ ಅಸೋಸಿಯೇಷನ್‌ಗೆ ಭೇಟಿ ಇತ್ತು ತಮ್ಮ ಸಾಹಿತ್ಯವನ್ನು ಹಂಚಿಕೊಂಡಿದ್ದಾರೆ. ಹೀಗೆ ಇವರಲ್ಲಿ ಬಿ.ಎಂ.ಶ್ರೀಕಂಠಯ್ಯ, ತೀನಂಶ್ರೀಕಂಠಯ್ಯ, ಪು.ತಿ.ನ, ಡಿ.ವಿ.ಜಿ, ದ.ರಾ.ಬೇಂದ್ರೆ, ಗೋವಿಂದ ಪೈ, ಶಿವರಾಮ ಕಾರಂತ್, ಕೀರ್ತಿನಾಥ ಕುರ್ತುಕೋಟಿ, ಎಸ್.ಎಲ್.ಭೈರಪ್ಪ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಮೂರ್ತಿ, ಜಯಂತ್ ಕಾಯ್ಕಿಣಿ, ಸೂರ್ಯನಾಥ್ ಕಾಮತ್, ಶಿವರುದ್ರಪ್ಪ, ಶ್ರೀರಂಗ, ಎನ್.ಕೆ.ರಾಮಚಂದ್ರರಾವ್ ಕೆಲವರು.

ಅಸೋಸಿಯೇಷನ್ ಹಲವಾರು ಬಾರಿ ಕವಿಸಮ್ಮೇಳನಗಳನ್ನು ಜರುಗಿಸಿದೆ. ಪ್ರಬೋಧಕ ಹಾಗೂ ನೇಸರುಗಳು ಅನೇಕ ಉದಯೋನ್ಮುಖ ಕವಿಗಳಿಗೆ, ಸಣ್ಣ ಕಥೆಕಾರರಿಗೆ ಅವರ ಕೃತಿಗಳನ್ನು ಪ್ರಕಟಿಸುವುದಕ್ಕೆ, ಅನುವು ಮಾಡಿದೆ. ವಿಚಾರಾತ್ಮಕ ಬರಹಳಿಗೆ ಅಸೋಸಿಯೇಷನ್ ಹೆಸರಾಗಿದೆ. ಕನ್ನಡ ಮರಾಠಿ ಸಾಹಿತ್ಯ ಸಮ್ಮೇಳನಗಳನ್ನು ಹಲವಾರು ಬಾರಿ ಈ 90 ವರ್ಷಗಳಲ್ಲಿ ನೆರವೇರಿಸಿದೆ. ಮೊದಲೆ ಹೇಳಿದಂತೆ 1937ರ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರುಗಿಸಿದೆ.


**ಸಂಗೀತ:** ಅಸೋಸಿಯೇಷನ್, ಶಾಸ್ತ್ರೀಯ, ಸುಗಮ, ಜಾನಪದ ಸಂಗೀತಗಳಿಗೆ ಮನೆಯಾಗಿದೆ. ನಮ್ಮವರೆ ಆದ ಶ್ರೀಮತಿ ವಿಜಯಲಕ್ಷ್ಮಿ ನಾಥನ್, ಡಾ.ಲಲಿತಾ ರಾವ್, ಶ್ರೀಮತಿ ಶ್ಯಾಮಲಾ ರಾಧೇಶ್ ಅಲ್ಲದೆ ಕರ್ನಾಟಕ ಮಹಾರಾಷ್ಟ್ರದ ಎಲ್ಲಾ ಹಿರಿಯ ಸಂಗೀತಗಾರರೂ ಅಸೋಸಿಯೇಷನ್ನಿನ ವೇದಿಕೆಯ ಮೇಲೆ ಹಾಡಿ ರಂಜಿಸಿದ್ದಾರೆ.

ಇವರಲ್ಲಿ, ಕರ್ನಾಟಕ ಶೈಲಿಯ ಆರ್.ಕೆ.ಶ್ರೀಕಂಠನ್, ಸತ್ಯವತಿ, ಸುಕನ್ಯಾ ಪ್ರಭಾಕರ್, ಎಂ.ಎಸ್.ಶೀಲಾ, ಬಾಂಬೆ ಜಯಶ್ರೀ, ಚೊಕ್ಕಮ್ಮ, ನೀಲಮ್ಮ ಕಡಾಂಬಿ, ಪಂಡಿತ್ ವಡವಟ್ಟಿ, ಆರ್.ಕೆ.ಪದ್ಮನಾಭ, ನಾಗಮಣಿ ಮತ್ತು ಇನ್ನೂ ಅನೇಕರು ಈ 90 ವರ್ಷಗಳಲ್ಲಿ ಅಸೋಸಿಯೇಷನ್ನಿನ ವೇದಿಕೆಯ ಮೇಲೆ ಹಾಡಿದ್ದಾರೆ. ಅನೇಕ ವಾದ್ಯಗಾರರೂ ಕೂಡ ನಮ್ಮನ್ನು ರಂಜಿಸಿದ್ದಾರೆ.

ಹಿಂದೂಸ್ತಾನಿ ಗಾಯನದಲ್ಲಿ: ಮಲ್ಲಿಕಾರ್ಜುನ ಮನ್ಸೂರು, ಭೀಮಸೇನ ಜೋಷಿ, ಗಂಗೂಬಾಯಿ ಹಾನಗಲ್, ಕಿಶೋರಿ ಅಮೋನ್‌ಕರ್, ಜೀತೇಂದ್ರ ಅಭಿಷೇಕಿ, ಗಣಪತಿ ಭಟ್, ಅಶ್ವಿನಿ ಭಿಡೆ, ಫಿರೋಜ್ ದಸ್ತೂರ್, ಶೋಭಾ ಗುರ್ಟು, ಶ್ರೀಪಾದ್ ಹೆಗ್ಡೆ, ಫೈಯಾಜ್ ಖಾನ್, ವಿಲಾಯತ್ ಖಾನ್, ವೆಂಕಟೇಶ್ ಕುಮಾರ್, ಸಂಗೀತಾ ಕಟ್ಟಿ, ಶೃತಿ ಸಡೋಲಿಕರ್, ದೇವಕಿ ಪಂಡಿತ್, ಪದ್ಮಾ ತಲವಾಲ್‌ಕರ್, ವಿನಾಯಕ ತೊರವಿ, ಹರಿಪ್ರಸಾದ್ ಚೌರಾಸಿಯಾ, ಈ ಮಹಾ ಗಾಯಕರೆಲ್ಲರೂ ಬಂದು ಕೇಳುಗರರ ಎದೆಯನ್ನು ಗೆದ್ದಿದ್ದಾರೆ.

ಅಸೋಸಿಯೇಷನ್ 1934 ರಿಂದ ಮಹಾಗಣಪತಿ ಉತ್ಸವದ ಅಂಗವಾಗಿ ಸಂಗೀತೋತ್ಸವವನ್ನು ಜರುಗಿಸುತ್ತಿದ್ದು, ಅದರಲ್ಲಿ 8–10 ದಿನದ ಸಂಗೀತ ಉತ್ಸವವನ್ನು ನೆರವೇರಿಸಿ, ಈ ಮಹಾ ಗಾಯಕರನ್ನು ಕರೆಸಿಕೊಂಡಿದೆ. ಇದಲ್ಲದೆ, ಬೆಳ್ಳಿ, ಬಂಗಾರ, ವಜ್ರ ಮತ್ತು ಅಮೃತೋತ್ಸವದ ಸಂದರ್ಭಗಳಲ್ಲಿ ಮಹಾಪ್ರಮಾಣದಲ್ಲಿ ಸಂಗೀತೋತ್ಸವನ್ನು ಏರ್ಪಡಿಸಿದ ಹೆಗ್ಗಳಿಕೆ ಅಸೋಸಿಯೇಷನ್ನಿದಾಗಿದೆ.

**ರಂಗಭೂಮಿ:** ಗುಬ್ಬಿ ಕಂಪೆನಿಯನ್ನು ಬಿಟ್ಟರೆ ಕನ್ನಡ ರಂಗಭೂಮಿಯಲ್ಲಿ ಸತತವಾಗಿ 90 ವರ್ಷಕಾಲ ಚಟುವಟಿಕೆಯಾಗಿರುವ ತಂಡವೆಂದರೆ ಮೈಸೂರು ಅಸೋಸಿಯೇಷನ್.



ಅಸೋಶಿಯೇಶನ್‌ನ ಆರಂಭದ ಉಪಾಧ್ಯಕ್ಷ
ಹಾಗೂ ನಾಟಕ ಕಲಾವಿದ
ಎಚ್.ಕೆ. ಗಂಗಾಧರಯ್ಯ (1929-30)

1926 ರಲ್ಲಿ ಅಸೋಸಿಯೇಷನ್ ಹುಟ್ಟಿದಾಗ ಉಪಾಧ್ಯಕ್ಷರಾಗಿದ್ದ ಶ್ರೀ ಗಂಗಾಧರಯ್ಯನವರು ಅಸೋಸಿ ಯೇಷನ್ನಿನ ಮೊದಲ ರಂಗ ಕಲಾವಿದ. ವೃತ್ತಿಯಲ್ಲಿ ಅಡ್ವೋಕೇಟ್ ಆಗಿದ್ದ ಇವರ ಮೊದಲ ಒಲವು ರಂಗಭೂಮಿ. 1927 ರಲ್ಲಿ ಅವರು ಶ್ರೀಮತಿ ಯಮುನಾಬಾಯಿ ನಾಯರ್ ಆಸ್ಪತ್ರೆಯ ನೆರವಿಗಾಗಿ "ವಿರಾಟ ಪರ್ವ" ನಾಟಕವನ್ನಾಡಿ ಹಣಕೂಡಿಸಿಕೊಟ್ಟರು. ನಂತರ ಬಸವಪ್ಪ ಶಾಸ್ತ್ರಿಯವರ "ಶಾಕುಂತಲ"ವನ್ನೂ ಆಡಿಸಿದರು. 1233ರಲ್ಲಿ "ಪ್ರೇಮದ ಪುತ್ರಿ"



'ಕಲಹ ಕುತೂಹಲ' ನಾಟಕದಲ್ಲಿ ಅಭಿನಯಿಸಿದ ವಿ.ಕೆ. ಮೂರ್ತಿ

ಖ್ಯಾತಿಯ ಶ್ರೀ.ಆರ್.ನಾಗೇಂದ್ರ ರಾಯರು ಅಸೋಸಿಯೇಷನ್ನಿನ ಸದಸ್ಯರಾಗಿ ಮುಂಬಯಿಯಲ್ಲಿ ಇದ್ದರು ಎನ್ನುವುದು ಬಹಳ ಮಂದಿಗೆ ತಿಳಿದಂತಿಲ್ಲ. ನಾಗೇಂದ್ರರಾಯರು "ಕನ್ಯಾಶುಲ್ಕ" ನಾಟಕವನ್ನು ಅಸೋಸಿಯೇಷನ್‌ನಲ್ಲಿ ಆಡಿಸಿದ್ದರು. ಅದೇ ಮುಂದೆ ಚಲನಚಿತ್ರವಾಗಿ ಜಯಭೇರಿ ಹೊಡೆಯಿತು. ಕಟ್ಟಡ ಬಂದಾದ ನಂತರ ಪ್ರತಿ ತಿಂಗಳು ಒಂದೊಂದು ಹೊಸ ನಾಟಕವನ್ನು ತಂಡ ಮುಂದೆ ಇಡುತ್ತಿತ್ತು. 1940 ರಿಂದ ಮೂರು ವರ್ಷ ಕಾಲ ಕನ್ನಡ ರಂಗ ಪಿತಾಮಹ ಶ್ರೀ.ಟಿ.ಪಿ.ಕೈಲಾಸಂ ಅಸೋಸಿಯೇಷನ್ನಿನಲ್ಲಿಯೇ ಇದ್ದು, ಅವರೆಲ್ಲಾ ನಾಟಕಗಳನ್ನೂ ತಂಡದಿಂದ ಆಡಿಸಿದ್ದಲ್ಲದೆ, "ನಮ್ಮ ಕ್ಲಬ್ಬು" ನಾಟಕವನ್ನು ಅಸೋಸಿಯೇಷನ್ನಿಗಾಗಿಯೇ ಬರೆದರು. ಅವರ ಪ್ರಭಾವದಿಂದ 1940 ರಿಂದ 1970 ರವರೆಗೆ, ಅಸೋಸಿಯೇಷನ್ ತಂಡ, "ಕೈಲಾಸಂ ನಾಟಕಗಳ ಪಟುಗಳು" ಎಂದು ಹೆಸರುವಾಸಿಯಾಯಿತು.

ಶ್ರೀ.ವಿ.ಕೆ.ಮೂರ್ತಿ, ಶ್ರೀ.ಸಿ.ಕೆ.ಪುಟ್ಟಣ್ಣಯ್ಯ, ಶ್ರೀ. ಶ್ರೀನಿವಾಸ್, ಶ್ರೀ.ರಮಣ್ ಹೆಸರಾದವರು, ಸಿ.ಕೆ.ಪುಟ್ಟಣ್ಣಯ್ಯನವರು ಅನೇಕ ನಾಟಕಗಳನ್ನು ಅಸೋಸಿಯೇಷನ್‌ಗಾಗಿಯೇ ಬರೆದರು. "ವಕ್ರಮೂರ್ತಿ", "ಮೀಸೆ ಮಣ್ಣಾಗಲಿಲ್ಲ" ಮುಂತಾದ ನಾಟಕಗಳು ಅಸೋಸಿಯೇಷನ್ ಬೆಳವಣಿಗೆಗೆ ಮೆಟ್ಟಿಲಾದವು.

ಶ್ರೀ.ವಿ.ಕೆ. ಮೂರ್ತಿಯವರ ಮುಂದಾಳುತನದಲ್ಲಿ, ಕೈಲಾಸಂ, ಪರ್ವತವಾಣಿ, ಕ್ಷೀರಸಾಗರ, ದಾಳರಥಿ ದೀಕ್ಷಿತ್, ಅವರ ನಾಟಕಗಳೆಲ್ಲಾ ಆಡಲ್ಪಟ್ಟವು. ಒಂದು ಹಿರಿದಾದ ತಂಡ ತಯಾರಾಯಿತು. ಕೇವಲ ಗಂಡಸರೇ ಹೆಣ್ಣು ಪಾತ್ರಗಳನ್ನು ಆಡುತ್ತಿದ್ದವು. ಆದರೆ 1953 ರಲ್ಲಿ ಮಧುರಾ ಕೃಷ್ಣಸ್ವಾಮಿಯವರು ತಾವೇ ನಾಟಕದಲ್ಲಿ ಪಾತ್ರವಹಿಸಿ ಒಂದು ಪರ್ವಕಾಲಕ್ಕೆ ಕಾಲಿಟ್ಟರು. ಅಂದಿನಿಂದ ಅಸೋಸಿಯೇಷನ್ನಿನಲ್ಲಿ ಒಂದು ಮಹಿಳಾ ಕಲಾವಿದರ ಪ್ರವಾಹವೇ ಹರಿದು ಬಂದಿದೆ. ಶ್ರೀಮತಿಯವರಾದ ಶಾರದಾ ನಾರಾಯಣಸ್ವಾಮಿ, ಕುಂತಿ ದುಗ್ಗಪ್ಪಯ್ಯ, ಗೀತಾ ವಿಶ್ವನಾಥ್, ಉಷಾ ಜೈರಾಂ, ರಮಾ ಹರಿಹರನ್, ಭಾರತಿ ಪ್ರಸಾದ್, ರಮಾ ವೆಂಕಟೇಶ್, ಶಾರ್ವರಿ, ಸುಷ್ಮಾ, ಸೌಮ್ಯ, ಲಕ್ಷ್ಮೀ ಸೀತಾರಾಂ, ರಮಾ ವಸಂತ್, ರೇಷ್ಮಾ, ಉಷಾ ಶ್ರೀಕಾಂತ್, ಉಮಾ ಪ್ರಭಾಕರ್ ಎಲ್ಲರೂ ತಮ್ಮ ಪ್ರತಿಭೆಯಿಂದ ಮುಂಬಯಿಯ ರಂಗಭೂಮಿಯನ್ನು ಚಳುಕುಗೊಳಿಸಿದರು.

ದಿಗ್ದರ್ಶಕರಾಗಿ 50 ಮತ್ತು 60 ದಶಕಗಳಲ್ಲಿ ವಿ.ಕೆ.ಮೂರ್ತಿ, ಪದ್ದಣ್ಣ, ಶಂಕರನಾರಾಯಣ್, ಹರಿದಾಸ್, ರಾಮಚಂದ್ರರಾವ್, ತಮ್ಮ ಪ್ರತಿಭೆಯಿಂದ ರಂಗಭೂಮಿಯನ್ನು ಬೆಳೆಸಿದರು. ಆಗಿನ ಸಾಮಾಜಿಕ ಹಾಗೂ ನಗೆ ನಾಟಕಗಳನ್ನು ಉತ್ತಮವಾಗಿ ನೋಡುಗರ ಮುಂದಿಡುವುದರಲ್ಲಿ ಅಸೋಸಿಯೇಷನ್ ಹೆಸರು ಮಾಡಿತು. ಹೆಚ್ಚು ಬಾರಿ ಕೇವಲ ಮೈಸೂರು ಅಸೋಸಿಯೇಷನ್ನಿನ ಸದಸ್ಯರಿಗಷ್ಟೇ ಮೀಸಲಾಗಿರುತ್ತಿದ್ದ ನಾಟಕಗಳು, ಕನ್ನಡ

ಕಲಾ ಕೇಂದ್ರದ ವಾರ್ಷಿಕ ನಾಟಕೋತ್ಸವದಿಂದ ಬೇರೆಯವರಿಗೂ ದಕ್ಕಿತು. ವಿ. ಕೆ. ಮೂರ್ತಿಯವರ "ನಂದಿ ಮಹಲ್", "ಕಲಹ ಕುತೂಹಲ", "ಅಮ್ಮಾವ್ರ ಗಂಡ", "ಭರ್ಜರಿ ಪ್ರದರ್ಶನಗಳನ್ನು ಮಾಡಿ ಜಯಭೇರಿ ನುಡಿಸಿತು.

70 ಮತ್ತು 80 ದಶಕಗಳಲ್ಲಿ, ಡಾ.ಮಂಜುನಾಥ್ ಹಲವಾರು ನಾಟಕಗಳನ್ನು ತಾವೇ ಬರೆದು ನಿರ್ದೇಶಿಸಿ, ಮೈಸೂರು ನಾಟಕಗಳಿಗೆ ಒಂದು ಹೊಸ ನಿಟ್ಟನ್ನೇ ತೋರಿದರು. ಶ್ರೀ ದುಗ್ಗಪ್ಪಯ್ಯ ನಾಡಿಗರ ತ್ರಿವೇಣಿಯವರ ಕಾದಂಬರಿ, "ಬೆಕ್ಕಿನ ಕಣ್ಣು" ಮತ್ತೆ ಮತ್ತೆ ಪ್ರದರ್ಶನಗೊಂಡು ಜನರ ಮನ ತಣಿಸಿತ್ತು. ಅಸಂಗತ ನಾಟಕಗಳ ಒಂದು ಹೊಳೆ ಅಸೋಸಿಯೇಷನ್ನಿನಲ್ಲಿ ಮೂಡಿ ಬಂದಿತು. ಲಂಕೇಶರ "ನನ್ನ ತಂಗಿಗೊಂದು ಗಂಡು ಕೊಡಿ", ಟಿ. ಪ್ರಸನ್ನರ "ಗೃಹಸ್ಥಾಶ್ರಮ" "ಗೋಡೆ" ಮತ್ತಿತರ ನಾಟಕಗಳು 70 ದಶಕದಲ್ಲಿ ಬಂದ ಹೊಸ ಅಲೆ. ಈ ಅಲೆಯನ್ನು ದಾಟಿ, ಸ್ತ್ರೀ ಪ್ರಾಧಾನ್ಯವಾದ ಸಾಮಾಜಿಕ ನ್ಯಾಯವನ್ನೇ ಕುರಿತ, ನಾಟಕಗಳು, ಎರಡು ದಶಕಗಳಲ್ಲಿ ಮುಂಬಯಿಯ ಹಾಗೂ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಪ್ರದರ್ಶನಗೊಂಡವು. "ರಂಗೋಲಿನ್ಯಾಯ", "ಬೆಕ್ಕಿನ ಕಣ್ಣು", "ಬಿಸಿಲ್ದುದುರೆ", "ಬೆಳ್ಳಿಬೈಲು", "ಬಿತ್ತಿ ಬೆಳೆದದ್ದು", "ಬೋನು", "ನ್ಯಾದ್ಯಾವರನ್ನ ನೋಡ್‌ಬ್ಯಾಕು", "ಸಾಕಾರ", "ಹೂಗಿಡದಲ್ಲಿ ಹೂವರಳಿಹುದು" ಒಂದರ ಹಿಂದೆ ಒಂದು ಮೂಡಿಬಂದು, ನಾಟಕ ಹಾಗೂ ನಾಟಕ ರಚನೆಯ ಕಾರ್ಯದಲ್ಲಿ ಅಪೂರ್ವ ಸಾಧನೆ ಹಾಗೂ ಕ್ರಾಂತಿಯನ್ನುಂಟು ಮಾಡಿದವು. ಆಗ, ಎಲ್ಲಾ ಇಂಗ್ಲೀಷ್ ಪತ್ರಿಕೆಗಳೂ ಕನ್ನಡ ನಾಟಕದ ವಿಮರ್ಶೆಯನ್ನು ನೀಡುತ್ತಿದ್ದುದ್ದರಿಂದ, ಹೆಚ್ಚಿನ ವಿವಾದದಿಂದ ಪ್ರಚಾರ ಚೆನ್ನಾಗಾಯಿತು. ಈ ಎರಡೂ ದಶಕಗಳಲ್ಲಿ, ಅಸೋಸಿಯೇಷನಿನ್ನ ನಾಟಕ ತಂಡದಲ್ಲಿ 75 ಕಲಾವಿದರು ಕೆಲಸ ಮಾಡುತ್ತಿದ್ದರು. ತಂಡದಲ್ಲಿ ಕೇವಲ ನಟನೆಯಲ್ಲದೆ, ರಂಗ ವಿನ್ಯಾಸ ಹಾಗೂ ಬೆಳಕು, ಪೋಷಾಕುಗಳ ಹೊಣೆಯೂ ನಟರದ್ದೇ ಆಗಿದ್ದರಿಂದ, ತಂಡ ಸರ್ವತೋನ್ಮುಖವಾಗಿ ಬೆಳೆದು, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಪ್ರವಾಸ ಮಾಡಿ ಹೆಸರು ಮಾಡಿತು. ಅಸೋಸಿಯೇಷನ್ ರಂಗಭೂಮಿಯಲ್ಲಿ ನಾಟಕದಲ್ಲಿ Action ಗೆ ಹೆಚ್ಚು ಪ್ರಾಧಾನ್ಯವಿದ್ದುದ್ದರಿಂದ ನಟರ ತರಬೇತಿ ಹೆಚ್ಚಿನ ಮಟ್ಟವನ್ನು ಮುಟ್ಟಿತು.

ಗೀತಾ ವಿಶ್ವನಾಥ್, ಇನ್ನೋರ್ವ ಸರ್ವತೋಮುಖ ಕಲಾವಿದೆ, ನಟನೆ, ನಾಟಕ, ನೃತ್ಯನಾಟಕಗಳು, ನಾಟಕ ರಚನೆ ಎಲ್ಲದರಲ್ಲಿಯೂ ಎತ್ತಿದ ಕೈ. ಅವರು ನಿರ್ದೇಶಿಸಿದ "ಸೂತ್ರದ ಗೊಂಬೆ", "ವಿಗಡ ವಿಕ್ರಮರಾರ್ಯ", "ಮುದ್ರಾ ರಾಕ್ಷಸ" ರಂಗವಿನ್ಯಾಸ, ಬೆಳಕಿನ ಪ್ರಯೋಗಕ್ಕೆ ಹೊಸಹಾದಿಯನ್ನು ಇತ್ತವು.

ಹಿನ್ನೆಲೆಯಲ್ಲಿ ಬಿ. ಎನ್. ಶ್ರೀಕಾಂತ್, ಸೋಮಶೇಖರ್ ಹಾಗೂ ಸರಿತಾ, ಉಮಾ, ರಾಘು, ಮ. ಅ .ನಾ. ಪ್ರಸಾದ್ ಅವರ ನಿಷ್ಠೆ, ಕೈಚಳಕ, ನಾಟಕಕ್ಕೆ ಜೀವಾಳವಾಗಿದ್ದವು. ಎಲ್ಲದಕ್ಕಿಂತ ಹೆಚ್ಚಾಗಿ ಸಂಗೀತ ನಾಟಕಗಳನ್ನು ಮಾಡಬಲ್ಲ ಕೆಲವೇ ನಾಟಕ ತಂಡಗಳಲ್ಲಿ, ಅಸೋಸಿಯೇಷನ್ ಮಂಚೂಣಿಯಲ್ಲಿದೆ. ಸಾಮಾಜಿಕ ನಾಟಕಗಳಲ್ಲಿಯೂ, ಸಂಗೀತದ ಹಿರಿಯ ಪಾತ್ರವನ್ನು ಹಾಗೂ ಭಾರತೀಯ ಬೇರನ್ನು ಬೆಳಸಿಕೊಂಡು ಬಂದಿರುವ ತಂಡಗಳಲ್ಲಿ ಅಸೋಸಿಯೇಷನ್ ತಂಡ ಎಲ್ಲರಿಗಿಂತ ಮುಂದಿದೆ.



**ಅಸೋಸಿಯೇಶನ್‌ನ ವಜ್ರ ಮಹೋತ್ಸವಕ್ಕೆ ಆಗಮಿಸಿದ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮತ್ತು ಇತರ ಗಣ್ಯರು.**

ಹೀಗೆ ಅಸೋಸಿಯೇಷನ್ನಿನ 90 ವರ್ಷಗಳ ಇತಿಹಾಸದಲ್ಲಿ ನಾಟಕದ ಪಾತ್ರ ಹಿರಿದಾಗಿದೆ.

**ಚಲನಚಿತ್ರ:** ಕನ್ನಡ ಚಲನಚಿತ್ರಭೂಮಿ ಹಾಗೂ ಅಸೋಸಿಯೇಷನ್ ಒಂದಾಗಿ ಬೆಳೆದಿವೆ. ಕನ್ನಡ ಚಿತ್ರಗಳನ್ನು ಅಸೋಸಿಯೇಷನ್ 1950 ರಿಂದ ತೋರುತ್ತಾ ಬಂದಿದೆ. ಅನೇಕ ಚಲನಚಿತ್ರೋತ್ಸವಗಳನ್ನು ಪ್ರತಿ ಎರಡು ವರ್ಷಕ್ಕೊಮ್ಮೆ, ಮುಂಬಯಿಯಲ್ಲಿ ಜರುಗಿಸಿ, ಕನ್ನಡ ಚಲನಚಿತ್ರದ ಎಲ್ಲಾ ಕಲಾವಿದರನ್ನೂ ತನ್ನಲ್ಲಿಗೆ ಬರಮಾಡಿಕೊಂಡು ಸತ್ಕರಿಸಿದೆ. ಆರ್. ನಾಗೇಂದ್ರರಾಯರು, ಡಾ. ರಾಜಕುಮಾರ್, ಜಯಮಾಲಾ, ಉದಯಕುಮಾರ್, ಗಿರೀಶ್ ಕಾರ್ನಾಡ್, ಬಿ. ವಿ. ಕಾರಂತ್, ನಾಗಾಭರಣ, ಶ್ರೀನಾಥ್, ತಾರಾ, ಗಿರೀಶ್ ಕಾಸರವಳ್ಳಿ ಮಾತು ಹಿರಿಯ ಕಲಾವಿದರು ಅಸೋಸಿಯೇಷನ್ನಿನ ಚಿತ್ರೋತ್ಸವದಲ್ಲಿ ಪಾಲ್ಗೊಂಡಿದ್ದಾರೆ. "ಹಂಸಗೀತೆ" ಚಿತ್ರದ ನಿರ್ಮಾಪಕರಲ್ಲಿ ಇಬ್ಬರು ನಮ್ಮ ಸದಸ್ಯರೇ ಎನ್ನುವುದು ಹಿಗ್ಗಿನ ಮಾತು.

ಚಿತ್ರಕಲೆ: ಅಸೋಸಿಯೇಷನ್ ಚಿತ್ರ ಪ್ರದರ್ಶನಗಳನ್ನು ಅಂದಿನ ಇಂದಿನವರೆಗೂ ಜರುಗಿಸುತ್ತಿದೆ. ಕರ್ನಾಟಕದ ಎಲ್ಲಾ ಕಲಾವಿದರೂ ಈ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಶ್ರೀ. ಕೆ.ಕೆ.ಹೆಬ್ಬಾರ್, ಶ್ರೀ.ಅಲಮೇಲಕರ್, ಶ್ರೀ. ಎನ್. ಸಿ. ದೇಸಾಯಿ, ಶ್ರೀ. ಎಸ್. ಎಂ. ಪಂಡಿತ್, ಶ್ರೀ.ಎನ್.ಬಿ.ಸಾಬಣ್ಣವರ್, ಶ್ರೀ ಉಪೇಂದ್ರ ನಾಯಕ್, ಶ್ರೀ. ಬದ್ರಿನಾರಾಯಣ್, ಶ್ರೀ. ವಾಮನ್ ಶಿರಹಟ್ಟಿ, ಶ್ರೀ.ದುಗ್ಗಪ್ಪಯ್ಯ ನಾಡಿಗ್, ಶ್ರೀ ಎಂ. ದಿವಾಕರ್, ಶ್ರೀಮತಿ ರೇಖಾರಾವ್, ಶ್ರೀಮತಿ ವಿಜಯಾ ಹಿರೇಮಠ್, ಶ್ರೀ ಗೋಪಾಲ್ ಸುಭೇದಾರ್, ಶ್ರೀ. ಎಲ್.ವಿ.ಶೆಣೈ ಅವರಂತಹ ಹಿರಿಯ ಕಲಾವಿದರು ಈ ಕಾರ್ಯದಲ್ಲಿ ಸಹಭಾಗಿಯಾಗಿದ್ದರು.

**ಕರ್ನಾಟಕ ಸರ್ಕಾರ ಹಾಗೂ ಅಕಾಡೆಮಿಗಳು**

ಕರ್ನಾಟಕ ಸರ್ಕಾರ, ಮೈಸೂರು ಸಂಸ್ಥಾನದ ಕಾಲದಿಂದ ಅಸೋಸಿಯೇಷನ್ನನ್ನು ಮುಂಬಯಿಯಲ್ಲಿ ಕನ್ನಡದ ರಾಯಭಾರಿ ಎಂದು ಪರಿಗಣಿಸಿ, ಅಸೋಸಿಯೇಷನ್ನಿನ ಎಲ್ಲಾ ಕಾರ್ಯಗಳಿಗೂ ನೆರವು ನೀಡುವುದೇ ಅಲ್ಲ, ಸಹಭಾಗಿಯಾಗಿದೆ. ಮುಂಬಯಿಯಲ್ಲಿ ಮೂರು ಬಾರಿ "ಕರ್ನಾಟಕೋತ್ಸವ", "ಜಾನಪದ ಜಾತ್ರೆ", ಹಾಗೂ "ರಾಜ್ಯೋತ್ಸವ"ಗಳನ್ನು ಜರುಗಿಸುವ ಸಂದರ್ಭದಲ್ಲಿ ಅಸೋಸಿಯೇಷನ್ನಿನ ಸಲಹೆ, ನೆರವು, ಮುಂದಾಳುತನ ಪಡೆದು ಅತಿ ಭರ್ಜರಿಯಿಂದ ಆಚರಿಸಿದೆ. "ಜಾನಪದ ಜಾತ್ರೆ"ಯನ್ನು ಆಚರಿಸುವ ಸಂದರ್ಭದಲ್ಲಿ, ಮುಂಬಯಿಯಲ್ಲಿ ಬೆಳಗಾವಿಯನ್ನು ಕುರಿತು, ಪ್ರತಿಭಟನೆ ನಡೆಯುತ್ತಿರುವಾಗ, ಕನ್ನಡಮ್ಮ ಮತ್ತು ಕಾನಡಾ ವಿಠಲು ತೇರನ್ನು ಕನ್ನಡ ಮರಾಠಿ ಕಲಾವಿದರನ್ನು ಒಡಗೂಡಿಸಿ ಮುಂಬಯಿಯ ಹೆದ್ದಾರಿಗಳಲ್ಲಿ ಕಿಂಚಿತ್ತೂ ಪ್ರತಿಭಟನೆ ಇಲ್ಲದೆ ಎಳೆದಾಗ, ಕರ್ನಾಟಕ ಸರ್ಕಾರದ ಶಹಭಾಸ್ ಗಿರಿ ಪಡೆದಿದೆ.

ಕರ್ನಾಟಕದಲ್ಲಿ ಸಾಹಿತ್ಯ, ನಾಟಕ, ಜಾನಪದ, ಚಿತ್ರ ಮತ್ತು ಶಿಲ್ಪ, ಸಂಗೀತ ಅಕಾಡೆಮಿಗಳೊಡನೆ ಅಸೋಸಿಯೇಷನ್‌ಗೆ ಗೆಳೆತನ ಅಂದಿನ ಕಾಲದಿಂದಲೂ ನಿಕಟವಾಗಿ ಬೆಳೆದು ಬಂದಿದೆ. ಇದರಿಂದಾಗಿ ಹಲವಾರು ಉತ್ಸವಗಳನ್ನು ಮುಂಬಯಿಯಲ್ಲಿ ಜರುಗಿಸುವ ಅವಕಾಶ, ಅಸೋಸಿಯೇಷನ್‌ಗೆ ದೊರಕಿದೆ. ಅಂತೆಯೇ ಅಸೋಸಿಯೇಷನ್ ಹೆಬ್ಬಾಗಿಲನ್ನು ಹೊಕ್ಕೊಡನೆಯೇ ಚಿತ್ರ ಮತ್ತು ಶಿಲ್ಪ ಕಲಾ ಅಕಾಡೆಮಿಯ ಎರಡು ಸೊಗಸಾದ ಕೊಡುಗೆಗಳು ಕಣ್ಣು ಸೆಳೆಯುತ್ತವೆ. ಒಳಬಾಗಿಲನ್ನು ದಾಟಿ ಬಂದಾಗ, ಕರ್ನಾಟಕ ಹದಿನಾಲ್ಕು ಪ್ರಮುಖ ಚಿತ್ರ ಕಲಾವಿದರು ಮೂಡಿಸಿರುವ ಚಿತ್ರಗಳು ಎದೆಯನ್ನು ಮಿಡಿಯುತ್ತವೆ.

ಎಲ್ಲದಕ್ಕಿಂತ ಹೆಚ್ಚಾಗಿ, ಕನ್ನಡನಾಡಿನ ಹೊಯ್ಸಳರ ಹಳೇಬೀಡಿನ ಸಿದ್ಧಿವಿನಾಯಕ, ಬಿಡದಿಯಲ್ಲಿ ರೂಪುತಳೆದು ನಮ್ಮಂಗಳದಲ್ಲಿ ನೆಲೆಸಿ ನಮ್ಮನ್ನು ಪ್ರತಿದಿನ ಆಶೀರ್ವದಿಸುತ್ತಿರುತ್ತಾನೆ. ಆ ಮಹಾದೇವನ ಇಚ್ಛೆಯಿಂದ ಅಸೋಸಿಯೇಷನ್ನನಲ್ಲಿ ಇಂದೂ ಕಲೆ ಸಾಹಿತ್ಯದ ಸೇವೆ ನಡೆಯುತ್ತಾ ಇದೆ.

90 ವರ್ಷ ಸಂದು 91ರ ಹರೆಯಕ್ಕೆ ಕಾಲಿಡುವಾಗ, ಜಾಗತಿಕ ಕನ್ನಡ ಕವನ ಸ್ಪರ್ಧೆ, ಜಾಗತಿಕ ಕನ್ನಡ ಸಣ್ಣ ಕಥೆಗಳ ಸ್ಪರ್ಧೆ, ಅಂತೆಯೇ ಜಾಗತಿಕ ಕನ್ನಡ ನಾಟಕ ಸ್ಪರ್ಧೆಗಳನ್ನು ಅಸೋಸಿಯೇಷನ್ ಹಮ್ಮಿಕೊಂಡಿದೆ. ಹೆಸರಾಂತ ಕವಿ, ಶ್ರೀ ವೆಂಕಟೇಶ ಮೂರ್ತಿಯವರನ್ನು ಬರಮಾಡಿಕೊಳ್ಳಲು ಹೆಮ್ಮೆ ಎನಿಸುತ್ತದೆ.

# ಮುಂಬೈನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಕನ್ನಡಿಗರು: ಮೈಸೂರು ಅಸೋಸಿಯೇಷನ್ನಿನ ಪಾತ್ರ



ಡಾ. ಲೀಲಾ ಬಿ. ಮುಂಬೈ
(ಕೃಪೆ: ಮೈಸೂರು ಸಾಂಸ್ಕೃತಿಕ ಸಂಕಥನ)

ಮುಂಬೈನ ಸರ್ವತೋಮುಖವಾದ ಬೆಳವಣಿಗೆ ಬೇರೆ ಬೇರೆ ಪ್ರಾಂತದಿಂದ ಬಂದು ಮುಂಬೈನಲ್ಲಿ ನೆಲಸಿದ ಜನರು ತಾವು ನೆಲಸಿದ ನೆಲವನ್ನು ಪ್ರೀತಿಸಿ, ಮುಂಬೈ ಪ್ರಗತಿಗೆ ಕಾರಣರೂ ಅಲ್ಲದೆ ಸಾಕಷ್ಟು ಲಾಭವನ್ನೂ ಪಡೆದಿದ್ದಾರೆ. ಇದರಲ್ಲಿ ಕನ್ನಡಿಗರ ಪಾತ್ರ ಮಹತ್ವದ್ದಾಗಿದೆ.

ಕರ್ನಾಟಕಕ್ಕೂ – ಮುಂಬೈಗೂ ಮೊದಲನೆ ಸಂಪರ್ಕ ಸಮುದ್ರದ ಮೂಲಕ ಇದರಿಂದ ಕರಾವಳೀ ತೀರದ ಜನರು ಮುಂಬೈಗೆ ಮೊದಲು ಬಂದರು. ಮುಂಬೈನಲ್ಲಿ ರೈಲ್ವೆ ಬೆಳವಣಿಗೆ 19ನೇ ಶತಮಾನದಲ್ಲಿ ಕಂಡ ನಂತರ ಕನ್ನಡಿಗರು ಮುಂಬೈ ಜನಸಂಖ್ಯೆಯನ್ನು ವರ್ಧಿಸಿ ತಮ್ಮತನವನ್ನು ಕಂಡುಕೊಂಡರು. ಅಂಇನ ಮುಂಬೈ ಪ್ರದೇಶಗಳಾದ, ಧಾರವಾಡ, ಬೆಳಗಾಂವ್ ಬೆಳ್ಳಾರಿ, ಬಿಜಾಪುರ, ಗುಲಬರ್ಗ, ರಾಯಚೂರು, ಊರುಗಳು ಮುಂಬೈಗೆ ಸೇರಿದ್ದು, ಉತ್ತರ ಕರ್ನಾಟಕ ಮತ್ತು ಮುಂಬೈ ಬಂದರಿಗೆ ಸಮೀಪವಾದ್ದರಿಂದ ವ್ಯಾಪಾರದಲ್ಲಿ ಹತ್ತಿ, ಕಾಫಿ, ಗೋಡಂಬಿ ಎಣ್ಣೆ, ಖನಿಜ ಬೀಜಗಳು, ಮುಖ್ಯವಾಗಿ ಕಚ್ಚಾರೇಷ್ಮೆ, ಕರ್ನಾಟಕದಿಂದ ಹೆಚ್ಚು ಆಮದಾಗುತ್ತದೆ. ಕನ್ನಡನಾಡು ಮುಂಬೈ ವ್ಯಾಪಾರದಲ್ಲಿ ಹೆಚ್ಚು ಮಹತ್ವದ ಪಾತ್ರ ವಹಿಸಿದೆ.

"ಮುಂಬೈ ಬಂದರಿನ ಹತ್ತಿರವಿರುವ ಹಲವಾರು ನಾಮಫಲಕಗಳು, ಮಂಗಳೂರು, ರಾಯಚೂರು, ಕಾರವಾರ ಮತ್ತು ಕುಮಟಾದ ಹತ್ತಿರವಿದ್ದು ಇವುಗಳಿಂದ ಮುಂಬೈ ಸಂಪರ್ಕ ಹೆಚ್ಚಿನದಾಗಿ ತಿಳಿಯಬರುತ್ತೆ ಎಂದು ಪ್ರೊ। ಸಿ.ಎಮ್. ಕುಲಕರ್ಣಿಯವರ ಲೇಖನದಿಂದ ತಿಳಿಯಬಹುದು.

ಹೀಗೆ ವಲಸೆಬಂದ ಕನ್ನಡಿಗರು ತಮ್ಮದೇ ಆದ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಅದೂ ಅಲ್ಲದೆ, ಸಾಹಿತ್ಯ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲೂ ಹೆಚ್ಚು ಶ್ರಮಿಸಿದರು. ಈ ಪ್ರಬಂಧದ ಮುಖ್ಯ ಉದ್ದೇಶ ಮುಂಬೈನ ಸಾಂಸ್ಕತಿಕ ವಲಯದಲ್ಲಿ ಮನೆಮಾತಾಗಿರುವ ಪ್ರತಿಷ್ಠಿತ "ಮೈಸೂರು ಅಸೋಸಿಯೇಷನ್" ಆದ್ದರಿಂದ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ.

ಮುಂಬೈನ ಔದ್ಯೋಗಿಕ ಕ್ಷೇತ್ರದಲ್ಲಿ ಮೊದಲು ಕಂಡುಬರುವ ಹೆಸರು ಹೈಕೋರೋ ಅಡ್ವೋಕೇಟ್ ಶ್ಯಾಮರಾವ್ ವಿಠಲ್ ಕೈಕಿಣೀ (1860) ಇವರು ಥಾಣಾ ಜಿಲ್ಲೆಯಲ್ಲಿರುವ ಬೇಲಾಪುರದ ತಮ್ಮ ಕಾರ್ಖಾನೆಯಲ್ಲಿ ಸಮುದ್ರದ ನೀರಿನಿಂದ ತಯಾರು ಮಾಡುವ "Plaster of Paris", ಬರೆಯುವ ಸಿಂಪಿಸುಣ್ಣ ಊಟದ ಉಪ್ಪು ಇವುಗಳನ್ನು ತಯಾರಿಸುವ ವಿಧಾನ ತಿಳಿದಿದ್ದು, ಇವುಗಳ ಔದ್ಯೋಗಿಕ ಕಾರ್ಖಾನೆಯಿಂದ ಉದ್ಯಮವನ್ನು ಬೆಳಸಿ, ಹಲವರಿಗೆ ಉದ್ಯೋಗ ಒದಗಿಸಿದರು. ಇದಲ್ಲದೆ ಧಾರವಡದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ್ದರಿಂದ ಕರ್ನಾಟಕ – ಮುಂಬೈಗೆ ಸೇತುವೆಯಂತೆ ದುಡಿದರು. ಪ್ರಸಿದ್ಧ ಮುಂಬೈ ಹೈಕೋರ್ಟ್ ವಕೀಲರದ ವಿಠಲ ಕೈಕಿಣಿ, ಸಾಂಸ್ಕೃತಿಕ ವಲಯದಲ್ಲಿ ಮಾನ್ಯರು.

ಎನ್.ಡಿ.ಸಿರೂರ್ ಉತ್ತರ ಕರ್ನಾಟಕದಿಂದ ಬಂದವರು ಮಾರ್ಡನ ಮಿಲ್ಸ್ ಇವರ ಶ್ರಮ ಫಲ ವೆಂಕಟರಾವ್ ಮತ್ತು ಶ್ರೀ ನಾಯಕ್ ಪವಲ್ ಕಂಪನಿ, ಶಸ್ತ್ರಚಿಕಿತ್ಸೆಯನ್ನು ಮಾಡುವ ಯಂತ್ರೋಪಕರಣವನ್ನು ತಯಾರಿಸಿದವರಲ್ಲಿ ಪ್ರಮುಖರು. ಈ ಇಬ್ಬರ ಪರಿಶ್ರಮದ ಫಲವಾಗಿ ನಾವು ಯಮುನಾಬಾಯಿ ನಾಯರ್ ಚಾರಿಟೇಬಲ್ ಹಾಸ್ಪಿಟಲ್ ಕಾಣುತ್ತೇವೆ. ವರ್ಣದ್ರವ್ಯ, ರಾಸಾಯನಿಕ ಉತ್ಪನ್ನ, ಬ್ಯಾಟರಿ ಈ ಉದ್ಯಮಗಳಲ್ಲಿ ಕನ್ನಡಿಗರನ್ನು ನೋಡಬಹುದಾದರೂ ಕೆ. ಹೆಚ್. ಕಬ್ಲೂರ್ ವರ್ಣದ್ರವ್ಯ ವ್ಯಾಪಾರದಲ್ಲಿ ಪ್ರಮುಖರು. ಇನ್ನು ಪ್ರಪಂಚಕ್ಕೆ ಮಾನ್ಯತೆ ತಂದ ಸರ್. ಎಮ್. ವಿಶ್ವೇಶ್ವರಯ್ಯ ಮೋಟಾರು ತಯಾರಿಸುವ ಕಾರ್ಖಾನೆಯನ್ನು ಮುಂಬೈನಲ್ಲಿ ಆರಂಭಿಸಬೇಕೆಂದು ಯತ್ನಿಸಿದರೂ ರಾಜಕೀಯ ಪಗಡೆಯಾಟದಿಂದ ಸಾಧ್ಯವಾಗಲಿಲ್ಲ. ಆದರೆ ವಾಲ್‌ಚಂದ್ ಹೀರಾಚಂದ್ ಪ್ರೀಮಿಯರ್ ಆಟೋಮೊಬೈಲ್ ಎಂಬ ಸಂಸ್ಥೆಯನ್ನು ಆರಂಭಿಸಿದರು. ಇದರಲ್ಲಿ ವಿಶ್ವೇಶ್ವರಯ್ಯನವರ ಕಾಣಿಕೆ ಅಪಾರ. 1884 ರಲ್ಲಿ ಮುಂಬೈ ಸರ್ಕಾರ ಸೇರಿದರು. 25 ವರುಷ ಮುಂಬೈ ಪ್ರಾಂತದಲ್ಲಿ ಹಲವಾರು ಜಾವಾಬ್ದಾರಿಯುತ ಪದವಿಯನ್ನು ನಿರ್ವಹಿಸಿದರು. ಎಮ್. ವಿಶ್ವೇಶ್ವರಯ್ಯ ಹಲವಾರು ಕಿರಿಯ ಮತ್ತು ಹಿರಿಯರನ್ನು ಪ್ರೋತ್ಸಾಹಿಸಿದರು. ಪೂನಾದ ಲಕಡಿಪೂಲ್ ಎಂಬ ಸೇತುವೆಯ ನಿರ್ಮಾಣದ ಹಿಂದಿದ್ದವರು ಮೈಸೂರಿನವರಾದ ಎಮ್. ಆರ್. ವರದರಾಜನ್. ಎಮ್. ಆರ್. ವರದರಾಜನ್ ಹಿಂದೂಸ್ತಾನ್ ಕನ್ಸಟ್ರಕ್ಷನ್ ಕಂಪೆನಿ (Hindustan Construction Company) ಯ ಮುಖ್ಯ ಅಧಿಕಾರಿಯಾಗಿ ಹಲವಾರು ವರ್ಷ ಮುಂಬೈನ ಮಾತುಂಗಾದಲ್ಲಿ ಇದ್ದವರು ಮತ್ತು ಸಮರ್ಥವಾಗಿ ಕಾರ್ಯವನ್ನು ನಡೆಸಿದವರು. ಲಕಡಿಪೂಲ್ ಸೇತುವೆ ಮುಗಿದ ಸಮಾರಂಭದಲ್ಲಿ Dr. R. K. Naidu ರವರು ಅವರನ್ನು ಹೀಗೆ ಶ್ಲಾಘಿಸಿರುತ್ತಾರೆ. "I take the opportunity to congratulate the firm and its able young Engineer Mr.M.R.Varadarajan for the wonderful record and the highly satisfactory manner in which work has been completed. But for Mr. M.R.Varadarajan enthusiasm and indefatigable energy it would not have been possible to complete the work with in such a short time (only two months) and in much creditable manner". (2) ಸ್ವತಃ ಸರ್ ಎಂ. ವಿಶ್ವೇಶ್ವರಯ್ಯ ಉಪಸ್ಥಿತರಿದ್ದರು. ಎಮ್.ಆರ್.ವರ್ದರಾಜನ್ ಮುಂಬೈನ ಸಾಂಸ್ಥತಿಕ ವಲಯದಲ್ಲೂ ಪ್ರತಿಷ್ಠಿತರಾಗಿದ್ದರು ಮತ್ತು ಅನೇಕ ಕಲಾಕಾರರನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಪ್ರೋತ್ಸಾಹಿಸಿದರು.

ಮುಂಬೈನ ಪ್ಲೇಗ್ ಪಿಡುಗು (1897) ಎಲ್ಲರಿಗೂ ಗೊತ್ತಿರುವ ವಿಷಯ. ಆಗ ಪುಣೆಯಲ್ಲಿದ್ದ ವಿಶ್ವೇಶ್ವರಯ್ಯನವರು Public works Department ನಲ್ಲಿ (ಚೀಫ್ ಇಂಜಿನಿಯರ್) ಅಧಿಕಾರಿಯಾಗಿದ್ದರು. ಪೂನಾದ ಚರಂಡಿ ವ್ಯವಸ್ಥೆ, ಇವುಗಳನ್ನು ದುರಸ್ತಿ ಮಾಡಿಸಿ, ಮಾದರಿಯಾಗಿ ಮಾಡಿದರು. ಆಗ ಗೋಪಾಲಕೃಷ್ಣ ಗೋಖಲೆ ಮುನಿಸಿಪಲ್ ಪ್ರೆಸಿಡೇಂಟ್ ಫೀಫಿ ಎಂಬ ಕಾಲುವೆ / ಸರೋವರವನ್ನು ವಿಸ್ತರಿಸಿ ಪುಣೆಯ ಜನರಿಗೆ ಹೆಚ್ಚಿನ ನೀರನ್ನು ಒದಗಿಸಿದರು. ಪೂನಾ ಆಸುಪಾಸು ಇತರರಂತೆ ಪ್ರದೇಶಗಳಿಗೆ ನೀರಿನ ಸೌಕರ್ಯವನ್ನೂ ಇದಕ್ಕೆ ಭೊಟಗರ್ಾ ಕಾಲುವೆಯ ಉಪಯೋಗ ಪಡೆದು, ನೀರಿನ ವಿಸ್ತರಣೆಯಿಂದ ಜನರನ್ನು ಬೇರ್ಪಡಿಸುವಿಕೆಯ ಯೋಜನೆಯನ್ನು ಕೈಗೊಂಡಿದ್ದರು. ಸರ್ ಎಮ್. ವಿಶ್ವೇಶ್ವರಯ್ಯನವರು ಲಕ್ಕಡಿಪೂಲ್ ಉದ್ಘಾಟನೆಯ ದಿನ ಎಮ್. ಆರ್. ವರದರಾಜನ್‌ರವರನ್ನು ಮನತುಂಬಿ ಹೊಗಳಿರುವುದನ್ನು ನೋಡಬಹುದು.

ಮೈಸೂರಿನಿಂದ ಬಂದ ಹಲವರು ಇಂಜಿನಿಯರ್‌ಗಳು ಮುಂಬೈಗೆ ಬಂದು, ಉನ್ನತ ಅಧಿಕಾರದಲ್ಲಿದ್ದು, ಮುಂಬೈನ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇದರಲ್ಲಿ ಆರ್.ಡಿ.ಚಾರ್ ಅಗ್ರಗಣ್ಯರು. ಬಿ.ವಿ.ಎಸ್. ಐಯಂಗಾರ್, ಎನ್.ಎನ್ನೈಯಂಗಾರ್, ವಿ.ಎಸ್.ಚಾರ್ ಪ್ರಮುಖರಾಗಿ ಕಂಡುಬರುವವರು. ಇವರೆಲ್ಲಾ ಕನ್ನಡದ ಬೆಳವಣಿಗೆಗೆ ಸಾಕಷ್ಟು ಶ್ರಮಿಸಿದವರು. ಇದಕ್ಕೆ ಸಾಕ್ಷಿಯಾಗಿರುವ ವಡಾಲಾದಲ್ಲಿರುವ ನ್ಯಾಷನಲ್ ಕನ್ನಡ ಯಜುಕೇಶನ್ ಸಂಸ್ಥೆ ಬೃಹತ್ತರವಾಗಿ ಬೆಳೆದು ಹಲವಾರು ವಿದ್ಯಾರ್ಥಿಗಳ ಜೀವನವನ್ನು ರೂಪಿಸಿದೆ. ಇದರ ರೂವಾರಿ ಬಿ. ವಿ. ಎಸ್. ಐಯ್ಯಂಗಾರ್, ಮೈಸೂರಿನವರಿಗೆ ಒಂದು ತಾಣವನ್ನು ಕಲ್ಪಿಸಿ ಮುಂಬಯಿನ ಚೆಂಬೂರಿನಲ್ಲಿರುವ "ಮೈಸೂರು ಕಾಲೊನಿ" ವಸತಿ ಸಂಕೀರ್ಣದಲ್ಲಿ ಮಾದರಿಯಾಗಿದೆ. ಹಲವಾರು ಕುಟುಂಬಗಳು ತಮ್ಮದೇ ಆದ ಪುಟ್ಟ ಮನೆ, ಕೈದೋಟ ಹೊಂದಿದ್ದಾರೆ.

ಇನ್ನು ಪತ್ರಿಕಾ ಪ್ರಪಂಚದಲ್ಲಿ ಸಾಕಷ್ಟು ಹೆಸರು ಮಾಡಿ ಕನ್ನಡವನ್ನು ಉಳಿಸಲು ಅತ್ಯಂತ ಶ್ರಮಪಟ್ಟವರು ಆರ್.ವಿ.ಮೂರ್ತಿ. ಹಿಂದೂಸ್ತಾನ್ ಟೈಮ್ಸ್ ಭಾರತ್ ಜ್ಯೋತಿ, ಕಾಮರ್ಸ್‌ನಂಥ ಪತ್ರಿಕೆಗೆ ಸಂಪಾದಕರು ಮತ್ತು ಪ್ರೆಸ್ ಗಿಲ್ಡ್ ಆಫ್

ಇಂಡೀಯಾ ಚೇರ್‌ಮನ್ ಆಗಿದ್ದವರು. ಸಾಂಸ್ಕೃತಿಕ ವಲಯದಲ್ಲಂತೂ ಮುಂಬೈನಲ್ಲಿ ಇವರ ಹೆಸರು ಚಿರಪರಿಚಿತ. ಸರಳ ಸಜ್ಜನಿಕೆಗೆ ಹೆಸರಾದವ್ರು. ಮುಂಬೈನ ಯಾವುದೇ ಕನ್ನಡ ಸಂಘಗಳಲಿ ಮೂರ್ತಿಗಳು ಸದಾ ಹಾಜರು. ಇವರೊಂದಿಗೆ ಗುರುತಿಸಿಕೊಳ್ಳುವ ಭಾಗ್ಯ ಈ ಲೇಖಕಿಗೆ ಹಲವಾರು ಬಾರಿ ಸಂದಿವೆ.

ಮುಂಬಯಿನ ಪ್ರಸಿದ್ಧ ವಕೀಲರಾದ ಬಿ. ನಾರಾಯಣ ಸ್ವಾಮಿಗಳು, ಸಾಂಸ್ಕೃತಿಕ ಸಾಮಾಜಿಕ ದಾರ್ಮಿಕ ಯಾವುದೇ ಸಂಸ್ಥೆಯಲ್ಲಿ ಎತ್ತಿದ ಕೈ. ಹಲವಾರು ಸಂಸ್ಥೆಗಳನ್ನು ಕಟ್ಟಿ ಬೆಳೆಸಿದವರು ಇವರು ಗುರುತಿಸಿಕೊಂಡ ಸಂಸ್ಥೆಗಳು, ನ್ಯಾಷನಲ್ ಕನ್ನಡ ಎಜುಕೇಷನ್ ಸೊಸೈಟಿ, ಮಾಟುಂಗದಲ್ಲಿರುವ ಶಂಕರ ಮಠ, ಸಯನ್‌ನಲ್ಲಿರುವ ಸೌತ್ ಇಂಡಿಯನ್ ಎಜುಕೇಷನ್ ಸೊಸೈಟಿ, ಶಾರದಾ ಪೀಠ ಮತು ಸಂಸ್ಕೃತಿಗೆ ಮಾನ್ಯವಾಗಿರುವ ಷಣ್ಮುಖಾನಂದ ಹಾಲ್. ಇವರ ಪುತ್ರ ಮುಂಬೈಯ ಪ್ರತಿಷ್ಠಿತ ವಲಯದಲ್ಲಿರುವ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಸಾಂಸ್ಕೃತಿಕ ವಲಯದಲ್ಲಿ ಸಾಕಷ್ಟು ಸೇವೆ ಸಲ್ಲಿಸಿರುವರು. ಫೋಟೋಗ್ರಾಫಿಕ್ ಆರ್ಟ್‌ನಲ್ಲಿ ಅತ್ಯಂತ ಶ್ರೇಷ್ಠತೆಯನ್ನು ಪಡೆದು, ಹಲವಾರು ಪ್ರಶಸ್ತಿಗಳನ್ನು ವಿ.ಕೆ.ಮೂರ್ತಿ ಪಡೆದಿದ್ದಾರೆ. ಮತ್ತು ಮೈಸೂರಿನ ಘನತೆಯನ್ನು ಎತರಕ್ಕೆ ಏರಿಸಿದ ಮತ್ತು ಸಾಂಸ್ಕೃತಿಕ ವಲಯದಲ್ಲಿ ಮೈಸೂರು ಅಸೋಸಿಯೇಷನ್ ಎದ್ದು ಕಾಣುವಂತೆ ಮಾಡಿದ ಡಾ। ಮಂಜುನಾಥ್ ಮತ್ತು ಮಂಜುನಾಥಯ್ಯ ಇವರೆಲ್ಲಾ ಮೈಸೂರು ಅಸೋಸಿಯೇಷನ್ ಕಟ್ಟಿ ಬೆಳೆಸಿದವರು.

**ಮೈಸೂರು ಅಸೋಸಿಯೇಷನ್ 1926**

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಮುಂಬಯಿ ವಿಶ್ವವಿದ್ಯಾನಿಲಯ ಹಲವಾರು ವಿದ್ಯಾರ್ಥಿಗಳನ್ನು ರೂಪಿಸಿತು. ಮುಂಬೈ ಆಗ ಬಾಂಬೆ ಪ್ರೆಸಿಡೆನ್ಸಿ ಎಂದು ಕರೆಯಲ್ಪಟ್ಟು ಉತ್ತರ, ದಕ್ಷಿಣ ಕರ್ನಾಟಕದಿಂದ ಹಲವಾರು ವಿದ್ಯಾರ್ಥಿಗಳು ಇಂಜಿನಿಯರಿಂಗ್ ಮತ್ತು ವಕೀಲ ವೃತ್ತಿ (Law) ಅಭ್ಯಾಸ ಮಾಡಲು ಪುಣೆ ಮತ್ತು ಮುಂಬೈಗೆ ಬರುತ್ತಿದ್ದರು. ಮೊದಲನೆ ಜಾಗತಿಕ ಯುದ್ಧದ ಪರಿಣಾಮವಾಅಗಿ, ತಾಂತ್ರಿಕ ತರಬೇತಿ ಇವುಗಳಲ್ಲಿ ಪರಿಣಿತಿ ಪಡೆದವರಿಗೆ ಅಪಾರ ಬೇಡಿಕೆ ಇದ್ದು, ಇದರಲ್ಲಿ ಇಂಜಿನಿಯರಿಂಗ್ ಮುಖ್ಯ ಪಾತ್ರ ವಹಿಸಿತ್ತು. ಮೂಂಬೈನಲ್ಲಿದ್ದ ಗಿರಣಿ ಕಾರ್ಖಾನೆಗಳಲ್ಲಿ ಕೂಡ ಕೆಲಸಕ್ಕೆ ಬೇಡಿಕೆ ಇತ್ತು (1900–1960) ಮುಂಬೈಗೆ ಬಂದ ಯುವಕರು ಸುಸಂಸ್ಕೃತರು ಮತ್ತು ವಿದ್ಯಾವಂತರು ಅದಲ್ಲದೆ ಇವರಲ್ಲಿ ಸ್ವಾಭಿಮಾನ ಮತ್ತು ಸ್ವತಂತ್ರ ವಿಚಾರಸರಣಿ ಮೂಡಿದ್ದವು ಮತ್ತು ವಿಜ್ಞಾನದಲ್ಲಿ ತರಬೇತು ಹೊಂಡಿದ ಯುವಕರಲ್ಲಿ ತಮ್ಮ ನಾಡಿನ ಬಗ್ಗೆ ಅಭಿಮಾನ ಮತ್ತು ತನ್ನತನವನ್ನು ಉಳಿಸಿಕೊಳ್ಳುವ ಹಂಬಲವಿತ್ತು. ಇದಲ್ಲದೆ ಆಂಗ್ಲ ವಿದ್ಯಾಭ್ಯಾಸ ಮಾಡಿದ ಯುವಕರು ಹೊಸ ಪೀಳಿಗೆಯವರು. ಇವರಿಗೆ ಕಲಿಸಿದ ಗುರುಗಳು ಇಂಗ್ಲೀಷ್ ಭಾಷೆಯ ಮೇಲೆ ಹಿಡಿತ ಮತ್ತು ಕನ್ನಡದ ಮೇಲೆ ಸ್ವಾಭಿಮಾನ ಇವುಗಳನ್ನು ಇರಿಸಿಕೊಂಡವರು. ಮೈಸೂರು ವಿಶ್ವವಿದ್ಯಾನಿಲಯ (1916) ಮಹಾರಾಜ ಕಾಲೇಜು, (ಮೈಸೂರು) ಸೆಂಟ್ರಲ್ ಕಾಲೇಜು (ಬೆಂಗಳೂರು) ಹಲವಾರು ವಿದ್ಯಾರ್ಥಿಗಳ ತರಬೇತಿ ಕೇಂದ್ರವಾಗಿತ್ತು. ಅಲ್ಲಿದ್ದ ಪ್ರಾಧ್ಯಾಪಕರು ಬಿ.ಎಂ.ಶ್ರೀಕಂತಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯನಂಥ ಮೇಧಾವಿಗಳು ಬಿ.ಎಂ.ಶ್ರೀಕಂಠ್ಯಯ್ಯನವರಿಂದ ಪ್ರಭಾವಿತರಾದ ಶಿಷ್ಯವರ್ಗ ಯುವಪೀಳಿಗೆ ಮುಂಬೈನಲ್ಲಿ ಉದ್ಯೋಗ ಹೊಂದಿದರೂ ತಮ್ಮ ವ್ಯಕ್ತಿ ಮತ್ತು ಕನ್ನಡದ ಏಳ್ಗೆಗೆ ಶ್ರಮಿಸಿದ್ದರೆ ಆಶ್ಚರ್ಯವಿಲ್ಲ. ಇವರಲ್ಲಿ ಹಲವರು ಆಗ ಬೆಂಗಳೂರಿನಲ್ಲಿ ಆರಂಭವಾಗಿದ್ದ ಅಮೆಚೂರ್ ಡ್ರಮಾಟಿಕ್ ಸೊಸೈಟಿ ಅಸೋಸಿಯೇಷನಿಂದ ಪ್ರಭಾವಿತರಾದವರು. ಇದಕ್ಕೆ ದಿವಾನ್ ಮಾಧವರಾವ್ ಪೋಷಕರು. (ರಂಗಮಂಟಪ ತನ್ನ ಕಟ್ಟಡ ಹೊಂದಿ ಬೆಂಗಳೂರು, ರವೀಂದ್ರ ಕಲಾಕ್ಷೇತ್ರದ ಎದುರಿಗಿದೆ) ಸಿನಿಮಾ ಆಗಿನ್ನೂ ಹೆಜ್ಜೆ ಹಾಕಿರಲಿಲ್ಲ. ನಾಟಕ, ಸಂಗೀತ ಮಾತ್ರ ಜನರ ಮನರಂಜನೆಯಾಗಿತ್ತು ಮತ್ತು ಮಧ್ಯಮ ವರ್ಗದವರಲ್ಲಿ ನಾಟಕ ಹೆಚ್ಚಿನ ಪ್ರಭಾವ ಬೀರಿತ್ತು.

**ಉದಯ:** ಮೈಸೂರು ಅಸೋಸಿಯೇಷನ್ ಉದಯವಾದದ್ದು (1925) ಮುಂಬಯಿಯ ಗಿರಿಗಾಮ್‌ನ ಒಂದು ಚಿಕ್ಕ ಕೊಠಡಿಯಲ್ಲಿ ಒಂದು ಭಾನುವಾರ ಸಂಜೆ ಐದು ಜನ ವೃತ್ತಿನಿರತರು ಮೈಸೂರಿನವರು; ಕೃಷ್ಣಪ್ಪ, ಹೆಚ್. ಐಯಂಗಾರ್, ಚಿದಂಬರರಾವ್, ಎಮ್.ಎಸ್.ನಾರಾಯಣ ರಾವ್ ಮತ್ತು ಬಿ. ಎನ್. ಐಯಂಗಾರ್ ಮುಂಬೈ ಗಿರಿಗಾವ್‌ನಲ್ಲಿ ಸೇರಿ ಪ್ರತಿ ಭಾನುವಾರ ತಾವೂ ಕೂಡಬೇಕೆಂದೂ, ಇದರಿಂದ ಮನಸ್ಸು ವಿಕಾಸ ಹೊಂದುವುದೆಂದೂ ಮತ್ತು ಮಹಾನಗರಿಯಲ್ಲಿ ಒಬ್ಬರನ್ನೊನ್ನರು ಅರಿಯಲು ಸಹಾಯವಾಗುವುದೆಂದೂ ಮತ್ತು ಇದು ಒಂದು ಸಾರ್ವಜನಿಕ ವೇದಿಕೆಗೆ ಅಸ್ಥಿಭಾರವೆಂದೂ ಪ್ರಾರಂಭಿಸಿದರು. ಆದರೆ ಕಾಲಕ್ರಮೇಣ ಸದಸ್ಯರ ಸಂಖ್ಯೆ ಸಾಕಷ್ಟು ಹೆಚ್ಚಿನ ಗಿರಿಗಾಮ್‌ನಲ್ಲಿ ಜಾಗ ಸಾಕಾಗದೆ ಮಾಟುಂಗಾದಲ್ಲಿರುವ ನೆಪ್ಪು ಗಾರ್ಡನ್ ಬಳಿ ಇರುವ ವಲಜಿಬಾಯಿ ಹಾಲಿನಲ್ಲಿ ಬಾಡಿಗೆಗೆ ತೆಗೆದುಕೊಂಡು ತಮ್ಮ ಅ ಚಟುವಟಿಕೆಯನ್ನು ಮುಂದುವರಿಸಿದರು. ಇದಕ್ಕೆಲ್ಲಾ ಒಬ್ಬ ಮುಖ್ಯಸ್ಥ ಮತ್ತು ಜವಾಬ್ದಾರಿ ಹೊರುವ ವ್ಯಕ್ತಿ ಬೇಕೆಂದು ಮನಗಂಡು ಆಗ ಮುಂಬೈನಲ್ಲಿ ಹೆಸರು ಮಾಡಿದ್ದ ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರಲ್ಲಿ ತಮ್ಮ ಆನಿಸಿಕೆಯನ್ನು ಮುಂದಿಟ್ಟರು. ದಿವಾನ ಬಹದ್ದೂರ್ ಕೆ.ರಾಮಸ್ವಾಮಿಯವರು ತಮ್ಮ ಒಪ್ಪಿಗೆಯನ್ನು ತಕ್ಷಣ ಕೊಟ್ಟರು. ಮೈಸೂರು ಅಸೋಸಿಯೇಷನ್ ಉದಯವಾದದ್ದು (ಈಜಫ 26,1926) ವಿದ್ಯುಕ್ತವಾಗಿ ಪ್ರೊ. ಎನ್. ಎಸ್. ಸುಬ್ಬರಾಯರಿಂದ (ಆಗ ಎನ್.ಎಸ್.ಸುಬ್ಬರಾಯರು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಿಲರ್ ಆಗಿದ್ದರು) ಎಚಿಟಿ 9, 1927 ಆರಂಭಿಸಲ್ಪಟ್ಟಿತು. 1960 ಸೊಸೈಟಿ ರಿಜಿಸ್ಟ್ರೇಷನ್ ಆಯಿತು. ಕ.ರಾಮಸ್ವಾಮಿಗಳು ಪ್ರೆಸಿಡೆಂಟರಾಗಿಯೂ, ಚಂದ್ರಶೇಖರ ಶರ್ಮ ಮೊದಲ್ನೆ ಸೆಕ್ರೆಟರಿಯಾಗಿ ಕಾರ್ಯಸ್ತರಾದರು.

ಚಂದ್ರಶೇಖರ ಶರ್ಮ ಸ್ವತಃ ಬರಹಗಾರರು. ಇವರು ನವೋದಯ ಸಾಹಿತ್ಯದಿಂದ ಪ್ರಭಾವಿತರಾದರು. ಇವರು (19270 ಪ್ರಬೋಧ ಎಂಬ ಮಾಸಪತ್ರಿಕೆ ನಡೆಸುತ್ತಿದ್ದರು. ಆದರೆ ಈ ಪತ್ರಿಕೆ ಹೆಚ್ಚುಕಾಲ ನಡೆಯದೆ ಮೂರು ವರ್ಷಕ್ಕೆ ನಿಂತಿತು.

ಯಾವುದೇ ಒಂದು ಸಂಸ್ಥೆಗೆ ಅದರ ಧ್ಯೇಯ ಧೋರಣೆಗಳು ಬಲು ಮುಖ್ಯ ಮತ್ತು ಅದನ್ನು ಸಾಧಿಸಲು ಸಮಾಜದ ಸಹಕಾರ ಬಹು ಮುಖ್ಯ. ಸಾಂಸ್ಕೃತಿಕ ಸಂಸ್ಥೆಯಾದ್ದರಿಂದ ಮುಂಬೈ ಕನ್ನಡಿಗರ ಬೆಳವಣಿಗೆ, ಕಲಾಪ್ರತಿಭೆ ಉಳ್ಳ ಮಕ್ಕಳ ಪೋಷಣೆ, ವ್ಯಾಯಾಮ ಕ್ರೀಡಾಭಿಮಾನ ಇವುಗಳ ಉತ್ತೇಜನ ಮತ್ತು ಕನ್ನಡ ಭಾಷೆ ಉಳಿಯಬೇಕಾದರೆ, ಅದಕ್ಕ್ಕೆ ಕೈಗೊಳ್ಳಬೇಕಾದ ಕ್ರಮ ಮತ್ತು ಕನ್ನಡ ಮಕ್ಕಳಿಗೆ ಕಲಿಸುವುದಕ್ಕೆ ಒಂದು ಸ್ಕೂಲ್ ಮತ್ತು ಗ್ರಂಥ ಭಂಡಾರದ ಅವಶ್ಯಕತೆ ಮತ್ತು ವಿಶೇಷ ಉಪನ್ಯಾಸದ ಮೂಲಕ ಜನರ ಮನಸ್ಸಿನ ವಿಕಾಸಕ್ಕೆ ಮತ್ತು ವೈದ್ಯಕೀಯ ಸೌಲಭ್ಯ ಇವು ಸಂಘದ ಧೋರಣೆಯಾಯಿತು. ಇದೆಲ್ಲದರಲ್ಲೂ ಅಸೋಸಿಯೇಷನ್ ಸಾಕಷ್ಟು ಸಫಲತೆ ಪಡೆದಿದೆ ಎನ್ನಬಹುದು.

ವೆಲ್‌ಜಿಭಾಯ್ ಬಿಲ್ಡಿಂಗ್, ನೆಪ್ಪೂ ಹಾಲ್, ಮಾಟುಂಗಾದಲ್ಲಿ ಬಾಡಿಗೆಗೆ ತೆಗೆದುಕೊಂಡು ನಡೆಸುತ್ತಿದ್ದ ಅಸೋಸಿ ಯೇಷನ್‌ಗೆ ತನ್ನ ಸ್ವಂತ ಕಟ್ಟಡದ ಅವಶ್ಯತೆ ಕಂಡುಬಂದು ಇದು ಸಾಕಾರವಾದದ್ದು (1932) ಬಹುದಾಜಿ ರೋಡ್, ಮಾಟುಂಗಾ, ಆಗ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದ ಎಮ್. ಎ. ಎನ್. ಐಯಂಗಾರ್, ಮುಂಬೈ ಕಾರ್ಪೋರೇಷನ್‌ನಲ್ಲಿ ಅಧಿಕಾರಿ ಯಾಗಿದ್ದರು. ಬಾಂಬೆ ಮುನಿಸಿಪಲ್ ಕಾರ್ಪೋರೇಷನ್ ಲೀಸ್ ಮೇಲೆ ಜಾಗ ಕೊಟ್ಟಿತ್ತು. ಕಟ್ಟಡದ ಅಸ್ಥಿಭಾರವನ್ನು ಹಾಕಿದವರು ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ. ಇದಕ್ಕೆ ಹಸ್ತಸಹಾಯ ಮಾಡಿದವರು ಬಿ. ವಿ. ಎಸ್. ಐಯಂಗಾರ್, ಪಿ. ಶೇಷನ್, ಸಿ.ಎನ್.ಗುರುಡಾಚಾರ್ ಮತ್ತು ಎಲ್ಲಾ ಸದಸ್ಯರು ಕೊಟ್ಟಂತಹ ಸಹಕಾರ ಇವುಗಳಿಂದ, ವಾಣಿವಿಲಾಸ ಮೆಮೋರಿಯಲ್ ಹಾಲ್ (1934) ತನ್ನದೇ ಆದ ಒಂದು ಪುಟ್ಟ ವರಾಂಡ ಮತ್ತು ಅಡಿಗೆ ಶಾಲೆ (Mess) ಇಷ್ಟನ್ನು ಕಟ್ಟಿತು. 1940ರಲ್ಲಿ ಸದಸ್ಯರು ಹೆಚ್ಚಿದ್ದರಿಂದ ಕಟ್ಟಡಕ್ಕೆ ಮೊದಲನೆ ಮಹಡಿ ಹಾಕಲಾಯ್ತು. ಇದಕ್ಕೆ ಹೆಚ್ಚು ಶ್ರಮ ವಹಿಸಿದವರು ಬಿ.ವಿ. ಎಸ್. ಐಯಂಗಾರ್ ಮತ್ತು ಪೂರ್ಣ ಜವಾಬ್ದಾರಿ ವಹಿಸಿದ್ದರು. ಸಂಘ ಬೆಳೆದು ಹಲವಾರು ಚಟುವಟಿಕೆ ಹಮ್ಮಿಕೊಂಡಿದ್ದರಿಂದ ಮೊದಲನೆ ಮಹಡಿ ಅಸ್ಥಿಭಾರವನ್ನು ಎನ್.ಎನ್. ಐಯಂಗಾರ್ ಹಾಕಿದರು. ಆಗ ಸದಸ್ಯರೆಲ್ಲರ ಸಹಕಾರ ದೊರಕಿತು.

ಮುಂಬೈಗೆ ಬಂದ ಹಲವಾರು ಯುವಕರಿಗೆ ತಮ್ಮ ಊರು ಬಿಟ್ಟು ಬಂದು ಮನೆಯ ಊಟದ ರುಚಿ ಇನ್ನೂ ಹೋಗಿರಲಿಲ್ಲ. ಹೀಗಾಗಿ ಆರಂಭವಾಯಿತು ಭೋಜನಶಾಲೆ. ಭೋಜನಶಾಲೆಯ ಊಟ ಅತ್ಯತ್ತಮವಾಗಿದ್ದು, ಇದರ ಸವಿಯೂಟ ಎಷ್ಟೋ ಬಾರಿ ಸವಿಯುವ ಅವಕಾಶ ಸಿಕ್ಕಿದೆ. ಊಟ, ಓದು, ಆಟ–ಮೂರೂ ಬೆಳವಣಿಗೆಗೆ ಅವಶ್ಯಕ. ಇದನ್ನು ಗಮನಿಸಿದ ಪ್ರೆಸಿಡೆಂಟರಾದ ಎನ್.ಎನ್.ಐಯಂಗಾರ್ ಹಲವಾರು ಪುಸ್ತಕಗಳು, ಕಪಾಟು ಸಮೇತ ದತ್ತಿಯಾಗಿ ಕೊಟ್ಟು, ಗ್ರಂಥ ಭಂಡಾರವನ್ನು ಆರಂಭಿಸಿದರು. ಇದರಿಂದ ಸದಸ್ಯರು ತಮ್ಮ ಸಮಯವನ್ನು ಹೆಚ್ಚು ಕಾಲ ಅಸೋಸಿಯೇಷನ್‌ನಲ್ಲಿ ಕಳೆಯುವಂತಾಯಿತು. ನಾನಜ ದೇವಸಹೆ

ಎಂಬುವರು ಒಂದು Billiard Table ಕೊಟ್ಟರು. ಮುಂದೆ ಅಸೋಸಿಯೇಷನ್ ಟೀಮು Billiard ನಲ್ಲಿ ಅತ್ಯಂತ ಯಶಸ್ವಿಯಾಗಿ ಹಲವರು ಪ್ರಶಸ್ತಿಗಳನ್ನು ಸದಸ್ಯರು ಗಳಿಸಿದರು.

ಅಸೋಸಿಯೇಷನ್ ಸದಸ್ಯರಿಗೆ ತಮ್ಮದೇ ಆದ ತಾಣ ಮತ್ತು ಚಟುವಟಿಕೆಗೊಂಡು ಮಾರ್ಗ ದೊರೆತಂತಾಯಿತು. ಪ್ರತಿದಿನ ಸಂಜೆ ಸದಸ್ಯರು ಕುಟುಂಬದೊಡನೆ ವ್ಯವಹಾರ, ವಿಚಾರ ವಿನಿಮಯಕ್ಕೆ ಜಾಗ ದೊರಕಿತು. ಪ್ರತಿ ತಿಂಗಳು ನಾಟಕ, ವಿಶೇಷ ದಿನಗಳಲಿ ಗಣಪತಿ ಹಬ್ಬ, ರಾಮನವಮಿ, ದೀಪಾವಳಿ ಸದಸ್ಯರು ಆಚರಿಸುತ್ತಿದ್ದರು. ಕರ್ನಾಟಕ ಸಂಗೀತ ತರಗತಿಯನ್ನು ಆರಂಭಿಸಿತು. ಅದಲ್ಲದೆ ಮಾಹುಲಿ ಗೋಪಾಲಾಚಾರ್ಯರ ಪ್ರವಚನ ಪಾಠಗಳು ನಡೆಯುತ್ತಿದ್ದವು. ಮಾಹುಲಿ ಗೋಪಾಲಾಚಾರ್ಯರ ಬಗ್ಗೆ ಎರಡು ಮಾತು ಖಂಡಿತಾ ಹೇಳಬೇಕು. 1909ರಲ್ಲಿ ಹುಟ್ಟಿದ ಪಂಡಿತರತ್ನ ಪಂಡಿತರಾಜ ಮಾಹುಲಿ ಗೋಪಾಲಾಚಾರ್ಯರು ಬದುಕಿದ್ದರೆ ಈಗ ನಾವು ಅವರ ಶತಮಾನೋತ್ಸವವನ್ನು ಆಚರಿಸಬಹುದಿತ್ತು. ಪಾಶ್ಚಾತ್ಯ, ಪೌರ್ವಾತ್ಯ ಎರಡೂ ವಿದ್ಯೆಯಲ್ಲಿ ಪರಿಣಿತಿ ಹೊಂದಿದ ಆಚಾರ್ಯರು, ಎಮ್.ಎ. ಮುಗಿಸಿ ಮುಂಬೈಗೆ ಬಂದು ತಮ್ಮ ಅಸಾಧಾರಣ ಪಾಂಡಿತ್ಯದಿಂದ ಮಾರ್ಗದರ್ಶಿಯಾದರು. ಆಚಾರ್ಯರಿಗೆ ತಾವು ಒಂದು ವಿದ್ಯಾಪೀಠ ಸ್ಥಾಪಿಸಬೇಕು ಮತ್ತು ಊಟ, ವಸತಿ, ಪಡೆದು ಮಕ್ಕಳು ಉತ್ತಮ ವಿದ್ಯೆ ಹೊಂದಿ ಸತ್ಪ್ರಜೆಗಳಾಗಬೇಕು ಮತ್ತು ತಾವು ಕಲಿತ ವಿದ್ಯೆಯನ್ನು ಮಕ್ಕಲಿಗೆ ಕಲಿಸಬೇಕು ಇದರ ಹಂಬಲದಿಂದ 1937 ರಲ್ಲಿ ಮಾಟುಂಗಾದಲ್ಲಿ ಒಂದುಚಿಕ್ಕ ಕೋಣೇಯಲ್ಲಿ ಪಾಠ, ಪ್ರವಚನ, ಆರಂಭಿಸಿದರು. ಆಗ ಅವರ ಹತ್ತಿರ್ ಐದ್ದುದು ಕೇವಲ 7 ರೂಪಾಯಿ. ಆದರೆ ಧೈರ್ಯ, ಸಾಹಸ ಅಪಾರವಾಗಿತ್ತು. ಮಾಟುಂಗಾದಲ್ಲಿರುವ ಆಚಾರ್ಯರು ಸ್ಥಾಪಿಸಿದ ವಿದ್ಯಾಸಂಸ್ಥೆ ಮುಲುಂಡ್‌ನಲ್ಲಿದೆ. ಪಾಶ್ಚಾತ್ಯ, ಪೌರಾತ್ಯ, ಸಾಹಿತ್ಯ, ವಿಜ್ಞಾನ, ಅಸಾಧಾರಣ ಪುಸ್ತಕಗಳ ಸಂಗ್ರಹವನ್ನು ಅವರ ಗ್ರಂಥ ಭಂಡಾರದಲ್ಲಿ ನೋಡಬಹುದು. ವಾಣಿವಿಹಾರ ವಿದ್ಯಾಲಯ ಮಕ್ಕಳಿಗೆ ಲೌಕಿಕ ಮತು ವೈದಿಕ ವಿದ್ಯೆಯನ್ನು ಕಲಿಸಿಕೊಡುತ್ತದೆ. ಇವರ ಶ್ರಮದಿಂದ ಬೆಳೆದಿರುವ ಗ್ರಂಥ ಭಂಡಾರ ಒಬ್ಬರ ನೈತಿಕ ಶ್ರಮದಿಂದ ಉಂಟಾದದ್ದು ಎಂಬುದು ಆಶ್ಚರ್ಯಕರವಾದ ಸಂಗತಿ. ಮಾಹುಲಿ ಗೋಪಾಲಾಚಾರ್ಯರ ನಿಧನದ ನಂತರ (1984) ಮಾಹುಲಿಯವರ ಮಗ ವಿದ್ಯಾಸಿಂಹಾಚಾರ್ ವಾಣಿವಿಹಾರ ವಿದ್ಯಾಲಯ ಕುಲಪತಿಯಾಗಿ ಅತ್ಯಂತ ಸಮರ್ಪಕವಾಗಿ ನಡೆಸುತ್ತಿದ್ದಾರೆ. ಇವರು ಮೈಸೂರು ಅಸೋಸಿಯೇಷನ್ ಹಿತೈಷಿಗಳು ಮತ್ತು ಬೆಳವಣಿಗೆಗೆ ಕಾರಣರು.

1937 ಮೈಸೂರು ಅಸೋಸಿಯೇಷನ್ ಮತ್ತು ಕರ್ನಾಟಕ ಸಂಘ ಕೂಡಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರುಗಿಸ್ಸಿದ್ದು ಅಸೋಸಿಯೇಷನ್ ಇತಿಹಾಸದಲ್ಲಿ ಮೈಲಿಗಲ್ಲು ಹಿರಿಯ ತಲೆಮಾರಿನವರು ಈಗಲೂ ನೆನಪಿಸುತ್ತಾರೆ.

ಮುಂಬೈನಿಂದ ಬಂದ ಅನಿವಾಸಿಗಳಿಗೆ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಕೂಲಿನ ಅವಶ್ಯಕತೆ ಇತ್ತು. ಶಾಲೆ 1927 ರಲ್ಲಿ ಒಂದು ಚಿಕ್ಕ ರೂಮಿನಲ್ಲಿ ಆರಂಭಿಸಿದ್ದರೂ ಅದು ಹೆಚ್ಚುಕಾಲ ನಡೆಯದೆ 1939 ರಲ್ಲಿ ಅಸೋಸಿಯೇಷನ್‌ನಲ್ಲಿ ಆರಂಭಿಸಿತು. ಹೀಗೆ ಶುರುವಾದ ಸ್ಕೂಲಿಗೆ ಸದಸ್ಯರ ಮಕ್ಕಳುಗಳೆಲ್ಲಾ ವಿದ್ಯಾರ್ಥಿಗಳು. 1948ರ ತನಕ ಸ್ಕೂಲ್ ಬಹುದಾಜಿ ರೋಡಿನಲ್ಲಿತ್ತು, 1948ರಲ್ಲಿ ಸಯಾನಿಗೆ ವಿಸ್ತರಿಸಲಾಯಿತು. ಮಕ್ಕಳ ಸಂಖ್ಯೆ ಹೆಚ್ಚಾಗಿ ಒಂದು ಸ್ಥಿರವಾದ ಕಟ್ಟಡಕ್ಕೆ ಜಾಗ ದೊರಕಿದ್ದು (1958) ಇದರ ಜವಾಬ್ದಾರಿಯನ್ನು ಹೊತ್ತವರು ಆರ್.ಡಿ.ಚಾರ್, ಆರ್. ವಿ. ಮೂರ್ತಿ ಮತ್ತು ಬಿ. ನಾರಾಯಣ ಸ್ವಾಮಿ ಮತ್ತು ಮಾಹುಲಿ ಗೋಪಾಲಾಚಾರ್ಯರು ಇವರನ್ನು ಮುಖ್ಯವಾಗಿ ಸ್ಮರಿಸಬೇಕು.

ವಡಾಲದಲ್ಲಿರುವ ನ್ಯಾಷನಲ್ ಎಜುಕೇಷನ್ ಸೊಸೈಟಿ ಭವ್ಯ ಕಟ್ಟಡ ನಮ್ಮ ಹಿರಿಯರ ಪ್ರೀತಿಯ ಸಂಕೇತವಾಗಿದೆ. ಇದರಲ್ಲಿ ಮಹಿಳೆಯರ ಪಾತ್ರವನ್ನು ಮರೆಯಲಾಗದು. ಶ್ರೀಮತಿ ವೈದೇಹಿಚಾರ್, ಸರೋಜಮ್ಮ ಮೂರ್ತಿ, ಶ್ಯಾಮಲಾಂಬ ವರದರಾಜನ್, ಶಾರದಾಬಾಯಿ ನಾರಾಯಣ ಸ್ವಾಮಿ, ರತ್ನಾಬಾಯಿ ರಾಘವೇಂದ್ರ ಇವರೆಲ್ಲಾ ಎಲ್ಲರ ಮನೆಗೆ ಬರುವ ವರ್ತಮಾನ ಪತ್ರಿಕೆಗಳನ್ನು ಪ್ರತಿ ತಿಂಗಳೂ ಕೂಡಿಸಿ ಮಾರಿ ತಿಂಗಳಿಗೆ ಬರುವ ಹಣವನ್ನು ಕೂಡಿಸಿ ಸ್ಕೂಲಿಗೆ ವಿದ್ಯೆಯನ್ನು ನೀಡುತ್ತಿದೆ. ಇಲ್ಲಿ ವಿದ್ಯಾಭ್ಯಾಸ ಹೊಂದಿದ ಹಲವಾರು ವಿದ್ಯಾರ್ಥಿಗಳು ದೇಶದ ಉತ್ತಮ ಪ್ರಜೆಗಳಾಗಿ, ಉನ್ನತ ಉದ್ಯೋಗದಲ್ಲಿದ್ದಾರೆ. ಈ ಸ್ಕೂಲಿಗೆ ಬರುವ ವಿದ್ಯಾರ್ಥಿಗಳು ಶ್ರೀಮಂತರಲ್ಲದಿದ್ದರೂ, ಹೃದಯ ಶ್ರೀಮಂತಿಕೆಗೆ ಕಡಿಮೆ ಇಲ್ಲ.

1967 ರಲ್ಲಿ ಮೈಸೂರು ಅಸೋಸಿಯೇಷನ್ ಕಟ್ಟಡವನ್ನು ವಿಸ್ತರಿಸಿ ಒಂದು ರಂಗಮಂಟಪ ಮತ್ತು ಹೊರಗಿನಿಂದ ಬರುವ ಹುಡುಗರು ತಾತ್ಕಾಲಿಕವಾಗಿ ಇಳಿದುಕೊಳ್ಳುವುದಕ್ಕೆ 2–3 ರೂಮು ವ್ಯವಸ್ಥೆ ಮಾಡಿತು. ಎನ್. ಆರ್. ಎನ್. ಐಯ್ಯಂಗಾರ್ ಅಸೋಸಿಯೇಷನ್ ಸೆಕ್ರೆಟರಿಯಾಗಿ ತಮ್ಮ ನಿಸ್ವಾರ್ಥ ಸೇವೆಯಿಂದ, ಸಾಕಷ್ಟು ವರುಷ ಕೆಲಸ ಮಾಡಿದರು.

**ಥಿಯೇಟರ್ ಚಟುವಟಿಕೆ:**

1948 ಜಯಚಾಮರಾಜೇಂದ್ರ ಪಾಲಿಟೆಕ್‌ನಿಕ್‌ನಲ್ಲಿ ತರಬೇತಿ ಹೊಂದಿದ ಹಲವು ಯುವಕರು ಮುಂಬೈಗೆ ಬಂದರು. ಇದರಲ್ಲಿ ಪ್ರಮುಖರಾದವರು ಭಾರತ ಮತ್ತು ಹೊರನಾಡಿನಲ್ಲಿ ಪ್ರಸಿದ್ಧವಾಗಿರುವ ಸಿನಿಮಾ ಛಾಯಾಗ್ರಾಹಕ ವಿ.ಕೆ.ಮೂರ್ತಿ (Cinematographer) ಇವರ ಮತ್ತು ಮೈಸೂರು ಅಸೋಸಿಯೇಷನ್ ಸಂಬಂಧವನ್ನು ಉಮಾರಾವ್ ಮತ್ತು ಬಿಸಿಲುಕೋಲು (ವಿ.ಕೆ.ಮೂರ್ತಿಯವರ ಜೀವನಚರಿತ್ರೆ)ಯಲ್ಲಿ ಸ್ವಾರಸ್ಯವಾಗಿ ಕೊಟ್ಟಿರುತ್ತಾರೆ. ಹೋದ ವರುಷ ವಿ.ಕೆ.ಮೂರ್ತಿ ಅವರಿಗೆ ಫಾಲ್ಕೆ ಪ್ರಶಸ್ತಿ ಬಂದಿದೆ.

ವಿ.ಕೆ.ಮೂರ್ತಿಯವರ ನೇತೃತ್ವದಲ್ಲಿ ಮಹಿಳೆಯರಿಗೂ ಚಾಲನೆ ಬಂತು. ಗಂಡಸರು ಹೆಂಗಸರ ಪಾತ್ರ ಮಾಡುವ ಬದಲು ಹೆಂಗಸರೇ ಪಾತ್ರ ವಹಿಸಿದರು. ಇದಕ್ಕೆ ವಿ.ಕೆ.ಮೂರ್ತಿ (ಕುಟ್ಟಿ) ಅವರೇ ಕಾರಣ. ಮಧುರ ಕೃಷ್ಣಸ್ವಾಮಿ ಮುಂಬೈನಲ್ಲಿದ್ದಾಗ ಮೈಸೂರು ಅಸೋಸಿಯೇಷನ್‌ನ ಸಕ್ರಿಯ ಸದಸ್ಯರಾಗಿದ್ದರು. ಕೃಷ್ಣಸ್ವಾಮಿಯವರು ರಿಸರ್ವ ಬ್ಯಾಂಕ್‌ನ ಅತ್ಯುತ್ತಮ ಹುದ್ದೆಯಲ್ಲಿದ್ದರು. ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಈಗಲೂ ಅಸೋಸಿಯೇಷನ್ ಸಂಪರ್ಕ ಹೊಂದಿದ್ದಾರೆ. ಸುಶೀಲಾ ರಾವ್, ಶಾರದಾ ನಾರಾಯಣಸ್ವಾಮಿ ಇವರುಗಳು ಮುಂದೆ ಬಂದು ಸ್ತ್ರೀಪಾತ್ರವನ್ನು ಅಭಿನಯಿಸಿದರು. ಇದರಿಂದ ಸ್ಫೂರ್ತಿಗೊಂಡ ಹಲವಾರು ಕಿರಿಯರು ಮುಂದೆ ಅಸೋಸಿಯೇಷನ್‌ನಲ್ಲಿ ಭಾಗವಹಿಸಿ, ನಾಟಕ ತಂಡವನ್ನು ನಿರ್ಮಿಸಿದ್ದೇ ಅಲ್ಲದೆ ಇತ್ತೀಚಿನ ಟೆಲಿವಿಷನ್‌ಗಳಲ್ಲಿ ಕೂಡ ಹೆಸರು ಮಾಡಿರುವರು. ಹಲವರನ್ನು ನೆನಪಿಸಿಕೊಳ್ಳುವುದಾದರೆ; ತಂತಿ ದುಗ್ಗಪ್ಪಯ್ಯ, ಗೀತಾ ವಿಶ್ವನಾಥ್ ಹಲವಾರು ನಾಟಕ ತಾವೇ ಬರೆದು ದಿಗ್ದರ್ಶಿಸಿರುವರು. ಅದೂ ಅಲ್ಲದೆ ಭರತನಾಟ್ಯ ಪ್ರವೀಣೆ ಗೀತಾ ವಿಶ್ವನಾಥ್ ಹಲವಾರು ಬ್ಯಾಲೆಗಳಿಗೆ ಕೋರಿಯಾಗ್ರಫಿ ಬರೆದಿರುವರು. ಬರಹಗಾರ್ತಿ ಕೂಡ. ಉಮಾ ರಾವ್ ಹಲವಾರು ಪುಸ್ತಕ ಬರೆದಿದ್ದಾರೆ ಮತ್ತು ಹಲವಾರು ಪ್ರಶಸ್ತಿ ಸಂದಿದೆ. ದಿವಂಗತ ಉಷಾ ಜೈರಾಮ್ ಅತ್ಯಂತ ಸಕ್ರಿಯ ಸಮಾಜಕರ್ತೆ. ಹಲವಾರು ನಾಟಕಗಳಲಿ ಉತ್ತಮವಾಗಿ ಅಭಿನಯಿಸಿರುವರು. ರಮಾ ಹರಿಹರನ್, ರಮಾ ವೆಂಕಟೇಶ್, ಭಾರತಿ ಪ್ರಸಾದ್, ದಿವಂಗತ ಲಲಿತಾಬಾಲು, ಉಷಾ ಶ್ರೀಕಾಂತ್, ಸರಿತ ಜೈರಾಮ್, ಲಕ್ಷ್ಮೀ ಸೀತಾರಾಮ್, ಶಾರ್ವರಿ, ಸೌಮ್ಯ, ರತ್ನಾರಾವ್ ಅಸೋಸಿಯೇಷನ್ ಸಕ್ರಿಯ ಪ್ರತಿಭಾನ್ವಿತ ಯುವ ಪೀಳಿಗೆಯ ಸದಸ್ಯರು.

1926ರಲ್ಲಿ ಥಿಯೇಟರ್ ಚಟುವಟಿಕೆ ಗಂಗಾಧರಯ್ಯನವರ ನೇತೃತ್ವದಲ್ಲಿ ಆರಂಭವಾಯಿತು. ಮೊದಲು ಪೌರಾಣಿಕ ಮತ್ತು ಸಂಗೀತವನ್ನು ಒಳಗೊಂಡ ನಾಟಕವನ್ನು ಆಡುತ್ತಿದ್ದರು. ಗಂಡಸರ ಹೆಂಗಸರ ಪಾತ್ರ ಮಾಡುತ್ತಿದ್ದುದು ಹಿಂದೆ ತಿಳಿಸಿದೆ. ಗಂಗಾಧರಯ್ಯ, ಬಿ.ಜಿ.ಆಚಾರ್, ಎಮ್.ಶೇಷನ್, ಎಮ್.ಎನ್.ಸಂಪತ್, ರಾಮರಾವ್, ಆರ್.ನಾಗೇಂದ್ರ ರಾವ್, ಆಮೇಲೆ ಹಲವು ಹೆಂಗಸರು ಮುಂದೆ ಬಂದು ಪಾತ್ರ ವಹಿಸಿದರು. ಸುಧಾ ಆಚಾರ್ಯ, ಸಂಧ್ಯಾ ಮೂರ್ತಿ, ಮೀರಾ ರಾವ್ ಮತ್ತು ಲಕ್ಷ್ಮಿಮೂರ್ತಿ, ಗೀತಾ ವಿಶ್ವನಾಥ್, ಮಧುರಾ ಕೃಷ್ಣಸ್ವಾಮಿ ಮತ್ತು ಶಾರದಾ ನಾರಾಯಣ ಸ್ವಾಮಿ ಇವರುಗಳ ಹೆಸರು ದಾಖಲಿಸಬೇಕು.

1947ರ ಹೊತ್ತಿಗೆ ಕೈಲಾಸಂರವರ ಪ್ರಭಾವ ಅಸೋಸಿಯೇಷನ್ ಮೇಲೆ ಬೀರಿ ಅವರಲ್ಲಿ ತರಬೇತಿ ಪಡೆದು ಕೈಲಾಸಂ ನಾಟಕವನ್ನು ಎತ್ತಿ ಹಿಡಿದವರೆಂದರೆ ಜಯಭೀಮರಾವ್, ಗೋಪಾಲರಾವ್, ರಾಘವೇಂದ್ರ, ಗುರು, ಹರಿದಾಸ್, ಎಸ್.ಎನ್.ನಾಗರಾಜ್ ರಾ, ಎಸ್.ಅರ್.ಪ್ರಸನ್ನ, ಎ.ಟಿ.ಪದ್ಮನಾಭ್, ಬಿ.ಜಿ.ಆಚಾರ್, ಟಿ.ಆರ್.ಎನ್.ಆನಂದಮ್. 1967 ಒಂದು ರಂಗಮಂಟಪ ಶುರುವಾದಾಗ, ಡಾ.ಬಿ.ಆರ್.ಮಂಜುನಾಥ್‌ರವರ ನೇತೃತ್ವದಲ್ಲಿ ಒಂದು ಪ್ರತಿಭಾವಂತ ದ್ರವತಾರೆಯಂತ ಕಲಾವಂತರ ತಂಡ ಅಸೋಸಿಯೇಷನ್‌ನಲ್ಲಿ ಇತ್ತು ಎಂದರೆ ಅತಿಶಯೋಕ್ತಿ ಆಗಲಾರದು.

1970 ರ ದಶಕದಲ್ಲಿ, ಅಸೋಸಿಯೇಷನ್ ಕೈಲಾಸಂ ನಾಟಕವನ್ನು ಕಡಿಮೆ ಮಾಡಿ 'ಅಸಂಗತ ನಾಟಕ'ಕ್ಕೆ ಎಡೆಕೊಟ್ಟಿತು. ಇದರಲ್ಲಿ ದುಗ್ಗಪ್ಪಯ್ಯ, ಡಾ। ಬಿ.ಆರ್.ಮಂಜುನಾಥ್ ಮತ್ತು ಗೀತಾ ವಿಶ್ವನಾಥ್ ತಾವೇ ಬರೆದು, ಆಡಿಸಿದ

ನಾಟಕಗಳನ್ನು ಮುಂಬೈನಲ್ಲೇ ಅಲ್ಲದೆ ಹಲವಾರು ಊರುಗಳಲ್ಲಿ ಪ್ರದರ್ಶಿಸಿದರು ಮತು ಜನ ಮೆಚ್ಚಿದರು. ಬೆಕ್ಕಿನ ಕಣ್ಣು, ಬಿತ್ತಿ ಬೆಳೆದವರು, ಕೂಪಮಂಡೂಕ ಮುಖ್ಯವಾದವು. ಡಾ। ಮಂಜುನಾಥ್ ಬರೆದು ಆಡಿಸಿದ "ರಂಗೋಲಿ ನ್ಯಾಯ, ಹೂಗಿಡದಲ್ಲಿ ಹೂವರಳಿಹುದು, ನಾ ದ್ಯಾವರನ್ನು ನೋಡಬ್ಯಾಕು" ಇವೆಲ್ಲಾ ನಾಟಕ ಯುಗದ ಮೈಲಿಗಲ್ಲು. 1970–80 ಅಸೋಸಿಯೇಷನ್ ಕಲೆಯ ಪರ್ವಕಾಲವೆನ್ನಬಹುದು. ಗೀತಾ ವಿಶ್ವನಾಥ್ ಒಳ್ಳೆಯ ನೃತ್ಯಕಲಾವಿದೆ. ಇವರ ನೃತ್ಯ ಸಂಯೋಜನೆಯಿಂದ ತಯಾರಾದ, ಕೃಷ್ಣಾಯತುಭ್ಯಂ, ಅಂತಃಪುರಗೀತೆಗಳು ಕೂಳೂರು ಕೊಡಗೂಸು, ಭಜಗೋವಿಂದಂ ಅಪಾರ ಜನಮೆಚ್ಚಿಗೆಗೆ ಪಾತ್ರವಾಯಿತು.

ಅಸೋಸಿಯೇಷನ್‌ಗೆ ಹಲವಾರು ನೃತ್ಯಕಲಾವಿದರು ಬಂದು ತಮ್ಮ ಕಲೆಯಿಂದ ರಂಜಿಸಿದ್ದಾರೆ. ನಮ್ಮ ದೇಶದ ಪ್ರಮುಖ ಕಲಾವಿದರಾದ ಶ್ರೀಮತಿ ಪದ್ಮಿನಿ, ರಾಗಿನಿ, ವೈಜಂತಿಮಾಲಾಬಾಲಿ, ಸುಧಾ ದೊರೆಸ್ವಾಮಿ, ವಿಜಿಜನ್ನ, ಲಲಿತಾ ಶ್ರೀನಿವಾಸನ್, ವೆಂಟಕಲಕ್ಷಮ್ಮ ಪದ್ಮಿನಿ ರವಿ, ನಂದಿನಿ ಆಳವ ಪಟ್ಟಿ ಬೆಳೆಯುತ್ತದೆ. ಮುಂಬೈನಲ್ಲಿರುವ ಹೆಸರಾಂತ ನೃತ್ಯ ಗುರುಗಳಾದ ಗುರುಗೋವಿಂದರಾಜ ಪಿಳ್ಳೆ, ಮಹಾಲಿಂಗಂ ಪಿಳ್ಳೆ ಮತ್ತು ರಾಜರಾಜೇಶ್ವರಿ ನೃತ್ಯಕಲಾ ಮಂದಿರದ ಈಗಿನ ಗುರು ಕಲ್ಯಾಣಸುಂದರಂ ಪಿಳ್ಳೆ ಇವರ ಸಂಪೂರ್ಣ ಸಹಕಾರವಿದೆ. ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ವಿಜೇತ ಮುಂಬೈ ಕನ್ನಡಿಗ ವಿ.ಕೆ.ಮೂರ್ತಿ ಅವರು ಮೈಸೂರು ಅಸೋಸಿಯೇಷನ್‌ನ ನಿಕಟವರ್ತಿಗಳಲ್ಲಿ ಒಬ್ಬರು ಎಂಬುದು ಅಭಿಮಾನದ ಸಂಗತಿ.

1999ರಲ್ಲಿ ಒಂದು ವಾರದ ಕಾಲ 'ಗಿರೀಶ್ ಕಾರ್ನಾಡ್' ಬರೆದ ನಾಟಕಗಳ ನಾಟಕೋತ್ಸವ ಅತ್ಯಂತ ಮಹತ್ವದ್ದು. ಇದಾದ ನಂತರ ನಡೆದ 'ಗಿರೀಶ್ ಕಾರ್ನಾಡ' ಮತ್ತು 'ಆಧುನಿಕ ರಂಗಭೂಮಿ' ಅತ್ಯಂತ ವಿಚಾರಪೂರಿತ ಚರ್ಚೆ ಪ್ರಶಂಸೆ ಪಡೆಯಿತು. 2000–2008 ಕೂಡ ಅಸೋಸಿಯೇಷನ್‌ನಲ್ಲಿ ಹಲವಾರು ನಾಟಕ ನಡೆದಿದೆ. ಹಲವಾರು ನಾಟಕ ತಂಡಗಳು ಕೂಡ ಬಂದು ಪ್ರದರ್ಶನ ಕೊಟ್ಟಿದ್ದಾರೆ.

1989 ರಲ್ಲಿ ಅಸೋಸಿಯೇಷನ್ ತನ್ನದೇ ಆದ ಭವನದ ಕನಸನ್ನು ಹೊಂದಿ ಅದು 1999ರಲ್ಲಿ ಸಾಕಾರವಾಯಿತು. ತನ್ನದೇ ಆದ ಒಂದು ಸುಸಜ್ಜಿತ ಏರ್‌ಕಂಡಿಷನ್ ಥಿಯೇಟರ್ ಮೂನ್ನೂರು ಜನ ಕೊಡುವಂತಹುದು. ಇಂದು ಮುನ್ನೂರು ಜನ ಹವಾನಿಯಂತ್ರಣ ಭವನದಲ್ಲಿ ಕೂತು ಸಂತೋಷವಾಗಿ ನಾಟಕ, ಸಂಗೀತ ನೃತ್ಯ ಚರ್ಚೆ ನೋಡಲು ಸಾಧ್ಯವಾಗಿದೆ. ಎ.ನಾಗಭೂಷಣ ರವ್ ಅಧ್ಯಕ್ಷರಾದಾಗ (ಇವರು ಹಿಂದೂಸ್ತಾನ ಕನ್‌ಸ್ಟ್ರಕ್ಷನ್ ಕಂಪೆನಿ ಜನರಲ್ ಮ್ಯಾನೇಜರ್ ಆಗಿದ್ದರು) ಇದು ಸಾಕಾರವಾಯಿತು. ಆಗ ಮಹಾರಾಷ್ಟ್ರದ ಗವರ್ನರ್ ಆಗಿದ್ದ ಅಲೆಗ್ಸಾಂಡರ್ ಉದ್ಘಾಟನೆ ಮಾಡಿದರು. ಹಿರಿಯ ಸದಸ್ಯರಾದ ಶಾರದಾ ನಾರಾಯಣ ಸ್ವಾಮಿ, ರಂಗಭೂಮಿ ಪೂಜೆ ಮಾದಿದಾಗ ಹಾಕಿದ ರಿಕಾರ್ಡ್ "ಎಂದೋ ಮಹಾನುಭಾವುಲು' ಅರ್ಥಪೂರ್ಣ.

**ಸಂಗೀತ ಮತ್ತು ಅಸೋಸಿಯೇಷನ್:**

ಮೈಸೂರು ಅಸೋಸಿಯೇಷನ್ ಸಂಗೀತದ ಚರ್ಚೆ ಮತ್ತು ಸಂಗೀತ ಕಲಿಸಿಕೊಡಲು ಗುರುಗಳ ಏರ್ಪಾಡು ಇದರಲಿ ಯಾವಾಗಲೂ ಮುಂಚೂಣಿಯಲ್ಲಿದೆ. ಮೊಟ್ಟಮೊದಲ ಗುರು ವೀಣೇ ಶಂಕರನಾರಾಯಣ ರಾವ್‌ರನ್ನು ಜ್ಞಾಪಿಸಬೇಕು. ಇವರು ಅಸೋಸಿಯೇಷನ್‌ನಲ್ಲಿ ಸಂಗೀತ ಕಲಿಸುತ್ತಿದ್ದರು. ಇವರು ಅಸೋಸಿಯೇಷನ್‌ನಲ್ಲಿ ಕಲಿಸುವುದಲ್ಲದೆ, ಇವರು ನಡೆಸುತ್ತಿದ್ದ 'ತರಂಗಿಣೀ ಅಕ್ಯಾಡಮಿ'ಯಲ್ಲಿ ಹಲವಾರು ಶಿಷ್ಯರನ್ನು ತಯಾರು ಮಾದಿರುವರು. ಮೈಸೂರು ವೀಣೆ ಪರಂಪರೆಯನ್ನು ಮುಂಬಯಿಯಲ್ಲಿ ನೆಲಸುವಂತೆ ಮಾಡಿರುವರು. ಅದೂ ಅಲ್ಲದೆ 'ವೀಣೇ ಸಾರ್ವಭೌಮ ವಾದ' ಅವರ ಮುಖ್ಯ ಕೃತಿ. ಇದನ್ನು ಕರ್ನಾಟಕ ನೃತ್ಯ ಅಕಾಡಮಿ ಪ್ರಕಟಿಸಿದೆ. ಅಪೂರ್ವ ವಿಚಾರ ಈ ಕೃತಿಯಲ್ಲಿದೆ. "Veena Instrument for Excellence" ಎಂಬ ಕೃತಿಗೆ ಕೂಡ ಬಹಳ ಬೇಡಿಕೆ ಇದೆ. ಇತ್ತೀಚೆಗೆ ಪುರಂದರದಾಸರ ಕೃತಿಗಳ ಬಗ್ಗೆ ಕೂಡ ಮೂರು ಪುಸ್ತಕ ಪ್ರಕಟಿಸಿದ್ದಾರೆ. ಅಸೋಸಿಯೇಷನ್ ಚಟುವಟಿಕೆಗಳಲ್ಲಿ ಸದಾ ಇಂದಿಗೂ ಪಾಲ್ಗೊಂಡು ಮಾರ್ಗದರ್ಶನ ಮಾಡುವರು.

ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಎರಡೂ ಪದ್ಧತಿಯನ್ನು ಅಸೋಸಿಯೇಷನ್ ಯಾವಾಗಲೂ ಪ್ರೋತ್ಸಾಹಿಸಿದೆ. ಎರಡೂ ಪದ್ಧತಿಯ ಶ್ರೇಷ್ಠ ಕಲಾವಿದರು ಸಂಘಕೆ ತಮ್ಮ ಕಲಾಪ್ರತಿಭೆಯನ್ನು ತೋರಿಸಿದ್ದಾರೆ. ಹಲವರನ್ನು ಹೆಸರಿಸಬೇಕಾದರೆ ಶೀಮತಿ ಚೊಕ್ಕಮ್ಮ, ನೀಲಮ್ಮ ಕಡಾಂಬಿ, ಗಂಗೂಬಾಯಿ ಹಾನಗಲ್, ಕಿಶೋರಿ ಅಮೋನ್‌ಕರ್, ಪಂಡಿತ ಭೀಮ್‌ಸೇನ್ ಜೋಷಿ, ಮಲ್ಲಿಕಾರ್ಜುನ ಮನ್ಸೂರ್ ಬಸವರಾಜ್ ರಾಜಗುರು, ಕುಮಾರಗಂಧರ್ವ, ಆರ್.ಕೆ.ಪದ್ಮನಾಭ್ ಮಾತು ವಿಜಯಲಕ್ಷ್ಮೀನಾಥನ್‌ರವರು ಅಸೋಸಿಯೇಷನ್‌ಗೆ 50 ವರುಷದಿಂದ ಗಣಪತಿ ಉತ್ಸವದಲ್ಲಿ ಹಾಡಿರುವರು. ಇಂದಿನ ಯುವ ಕಲಾವಿದರಾದ, ಟಿ.ಎನ್.ಸತ್ಯವತಿ, ನಾಗಮಣಿ ಶ್ರೀನಾಥ, ಸುಕನ್ಯ ಪ್ರಭಾಕರ್ ಅತ್ಯಂತ ಯಶಸ್ವಿಯಾಗಿ ಒಂದೊಂದು ವಾರ ಸಂಗೀತ workshop ನಡೆಸಿಕೊಟ್ಟಿದ್ದಾರೆ.

**ಅಸೋಸಿಯೇಷನ್ ಮತ್ತು ಜಾನಪದ**

ಮೊದಲು ಸಂಗೀತ ವಾದ್ಯ ಸಂಯೋಜನೆ ವಿ.ಕೆ.ಮೂರ್ತಿಯವರಿಂದ ನಿರ್ವಹಿಸಲ್ಪಡುತ್ತಿತ್ತು. ಅತ್ಯಂತ ಹಿರಿಯರಾದ ದಿವಂಗತ ಸೀತಮ್ಮ ರಾವ್‌ರವರ ದಿಗ್ದರ್ಶನ ಮತ್ತು ನಿರ್ದೇಶನದಲ್ಲಿ ಹಲವಾರು ಸದಸ್ಯರು ಜಾನಪದ ಸಂಗೀತವನ್ನು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಆಳವಡಿಸಿ ಹಲವು ಕಡೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಡಾ। ಬಿ.ಆರ್.ಮಂಜುನಾಥ ಮತ್ತು ಸುಶೀಲ ಆಚಾರ್ಯರ ಕೊಡುಗೆ ಅಪಾರ. "ಡಾ. ಬಿ. ಆರ್. ಮುಂಜುನಾಥ ಸಂಕೀರ್ಣ ಪ್ರತಿಭೆಯ ವಿರಳ ವ್ಯಕ್ತಿ. ತಂತ್ರವಿಜ್ಞಾನಿಯಾದ ಇವರು ಸಾಹಿತ್ಯ, ಸಂಗೀತ ಮತ್ತು ಇತರ ಕೆಲವು ವಿಶಿಷ್ಠ ಪರಿಣಿತಿಯೊಡನೆ ಅನ್ವಯಿಕ ವಿಧಾನದಲ್ಲಿ ಸೃಜನ ಶಕ್ತಿಯನ್ನು ಪ್ರಕಟಪಡಿಸುತ್ತಿರುವುದು ತುಂಬ ಮೌಲಿಕವಾಗಿದೆ. ನಾಟಕದ ಆಸಕ್ತಿ ಜನ್ಮಜಾತಕವೆನ್ನು ವಷ್ಟು ಸಹಜವಿದ್ದು, ಈ ಎರಡು ದಶಕಗಳಲ್ಲಿ ಹಲವು ನಾಟಕಗಳನ್ನು ರಚಿಸಿ ರಂಗಮಂಚದಲ್ಲಿ ತಾವೇ ದಿಗ್ದರ್ಶಿಸಿರುವುದಲ್ಲದೆ ಅಭಿನಯಪರತೆಯನ್ನೂ ರಮಣೀಯಗೊಳಿಸಿದ್ದಾರೆ. ಡಾ। ಮಂಜುನಾಥ್ ಕನ್ನಡದ ಅಗ್ರಗಣ್ಯ ರಚನಾಕಾರರಲ್ಲಿ ಒಬ್ಬರೆಂದು ಸಂಕೋಚವಿಲ್ಲದೆ ತೀರ್ಮಾನಿಸಬಹುದು. ಡಾ। ಬಿ.ಆರ್.ಮಂಜುನಾಥ್ ಮತ್ತು ಶ್ರೀಮತಿ ಸುಶೀಲಾ ಆಚಾರ್ಯ ಕವಿಗಳಾದ ಕುವೆಂಪು, ಬೇಂದ್ರೆ, ಕೆ.ಎಸ್.ನರಸಿಂಹ ಸ್ವಾಮಿ ಇವರುಗಳ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡುವದರಲ್ಲಿ ಎತ್ತಿದ ಕೈ. ಸಂಪ್ರದಾಯ ಹಾಡುಗಳನ್ನು ಕ್ಯಾಸೆಟ್ ಮಾಡಿ, ಅಸೋಸಿಯೇಶನ್‌ಗೆ ಕೊಟ್ಟ ಸೀತಮ್ಮರಾಮ್ ಇನ್ನಿಲ್ಲ. ಆದರೆ ಅವರು ಕೊಟ್ಟ ಕ್ಯಾಸೆಟ್ ಕಾಣಿಕೆ ಇದೆ. ಸುಶೀಲ ಆಚಾರ್ಯರ ನೇತೃತ್ವದಲ್ಲಿ ಮಾಡಿದ ಎರಡು ಕ್ಯಾಸೆಟ್, ಇಂಚರ ಮತ್ತು ಬೇಂದ್ರೆ ಕವನಗಳು ಅಸೋಸಿಯೇಷನ್‌ನಲ್ಲಿ ಇದೆ.

ಅಸೋಸಿಯೇಷನ್ 1976 ರಲ್ಲಿ ಸುವರ್ಣ ಮಹೋತ್ಸವ ಆಚರಿಸಿತು. ಆ ವರುಷವೆಲ್ಲಾ ಸಂಭ್ರಮ. ಆಗ ಹಮ್ಮಿಕೊಂಡ ಅತ್ಯುತ್ತಮ ಕಾರ್ಯಕ್ರಮಗಳ ಪೈಕಿ ಒಂದು ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್ ನಡೆಸಿಕೊಡುವ "ಉಪನ್ಯಾಸ ಮಾಲಿಕೆ" ಇದಕ್ಕಾಗಿ ಮೈಸೂರು ಅಸೋಸಿಯೇಷನ್ ಮುಂಬೈ ವಿಶ್ವವಿದ್ಯಾನಿಲಯಕ್ಕೆ ದತ್ತಿ ಕೊಟ್ಟಿತು. ಈ ದತ್ತಿ ನಿಧಿಯಿಂದ ಮುಂಬಯಿ ವಿಶ್ವವಿದ್ಯಾನಿಲಯ ಪ್ರತಿವರ್ಷ ಕರ್ನಾಟಕದಲ್ಲಿ ಇರುವ ಯಾರಾದರೂ ವಿದ್ವಾಂಸರನ್ನು ಬರಮಾಡಿಕೊಂಡು ಅವರಿಂದ ಎರಡು ದಿನ, ಉಪನ್ಯಾಸ ಚರ್ಚೆ ಹಮ್ಮಿಕೊಳ್ಳುತ್ತದೆ. ಇದು ಅತ್ಯಂತ ಲಾಭವಾಗಿದೆ. ಮುಂಬೈನಲ್ಲಿದ್ದು ಹಿರಿಯರ ಸಂಪರ್ಕ ಉಂಟಾಗಿದೆ. ಕಳೆದ 25 ವರುಷದಿಂದ ಇದು ಸತತವಾಗಿ ನಡೆದು ಬಂದಿದೆ. ಮುಖ್ಯವಾಗಿ ಡಾ। ಶಿವರಾಮ ಕಾರಂತ, ಡಾ। ಚಂದ್ರಶೇಖರ ಕಂಬಾರ, ಡಾ। ಶಿವರುದ್ರಪ್ಪ, ಡಾ। ಕೀರ್ತಿನಾಥ ಕುರ್ತುಕೋಟಿ, ಡಾ। ಸೂರ್ಯನಾಥ ಕಾಮತ್, ಡಾ। ಅನಂತಮೂರ್ತಿ, ಎನ್.ಕೆ.ರಾಮಚಂದ್ರ ರಾವ್ ಮತ್ತು ಡಾ। ಬೈರಪ್ಪ ಮತ್ತಿತರು ವಿದ್ವತ್ ಪೂರ್ವ ಭಾಷಣಗಳಿಂದ ಸದಸ್ಯರನ್ನು ಪ್ರಭಾವಿತಗೊಳಿಸಿದ್ದಾರೆ.

ಅಸೋಸಿಯೇಷನ್ ಯಾವಾಗಲೂ ಭಾಷಾ ಸಮನ್ವಯ ಕಾಪಾಡಿದೆ. ಹಲವಾರು ಭಾಷೆಗಳ ನಾಟಕಗಳನ್ನು ಸದಾ ಪೋಷಿಸಿದೆ. ಗಿರೀಶ್ ಕಾರ್ನಾಡ, ವಿಜಯ ತೆಂಡೂಲ್ಕರ್, ಜಬ್ಬರ್ ಪಟೇಲ್, ಸತ್ಯದೇವದುಬೆ, ಎಮ್.ಎನ್.ಸತ್ಯು, ನಾದಿರ ಬಬ್ಬರ್, ರಮೇಶ್ ಕಲ್ವಾರ್, ರಾಮುರಾಮಚಂದ್ರನ್,. ಇವೆರಲ್ಲರೂ ತಮ್ಮ ಅತ್ಯುತ್ತಮ ನಾಟಕವನ್ನು ಪ್ರದರ್ಶಿಸಿದ್ದಾರೆ.

ಉತ್ತಮ ಗ್ರಂಥ ಭಂಡಾರ ಹೊಂದಿರುವ ಅಸೋಸಿಯೇಷನ್ ಹಲವಾರು ಪತ್ರಿಕೆಗಳು, ಸದಸ್ಯರಿಗೆ ಬೇಕಾಗುವ ಸಂದರ್ಭ ಗ್ರಂಥ, ಅವಲೋಕನ ಗ್ರಂಥಗಳು ಎಲ್ಲಾ ಲಭ್ಯವಿದೆ. ಇತ್ತೀಚೆಗೆ ಎರಡು ವರುಷದಿಂದ ಕನ್ನಡ ಪುಸ್ತಕ ಪ್ರಾಧಿಕಾರದವರು ತಮ್ಮ ಒಂದು ಮಳಿಗೆಯನ್ನು ಅಸೋಸಿಯೇಷನ್ ಪ್ರಾಂಗಣದಲ್ಲಿ ಇಟ್ಟಿರುವದು ಅತ್ಯಂತ ಉಪಕಾರವಾಗಿದೆ. ಇದರಿಂದ ಕನ್ನಡ ಅಭಿಮಾನಿಗಳ ಹಲವಾರು ದಿವಸಗಳ ಕನಸು ನನಸಾಗಿರುವುದಲ್ಲದೆ ಕನ್ನಡ ಪುಸ್ತಕ ಕೊಳ್ಳುವುದಕ್ಕೆ ದೊರೆಯುವಂತಾಗಿದೆ.



**ಮೈಸೂರು ಅಸೋಸಿಯೇಶನ್್ನ ಅಧ್ಯಕ್ಷರುಗಳು**

**ನೇಸರು:**

ಮೈಸೂರು ಅಸೋಸಿಯೇಷನ್ ಮುಖವಾಣಿ "ನೇಸರು" ಸದಸ್ಯರೆಲ್ಲರ ನೆಚ್ಚಿನ ಪತ್ರಿಕೆ. ತಿಂಗಳೋಲೆಯಾದ "ನೇಸರು"ಗೆ ಈಗ ಮೂವತ್ತು ಮೂರು ವರುಷದ ಸಂಭ್ರಮ. ಇದು ಅತ್ಯಂತ ಪ್ರಭಾವಿತವಾದ ಕನ್ನಡ ತಿಂಗಳೋಲೆ. ಇದರ ಸಂಪೂರ್ಣ ಜವಾಬ್ದಾರಿ ಮೊದಲು ಹೊತ್ತುವರು ಡಾ। ಬಿ. ಆರ್. ಮಂಜುನಾಥ್ ಮತ್ತು ಎಮ್.ಎ.ಎನ್.ಪ್ರಸಾದ್ ಆಯ್ದ ಲೇಖನಗಳು, ಸುಂದರ ಮುಖಪುಟ, ಕಾಲಕಾಲಕ್ಕೆ ಹೊಂದಿಸಿ ಪ್ರತಿ ತಿಂಗಳೂ ಹತ್ತನೆ ತಾರೀಖು ಒಳಗೆ ಸದಸ್ಯರೆಲ್ಲರಿಗೂ ತಲುಪುವುದು. ಈಗಂತೂ ಇದು ಕನ್ನಡಿಗರ ಮನೆಮಾತಾಗಿದೆ. ಪ್ರತಿ ತಿಂಗಳೂ 10ನೇ ತಾರೀಖಿನ ಒಳಗೆ ಸದಸ್ಯರೆಲ್ಲರಿಗೂ ಪೋಸ್ಟ್ ಮೂಲಕ ತಲವುವದು. ನೇಸರು ಪತ್ರಿಕೆ ಮೇಲೆ 5 ರೂ. ಅಂತ ಬರೆದಿದರೂ, ಅಸೋಸಿಯೇಷನ್ ಸದಸ್ಯರಿಗೆ ಪುಕ್ಕಟೆ ದೊರಕುವದು. ಇದು ಅಸೋಸಿಯೇಷನ್ ಆಗುಹೋಗುಗಳ ಪತ್ರಿಕೆಯಾದರೂ, ಇದರಲ್ಲಿ ಸಾಧಾರಣವಾಗಿ ಮುಂಬೈ ಕನ್ನಡ ಸಂಘಗಳ ಚಟುವಟಿಕೆಗಳ ದಾಖಲೆಗಳು ಇರುತ್ತದೆ. ಸುಮಾರು 12 ಪೇಜು ಇದರ ಗಾತ್ರ. ಇದು ವಿವಿಧ ಪ್ರಕಾರದ ಲೇಖನಗಳನ್ನೂ ಮತ್ತು ಮುಂಬೈನಲ್ಲಿ ಪ್ರಮುಖ ಸುದ್ದಿ ಮತ್ತು ಕವಿಗಳ ಪರಿಚಯ, ವ್ಯಕ್ತಿಗಳ ಸಂದರ್ಶನ ಮತ್ತು ಸಂವೇದನೆ ವಿಮರ್ಶಾ ಬರಹಗಳು ಹಲವು ಮತ್ತು ಓದುಗರ ಅನಿಸಿಕೆ ಇವೆಲ್ಲವನ್ನೂ ಒಳಗೊಂಡಿದೆ.

ನೇಸರು ಪತ್ರಿಕೆಯಲ್ಲಿ ಹಲವಾರು ಉಪಯುಕ್ತ ಲೇಖನಗಳು ಮುದ್ರಣವಾಗಿದೆ. ಇದರ ಹಳೆಯ ಸಂಚಿಕೆಯನ್ನು ನೋಡಿದಾಗ, ನಮಗೆ ಭಾಸವಾಗುವುದು, ನಾಡಿನ ಮತ್ತು ಮುಂಬೈನ ಯಾಂತ್ರಿಕತೆಯಲ್ಲಿಯೂ ಬಿಡುವು ಮಾಡಿಕೊಂಡು ಎಷ್ಟೊಂದು ಜನ ಇದರ ಬೆಳವಣಿಗೆಗೆ ಕಾರಣರಾಗಿದ್ದಾರೆ ಎಂಬುದು. ವ್ಯಕ್ತಿ ಪರಿಚಯ, ಕವಿಗಳ ಬರಹಗಳು, ಪುಸ್ತಕ ಪರಿಚಯ, ಕಾಲಕಾಲಕ್ಕೆ ದಾಖಲಿಸಿ "ನೇಸರು" ಸಾಮಾನ್ಯರಲ್ಲಿ ಓದುವ ಅಭಿರುಚಿ ಉಂಟುಮಾಡಿದೆ. ಇದಕ್ಕೆ ಲೇಖನ ಬರೆದಿರುವ ಹಲವರು ವಿದ್ವಾಂಸರ ಪಟ್ಟಿಯನ್ನು ನೋಡಿದಾಗ, ಇದರ ಮೇಲಿನ ಅಭಿಮಾನದಿಂದ ಬರೆದಿರುವದು ವ್ಯಕ್ತವಾಗುತ್ತೆ . "ನೇಸರು" ಎಲ್ಲವನ್ನೂ ಜತನವಾಗಿ ಕೂಡಿಸಿಟ್ಟರೆ ಮುಂದಿನ ಪೀಳಿಗೆಗೆ ಒಂದು ಆಕರ ಸಮಗ್ರವಾಗಿ ಬಳಸಿಕೊಳ್ಳಬಹುದು. ಮುಂಬೈ ಅಲ್ಲದೆ ಕರ್ನಾಟಕದಲ್ಲೂ "ನೇಸರು"ಗೆ ಅಪಾರ ಮನ್ನಣೆ ಸಂದಿದೆ.

2016, ಮೈಸೂರು ಅಸೋಸಿಯೇಷನ್‌ಗೆ 90 ವರುಷವಾಗಿದೆ. 1951, 1976 ಮತ್ತು 1986 ಬೆಳ್ಳಿ, ಬಂಗಾರ ಮತ್ತು ವಜ್ರ ಮಹೋತ್ಸವ ಆಚರಿಸಿದೆ. ಪ್ರತಿ ಹಂತದಲ್ಲೂ ಒಳಿತನ್ನು ಸಮಾಜಕ್ಕೆ ತಲಪಿಸುವ ಕಾರ್ಯವನ್ನು ಕೈಗೊಂಡೀರುವ ಅಸೋಸಿಯೇಷನ್ ಕಾರ್ಯವನ್ನು ಮೆಚ್ಚಿ ಕರ್ನಾಟಕ ಸರ್ಕಾರ 2000 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಕರ್ನಾಟಕ ಹೊರಗೆ ನೀಡುವ ಕನ್ನಡ ಸಂಘಗಳ ಪೈಕಿ ನೀಡಿದ ಮೊದಲ ಪ್ರಶಸ್ತಿ "ಮೈಸೂರು ಅಸೋಸಿಯೇಷನ್' ಸಂದಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೈಸೂರು ಅಸೋಸಿಯೇಷನ್ ಪ್ರಗತಿಯಲ್ಲಿ ಹಿಂದಿನ ಎಲ್ಲ ಅಧ್ಯಕ್ಷರಿಗೂ ಮತ್ತು ಇತ್ತೀಚಿನ ಶ್ರೀಯುತ ದೊರೆಸ್ವಾಮಿ ಮತ್ತು ರಾಮಭದ್ರ ಅವರ ಕೊಡುಗೆಯೂ ಇಲ್ಲಿ ಸ್ಮರಣೀಯ ಅಂಶ.

ದೂರದ ಊರಿನಲ್ಲಿ ಕುಳಿತು ಮುಂಬೈ ಬಗ್ಗೆ ಬರೆಯುವದು ಸುಲಭ. ಆದರೆ ಕಂಡು ಅನುಭವಿಸಿದ್ದನ್ನು ದಾಖಲಿಸಿರುವುದು ಕರ್ತವ್ಯ. ಮೈಸೂರು ಅಸೋಸಿಯೇಷನ್ ಹಿರಿಯರು ಹಿಂದೆ ಕಟ್ಟಿದ ಮತ್ತು ಈಗ ವಿಸ್ತರಿಸಿರುವ ಹವಾನಿಯಂತ್ರಣ ಸಭಾಂಗಣದಲ್ಲಿ ಕುಳಿತು, ಸಂಗೀತ, ನಾಟಕ, ನೃತ್ಯ, ಕಾವ್ಯವಿಮರ್ಶೆ, ಸಾಹಿತ್ಯ, ಹಾಸ್ಯ, ಚರ್ಚೆ ಅನುಭವಿಸಿದ್ದೇವೆ. ಪುಸ್ತಕದ ಅಂದ ಚಂದ ಮತ್ತು ಲೇಖಕನಿಗೆ ಸಾಕಷ್ಟು ಪ್ರಶಂಸೆಯಾಗುತ್ತೆ. ಆದರೆ ಅದನ್ನು ಅಚ್ಚುಕಟ್ಟಾಗಿ ಹೊರತಂದ ಪ್ರಕಾಶಕರನ್ನು ಅಷ್ಟಾಗಿ ಗಮನಿಸುವುದಿಲ್ಲ. ಹಾಗೆ ಪ್ರತಿ ಸಮಾರಂಭದಲ್ಲಿ ಸೂತ್ರಧಾರ ಇರಬೇಕಲ್ಲವೆ?

ಸೂತ್ರಧಾರ ಅಥವಾ ಸೆಕ್ರೆಟರಿ ಇವರುಗಳು ಹಿಂದಿನಿಂದ ಕೈಗೊಳ್ಳುವ ಕೆಲಸ ಅಪಾರ. ಎಷ್ಟೇ ಕ್ಯಾಸೆಟ್ ಬರಲಿ, Audio-Video ಇರಲಿ, ಎದುರಿಗೆ ಮುಖಾಮುಖಿಯಾಗಿ ಕುಳಿತುಕೊಳ್ಳುವ ಅವಕಾಶ ದೊಡ್ಡದು. ಇದನ್ನೆಲ್ಲಾ ಏರ್ಪಾಡು ಏಕೈಕ ಮತ್ತು ಎಲ್ಲಾ ಕೈಂಕರ್ಯವನ್ನು ಹೊತ್ತಿರುವನು ಸೆಕ್ರೆಟರಿ. ಈತನ ಕೆಲಸ ಮೊದಲು ಬಂದ ಅತಿಥಿಗಳ ಕಲಾವಿದರ ಪರಿಚಯ ಮಾಡಿಸುವದು, ಮತ್ತು ಕೊನೆಯಲ್ಲಿ ವಂದನಾರ್ಪಣೆ ಮಾಡುವದು ಇಷ್ಟೇ ಎಂದು ತಿಳಿದರೆ ತಪ್ಪಾಗುತ್ತದೆ. ಸೆಕ್ರೆಟರಿಗಳು ಕೈಗೊಳ್ಳುವ ಕೆಲಸ ಅಪಾರ. ಕಾಲಕಾಲಕ್ಕೆ ಮೆಚ್ಚುವ ಕಾರ್ಯಕ್ರಮ ಏರ್ಪಾಡು ಮಾಡುವದು, ಕಲಾವಿದರನ್ನು ಬರಮಾಡಿಕೊಂಡು ಅವರನ್ನು ಕ್ಷೇಮವಾಗಿ ಊರು ತಲುಪುವಂತೆ ಅವರ ಜವಾಬ್ದಾರಿ ವಹಿಸುವುದು ಕರ್ತವ್ಯವೆಂದು ಮಾಡುವರು. ಹೀಗೆ ಸಂಘದ ಕೊಂಡಿಯಂತಿರುವ ಸೆಕ್ರೆಟರಿ ಜವಾಬ್ದಾರಿ ಅತಿ ಸೂಕ್ಷ್ಮ ಸಮರ್ಥರಾದ ಸೆಕ್ರೆಟರಿಗಳಿದ್ದರೆ ಅವರಿಂದ ಸ್ಫೂರ್ತಿ ಪಡೆದು ಹಲವಾರು ಸಮಾಜ ಸೇವಕರು ಅವರ ಹಿಂದೆ ಇದ್ದರು. ಅಸೋಸಿಯೇಷನ್ ಸೆಕ್ರೆಟರಿ ಕೆಲಸ ಹಗುರವಲ್ಲ. ವರ್ಷಪೂರ್ತಿ ಸದಸ್ಯರ ಮನಮೆಚ್ಚುವಂತೆ ಹಲವು ವೇಳೆ ತಮ್ಮ ಮನೆ ಮರೆತು ಸದಸ್ಯರಿಗೆ ಒಪ್ಪುವಂತೆ ನಡೆಸಿಕೊಂಡು ಹೋಗುವ ಕಲೆ ಇರುವವರು ಮಾತ್ರ ಸೆಕ್ರೆಟರಿಯಾಗಲು ಸಾಧ್ಯ. ಸೆಕ್ರೆಟರಿ ಕಾಲಕಾಲದಲ್ಲಿ ತಮ್ಮ ಸುತ್ತ ಯಾವ ರೀತಿ ಮಾರ್ಪಾಡು ಆಗಿದೆ ಮತ್ತು ಸುತ್ತಮುತ್ತ ಸಭಾ, ಸಂಘಗಳು ಯಾವ ದಿಕ್ಕಿನಲ್ಲಿ ನಡೆಯುತ್ತಿವೆ, ಎಂಬುದರ ಬಗ್ಗೆ ಮಾಹಿತಿ, ಸೌಹಾರ್ದ ಕೂಡ ಬೇಕಾಗುತ್ತದೆ. ಎಷ್ಟೋ ಕವಿಗಳು ಸ್ವಲ್ಪ ಹಳೆಯ ಸಂಪ್ರದಾಯಕ್ಕೆ ಸೇರಿದವರು. ಅಂತಹವರನ್ನೆಲ್ಲ ಮುಂಬಯಿಗೆ ಕರೆತಂದು ಅವರ ಹತ್ತಿರ ಸೈ ಅನ್ನಿಸಿಕೊಂಡಿದ್ದಾರೆ ನಮ್ಮ ಸೆಕ್ರೆಟರಿಗಳು.

ಸೆಕ್ರೆಟರಿಗಳ ಕೆಲಸ ಮನೆಯ ಜವಾಬ್ದಾರಿಗಿಂತ ಹೆಚ್ಚು. ಎಷ್ಟೋ ಬಾರಿ ಮನೆಗಿಂತ ಹೆಚ್ಚಿನ ಸಮಯವನ್ನು ಅಸೋಸಿಯೇಷನ್‌ಗೆ ವ್ಯಯ ಮಾಡಿದ್ದಾರೆ.

ಹಿಂದಿನ ಅಸೋಸಿಯೇಷನ್ ಸೆಕ್ರೆಟರಿಗಳಾದ ಶ್ರೀಯುತ ನಚ್ಚಿ ಆನಂದಮ್, ಡಾ. ಬಿ. ಆರ್. ಮಂಜುನಾಥ್, ಮಂಜುನಾಥಯ್ಯ, ಅವರಿಗೆ ಬೆಂಬಲಕ್ಕೆ ನಿಂತ ಸುಬ್ರಮಣಿಯಮ್, ಭಾರತಿ ಪ್ರಸಾದ್, ಉಷಾ ಜಯರಾಮ್, ಭವಾನಿ ಭಾರ್ಗವ, ಲಕ್ಷ್ಮಿ ಸೀತಾರಾಂ ಮತ್ತು ಇಪ್ಪತ್ತು ವರ್ಷಕಾಲ ಕಾರ್ಯದರ್ಶಿ ಜವಾಬ್ದಾರಿ ಹೊತ್ತ ಎಮ್. ಎನ್. ಪ್ರಸಾದ್ ಮತ್ತಿತರಿಗೆ ವಂದನೆಗಳು ಸಲ್ಲಲೇಬೇಕು.

ಮೈಸೂರು ಅಸೋಸಿಯೇಷನ್ ಬರೇ ಸಾಂಸ್ಕೃತಿಕ ವಿದ್ಯಮಾನಗಳಿಗೆ ಮಾತ್ರ ಸೀಮಿತವಾಗಿಲ್ಲ. ನಾಡಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಆಗುಹೋಗುಗಳಿಗೂ ಸ್ಪಂದಿಸುತ್ತಾ ಬಂದಿದೆ. ಕರ್ನಾಟಕ ಮಹಾರಾಷ್ಟ್ರ ಸಾಂಸ್ಕೃತಿಕ ಕೊಂಡಿಯಾಗಿ ಕೆಲಸ ಮಾಡುತ್ತಾ ಬಂದಿದೆ ಎಂಬುದಕ್ಕೆ ಅಸೋಸಿಯೇಷನ್‌ನಲ್ಲಿ ಇತ್ತೀಚೆಗೆ ವಿರಾಜಗೊಂಡ ಉಭಯ ಸಂಸ್ಕೃತಿಗಳನ್ನು ಬಿಂಬಿಸುವ ಭಿತ್ತಿ ಶಿಲ್ಪಗಳೇ ಸಾಕ್ಷಿ. ■

## ಹಂಪಿಗೆ ಸಾಂಸ್ಕೃತಿಕ ಸತ್ವವಿದೆ – ಪ್ರೊ. ಚಿದಾನಂದಮೂರ್ತಿ

ಪ್ರಾಕೃತಿಕ ಸೌಂದರ್ಯ, ಐತಿಹಾಸಿಕ ಮಹತ್ವ, ಸಾಂಸ್ಕೃತಿಕ ಪಾವಿತ್ರ್ಯ ಇವೆಲ್ಲದರ ಸಮ್ಮಿಲನ ನಮ್ಮ ಹಂಪಿ ಕ್ಷೇತ್ರ. ಹಂಪಿಗೆ ಈ ಹೆಸರು ಬಂದಿದ್ದು ಪಂಪಾ ಸರೋವರದಿಂದ. ಇದಕ್ಕೆ ಹಂಪಿ ಹೊಳೆ ಎಂದು ಕರೆಯುತ್ತಾರೆ. ಸಾಂಸ್ಕೃತಿಕವಾಗಿ



ಹಂಪಿಗೆ ವಿಶೇಷ ಮಹತ್ವವಿದೆ ಎಂಬುದಾಗಿ ನಾಡಿನ ಖ್ಯಾತ ಸಂಶೋಧಕ ಡಾ. ಚಿದಾನಂದಮೂರ್ತಿ ಅವರು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್ ಇದರ ಜಂಟಿ ಆಶ್ರಯದಲ್ಲಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಆದಿಕವಿ ಪಂಪನಿಗೆ ಈ ಹೆಸರು ಬರಲು ಕಾರಣ ಹಂಪಿಯಿಂದ, ಏಕೆಂದರೆ ಅವನು ಹುಟ್ಟಿದ್ದು ಹಂಪಿಯ ಸಮೀಪದ ಅಣ್ಣಿಗೇರಿಯಲ್ಲಿ. ಹಂಪಿಯ ಅಧಿದೈವ ಪಂಪಾಂಬಿಕೆ. ಹಂಪಿಯ ಒಡೆಯ ವಿರೂಪಾಕ್ಷ. ಹರಿಹರ ತನ್ನ ಕಾವ್ಯದಲ್ಲಿ ಎಲ್ಲಿಯೂ ಭುವನೇಶ್ವರಿಯ ಪ್ರಸ್ತಾಪವನ್ನು ಮಾಡುವುದಿಲ್ಲ. ಹರಿಹರನ ಕೃತಿಗಳಲ್ಲಿ ಇವೆಲ್ಲದರ ಉಲ್ಲೇಖ ಸಿಗುತ್ತದೆ. ಮೊತ್ತ ಮೊದಲು ಪ್ರಭುತ್ವದ ವಿರುದ್ಧ ಧ್ವನಿ ಎತ್ತಿದವನು ಹರಿಹರ. ವಚನಕಾರ ಅಕ್ಕವಳ್ಳಿಯ ಹಂಪಯ್ಯ ಹಂಪಿಯವನು. ಈತ ವಿರೂಪಾಕ್ಷನನ್ನು ದೇವರಾಯ ಅಂತ ಕರೆದಿದ್ದಾನೆ ಎಂಬುದಾಗಿ ಚಿದಾನಂದ ಮೂರ್ತಿಯವರು ಕರ್ನಾಟಕದ ಸಾಂಸ್ಕೃತಿಕ ಹಿರಿಮೆಯನ್ನು ತೆರೆದಿಟ್ಟರು. ಹಂಪಿ, ಕಾಶಿ ಹಾಗೂ ವ್ಯಾಟಿಕನ್ ಸಿಟಿ ಇವು ಜಗತ್ತಿನ ಇತಿಹಾಸದಲ್ಲಿ ತಮ್ಮದೆ ಆದಂತಹ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಹೊಂದಿವೆ. ಇಂತಹ ತಾಣಗಳನ್ನು ತೌಲನಿಕವಾಗಿ ಅಧ್ಯಯನ ಮಾಡಬಹುದಾಗಿದೆ ಎಂಬುದಾಗಿ ಅವರು ಸೋದಾಹರಣವಾಗಿ ವಿವರಿಸಿದರು.

## ಕನ್ನಡ ಸಾಹಿತ್ಯದೊಳಗೆ ನಗರ ಪ್ರಜ್ಞೆಯನ್ನು ಹರಿಯ ಬಿಟ್ಟವರು ಮುಂಬಯಿ ಲೇಖಕರು

ಮುಂಬಯಿ: ಕನ್ನಡವನ್ನು ಹೇಗೆ ಉಳಿಸಬೇಕೆಂದರೆ ಮಕ್ಕಳಿಗೆ ಕನ್ನಡ ಕವಿತೆಗಳು ತಲುಪುವಂತೆ ಮಾಡಬೇಕು. ಒತ್ತಾಯವಿಲ್ಲದೆ ಕನ್ನಡ ಸಾಹಿತ್ಯದ ಬಗ್ಗೆ ಮಕ್ಕಳಲ್ಲಿ ಪ್ರೀತಿಯನ್ನು ಬೆಳೆಸಬೇಕು. ಕನ್ನಡ ನಾಟಕಗಳಲ್ಲಿ ಮಕ್ಕಳನ್ನು ಅಭಿನಯಿಸುವಂತೆ ಮಾಡಬೇಕು. ಕನ್ನಡದ ದೊಡ್ಡ ಶಕ್ತಿ ಕಾವ್ಯ ಶಕ್ತಿ. ಆದರೆ ನಾವಿಂದು ಗದ್ಯಪ್ರಿಯರಾಗಿದ್ದೇವೆ. ಕರ್ನಾಟಕವೆನ್ನುವ ಶಕ್ತಿ ಮುಂಬಯಿಯಲ್ಲಿ ತನ್ನ ಆತ್ಮವನ್ನಿಟ್ಟಿದೆ ಎನ್ನಬಹುದು. ಯಾಕೆಂದರೆ ಕನ್ನಡ ತಾಯಿ ಭುವನೇಶ್ವರಿಯ ರಥವನ್ನು ನಾವು ಎಲ್ಲಿದ್ದರೂ ಎಳೆಯಬಹುದು. ಬೌಗೋಳಿಕ ಮಿತಿಯನ್ನು ದಾಟಿದ ಸಾಂಸ್ಕೃತಿಕ ಆವರಣ ಮುಂಬಯಿ



ಕನ್ನಡಿಗರದ್ದು. ಕನ್ನಡದ ಸಂಸ್ಕೃತಿಯ ನಂದಾದೀಪವನ್ನು ನಿರಂತರವಾಗಿ ಬೆಳಗಿಸಿದವರು, 'ನಗರ' ವನ್ನು ಕನ್ನಡ ಸಾಹಿತ್ಯಕ್ಕೆ ತಂದವರು ಮುಂಬಯಿ ಲೇಖಕರು ಎಂದು ಬೆಂಗಳೂರಿನ ಖ್ಯಾತ ಕವಿ ಡಾ. ಎಚ್ ಎಸ್ ವೆಂಕಟೇಶಮೂರ್ತಿ ಅವರು ನುಡಿದರು. ಅವರು ಇತ್ತೀಚೆಗೆ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್, ಮುಂಬಯಿ ಇವರ ಜಂಟಿ ಆಶ್ರಯದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ, 'ಆಧುನಿಕ ಕನ್ನಡ ಕಾವ್ಯ' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಾಗಿ ನಮ್ಮ ಕನ್ನಡದ ಕವಿಗಳನ್ನು ಮರೆತಿದ್ದೇವೆ. ವ್ಯಾಸರಾಯ ಬಲ್ಲಾಳ, ಅರವಿಂದ ನಾಡಕರ್ಣಿ, ಯಶವಂತ ಚಿತ್ತಾಲ ಮೊದಲಾದವರು ಮುಂಬಯಿ ನಗರದ ಸ್ಪಂದನವನ್ನು ತಮ್ಮ ಬರಹಗಳಲ್ಲಿ ಮೂಡಿಸಿದ್ದಾರೆ. ದೇಶದ ಐಕ್ಯಮತ್ಯವನ್ನು ಸಾಧಿಸುವ ಒಂದು ಪರೋಕ್ಷ ಪರಿ ಇದಾಗಿದೆ. ಬೌಗೋಳಿಕವಾಗಿ ದಾಟಿ ಸಾಂಸ್ಕೃತಿಕವಾಗಿ ಕನ್ನಡತ್ವ ಬೆಳೆಯಬೇಕು. 12ನೇ ಶತಮಾನ ಮತ್ತು 20ನೇ ಶತಮಾನ ಕನ್ನಡ ಕಾವ್ಯದ ಸಂದರ್ಭದಲ್ಲಿ ಮಹತ್ವವಾದುದು. ಇಡೀ ಜಗತ್ತಿಗೆ ವಿಶಿಷ್ಟವಾದ ಕನ್ನಡದ ಕಾಣಿಕೆ ಅಂದರೆ ಅದು ವಚನ ಸಾಹಿತ್ಯ. ಸಮೃದ್ಧವೂ, ಗುಣಾತ್ಮಕವೂ ಕನ್ನಡಕ್ಕೆ ಹೊಸನೆಲೆಯನ್ನು ಕಲ್ಪಿಸಿದ ಸಾಹಿತ್ಯ ಅದು ವಚನ ಸಾಹಿತ್ಯ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಎಲ್ಲ ಸಾಹಿತ್ಯವು ಧರ್ಮಬದ್ಧವಾಗಿಯೇ ಮೂಡಿಬಂದಿದೆ. ಕುವೆಂಪು, ಬೇಂದ್ರೆ, ಮಾಸ್ತಿ, ಪುತಿನ, ಕೆ.ಎಸ್ ನರಸಿಂಹಾಚಾರ್, ಅಡಿಗರ ಕಾವ್ಯದ ಸ್ವಾರಸ್ಯವನ್ನು ನಮ್ಮ ಮುಂದೆ ಮನೋಜ್ಞವಾಗಿ ತೆರೆದಿಟ್ಟರು. ಮೈಸೂರು ಅಸೋಸಿಯೇಶನ್ನಿನ ವಿಶ್ವಸ್ಥರಾದ ಕೆ. ಮಂಜುನಾಥಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಅತಿಥಿಗಳನ್ನು ಸ್ವಾಗತಿಸಿದರು. ಆರಂಭದಲ್ಲಿ ಎಸ್. ಕೆ. ಇ. ಎಸ್. ಶಾಲಾ ಮಕ್ಕಳಿಂದ ಕಾವ್ಯನೃತ್ಯ ನಡೆಯಿತು. ಮೈಸೂರು ಅಸೋಸಿಯೇಶನ್ನಿನ ಕೋಶಾಧಿಕಾರಿ ಮಂಜು ದೇವಾಡಿಗ ಅವರು ವಂದನಾರ್ಪಣೆ ಗೈದರು.

ಕೃತಿಕಾರರಾದ ಡಾ. ಗಿರಿಜಾ ಶಾಸ್ತ್ರಿ ಅವರು ತಮ್ಮ ಕೃತಿರಚನೆಯ ಹಿನ್ನೆಲೆಯ ಕುರಿತು ಮಾತನಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಭಿಮಾನಿಗಳು ಉಪಸ್ಥಿತರಿದ್ದರು.



**ಮೈಸೂರು ಅಸೋಸಿಯೇಶನ್ ದತ್ತಿಉಪನ್ಯಾಸ ಕಾರ್ಯಕ್ರಮದಲ್ಲಿ ಚೆನ್ನವೀರ ಕಣವಿಯವರು.**

### ಮುಂಬರುವ ಕಾರ್ಯಕ್ರಮಗಳು

**ಶುಕ್ರವಾರ ಎಪ್ರಿಲ್ 15, 2016 ರಂದು ಸಂಜೆ 5.30ಕ್ಕೆ**
**ರಾಮನವಮಿ ಪೂಜೆ ಮತ್ತು ಪ್ರಸಾದ ವಿನಿಯೋಗ.**

❀ ❀ ❀

**ಸೋಮವಾರ. ಮೇ 9, 2016ರಂದು ಸಂಜೆ 5.30ಕ್ಕೆ**
**ಅಕ್ಷಯ ತೃತೀಯ ಪೂಜೆ**
**ಮತ್ತು ಪ್ರಸಾದ ವಿನಿಯೋಗ**
**ಹಾಗೂ**
**ಗಣಪತಿ ಪ್ರತಿಷ್ಠಾಪನೆ ದಿನಾಚರಣೆ.**



Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting: 10/11th of every month

# ಮೈಸೂರು ಅಸೋಸಿಯೇಷನ್‌ಗೆ 90 ವರ್ಷದ ಹುಟ್ಟುಹಬ್ಬದ ಸಡಗರ



**ಮೈಸೂರು ಅಸೋಸಿಯೇಷನ್‌ನಲ್ಲಿ 90ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿ ಭಾಗವಹಿಸಿದ ಸದಸ್ಯರು**

ಮುಂಬೈನ ಮಾಟುಂಗಾದಲ್ಲಿರುವ ಮೈಸೂರು ಅಸೋಸಿಯೇಷನ್ ಮುಂಬೈನಲ್ಲಿರುವ ಕನ್ನಡ ಸಂಘ ಸಂಸ್ಥೆಗಳಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಕಾಪಿಟ್ಟುಕೊಂಡು ಬಂದಿದೆ. ಇದೇ ಫೆ. 27 ರಂದು ಅಸೋಸಿಯೇಷನ್‌ಗೆ ಆರಂಭವಾದ ದಿನದಿಂದ 90 ವರ್ಷ ತುಂಬಿ 91 ವರ್ಷಕ್ಕೆ ಕಾಲಿಟ್ಟಿದೆ. ಈ ಒಂದು ದೀರ್ಘ ಪಯಣದ ನೆನಪನ್ನು ಮತ್ತೆ ಹೊಸತಾಗಿಸಿಕೊಳ್ಳುವ ಉದ್ದೇಶದಿಂದ ಶನಿವಾರ ಫೆ.27 ರಂದು ಅಸೋಸಿಯೇಷೆನ್ ನಲ್ಲಿ ಎಲ್ಲ ಸದಸ್ಯರೂ ಒಟ್ಟುಗೂಡಿದ್ದರು. ಅತ್ಯಂತ ಹಿಂದಿನ ತಲೆಮಾರಿನಿಂದ ಈಗಿನ ತಲೆಮಾರಿನವರೆಗಿನ ಎಲ್ಲರೂ ಸಂತೋಷದಿಂದ ಸೇರಿದ್ದ ಈ ಸಂದರ್ಭದಲ್ಲಿ ಅಸೋಸಿಯೇಷನ್ ಬೆಳೆದು ಬಂದ ಬಗೆಯನ್ನು ಒಂದು ಸ್ಮೃತಿ ಚಿತ್ರ ದಾಖಲೆಯೊಡನೆ ಡಾ। ಮಂಜುನಾಥ್ ಎಲ್ಲರಿಗೂ ವಿಶದವಾಗಿ ವಿವರಿಸಿದರು. ಕೆಲವು ತುಂಬ ಅದ್ಭುತವಾದ ಗಳಿಗೆಗಳ ಆ ವಿವರ ನೆರೆದವರ ಮನಸ್ಸನ್ನು ಆವರಿಸಿ ಮೂಕರನ್ನಾಗಿಸಿದ್ದು ನಿಜ. ಆನಂತರ ಅಸೋಸಿಯೇಷನ್ನಿನ ಹಿರಿಯ ಸದಸ್ಯರನ್ನು ಗೌರವಿಸಿ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು. ಆ ಎಲ್ಲ ಸದಸ್ಯರೂ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವಾಗ ಆತ್ಮೀಯತೆಯ ಹರಿವಿನ ಪರಿಚಯ ಮಾಡಿಕೊಟ್ಟರು. ಮೊದಲಿಗೆ ಅತ್ಯಂತ ಹಿರಿಯರೂ ವಜ್ರ ಮಹೋತ್ಸವದ ಕಾಲದಲ್ಲಿ ಅಧ್ಯಕ್ಷರಾಗಿದ್ದವರೂ ಆದ 92 ವರ್ಷದ ಹಿರಿಯರಾದ ಶ್ರೀ. ಚಂಪಕನಾಥ್ ಅವರನ್ನು ಗೌರವಿಸಲಾಯಿತು. ಇವರು ಈಗ ಬೆಂಗಳೂರಿನಲ್ಲಿ ನೆಲೆಸಿರುತ್ತಾರೆ. ಕಾರ್ಯನಿಮಿತ್ತ ಇವರು ಮುಂಬಯಿಗೆ ಬಂದಿದ್ದು ಅಸೋಸಿಯೇಷನ್ನಿನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತುಂಬ ಸಂತೋಷಕೊಟ್ಟರು.

ಆನಂತರ ಮುಂಬಯಿನ ಹೆಸರಾಂತ ವಕೀಲರಾಗಿದ್ದ ಶ್ರೀ.ಬಿ.ನಾರಾಯಣ ಸ್ವಾಮಿಯವರ ಪತ್ನಿ ಶ್ರೀಮತಿ ಶಾರದಮ್ಮನವರನ್ನು ಗೌರವಿಸಲಾಯಿತು. ಅವರಿಗೂ ಈಗ 92 ವರ್ಷ ವಯಸ್ಸು. ನ್ಯಾಯಮೂರ್ತಿ ಶ್ರೀಕೃಷ್ಣ ಅವರ ತಾಯಿಯಾದ ಶಾರದಮ್ಮ ಎಲ್ಲರಿಗೂ ಅಮ್ಮನೇ ಆಗಿದ್ದಾರೆ. ಇವರೂ, ಬಿ.ನಾರಾಯಣ ಸ್ವಾಮಿಯವರೂ ಅಸೋಸಿಯೇಷನ್ ಪ್ರಾರಂಭ ಕಾಲದಿಂದಲೂ ಸಂಸ್ಥೆಗಾಗಿ ದುಡಿದಿದ್ದಾರೆ. ಶಾರದಮ್ಮನವರು ಹಾಜರಿರದ ಕಾರಣ ಅವರ ತಂಗಿ ಲೀಲಾ ಜೋಯಿಸ್ ಅವರು ಸನ್ಮಾನ ಸ್ವೀಕರಿಸಿದರು.

ಶ್ರೀ.ಎ.ಎನ್.ರಾಮಪ್ರಸಾದ್ ಮತ್ತು ಶ್ರೀ. ಎಚ್.ಕೆ.ಸೀತಾರಾಂ ಅಸೋಸಿಯೇಷನ್‌ನ ಆಟೋಟಗಳಲ್ಲಿ ಮುಂಚೂಣಿಯಲ್ಲಿದ್ದು ಅಸೋಸಿಯೇಷನ್‌ಗೆ ಮುಂಬಯಿಯ ಚಾಂಪಿಯನ್‌ಶಿಪ್ ಕಪ್‌ಗೆದ್ದು ತರುವಲ್ಲಿ ವಿಶೇಷ ಕೊಡುಗೆ ಇತ್ತವರು. ಇವರಲ್ಲದೆ ಅಸೋಸಿಯೇಷನ್‌ಗೆ ಧನಸಹಾಯ ಮಾಡುವುದಾಗಲೀ, ಕಲಾಕ್ಷೇತ್ರದಲ್ಲಿ ಕೊಡುಗೆ ನೀಡುವುದಾಗಲೀ ಕೆಲಸ ಕಾರ್ಯಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿಕೊಂಡು ನಡೆಸುವುದರಲ್ಲಾಗಲೀ ಸಹಾಯ ಮಾಡಿದ ಶ್ರೀಮತಿ ಸತ್ಯವತಿ ಪ್ರಸನ್ನ, ಶ್ರೀಮತಿ ಸುಶೀಲಮ್ಮ ರಾಮಣ್ಣ, ಶ್ರೀಮತಿ ಅನಸೂಯ ಅಯ್ಯಂಗಾರ್, ಡಾ.ಎಚ್.ಎಸ್.ಶ್ರೀನಿವಾಸ್, ಶ್ರೀ.ಸಿ.ಆರ್. ವೆಂಕಟೇಶ್, ಶ್ರೀ.ಕೆ.ಎನ್.ಕೀರ್ತಿ, ಶ್ರೀ.ಬಿ.ಎಂ.ಬೆಲೇರಿ, ಶ್ರೀ.ಎಚ್.ಆರ್.ವಸಂತ್, ಡಾ.ಬಿ.ಆರ್.ಮಂಜುನಾಥ್ ಮತ್ತು ಶ್ರೀ.ಕೆ.ಮಂಜುನಾಥಯ್ಯ ಮುಂತಾಗಿ ಎಲ್ಲರ ಕೊಡುಗೆಯನ್ನು ಸ್ಮರಿಸಿ ಗೌರವಿಸಲಾಯಿತು.

ಶ್ರೀಮತಿ ಶ್ಯಾಮಲಾ ರಾಧೇಶ್ ಸುಶ್ರಾವ್ಯವಾಗಿ ಎರಡು ಭಾವಗೀತೆಗಳನ್ನು ಹಾಡಿ ಎಲ್ಲರ ಮನತಣಿಸಿದರು. ಶ್ರೀ.ನಾರಾಯಣ ನವಿಲೇಕರ್ ಅವರು ನಿಸ್ಸಾರ್ ಅಹಮದ್ ಅವರ ಕಾವ್ಯವನ್ನು ವಾಚಿಸಿ ಹಿಂದೆ ನಡೆಯುತ್ತಿದ್ದ ಸಾಹಿತ್ಯ ಕಾರ್ಯಕ್ರಮದ ನೆನಪನ್ನು ಹಸಿರಾಗಿಸಿದರು. ಪುಟಾಣಿಗಳಾದ ಆರೋಹಿ ಮತ್ತು ಅನಿಕಾ ಬಹಳ ಸೊಗಸಾದ ಒಂದು ಹಳೆಯ ಕಾಲದ ಹಿಂದಿ ಸಿನೇಮಾ ಹಾಡು ಹಾಡಿ ರಂಜಿಸಿದರು. 5 ತಲೆಮಾರು ಸೇರಿದ್ದ ಈ ಹಬ್ಬ ಎಲ್ಲರ ಮನರಂಜಿಸಿತು.






**ಶ್ರೀಮತಿ ಶಾರದಮ್ಮನವರ ಪರವಾಗಿ ಅವರ ಸಹೋದರಿ ಶ್ರೀಮತಿ ಲೀಲಾ ಜೋಯಿಸ್ ಮತ್ತು ಶ್ರೀಮತಿ ಸುಶೀಲಮ್ಮ ರಾಮಣ್ಣ ನವರ ಪರವಾಗಿ ಅವರ ಪುತ್ರ ಶ್ರೀ. ರಾಧೇಶ್ ರಾಮಣ್ಣ ಹಾಗೂ ಡಾ। ಎಚ್‌ಎಸ್.ಶ್ರೀನಿವಾಸ್ ಸನ್ಮಾನ ಸ್ವೀಕರಿಸಿದರು.**





**ಶ್ರೀ. ಎಚ್.ಕೆ.ಸೀತಾರಾಮ್ ಅವರನ್ನು ಸನ್ಮಾನಿಸುತ್ತಿರುವುದು ಮತ್ತು ಶ್ರೀಮತಿ ಹರಿಣಿ ರಾಮ್‌ಪ್ರಸಾದ್ ಅವರು ಅವರ ಪತಿ ಶ್ರೀ. ರಾಮ್ ಪ್ರಸಾದ್ ರವರ ಪರವಾಗಿ ಸನ್ಮಾನ ಸ್ವೀಕರಿಸುತ್ತಿರುವುದು**

**ಸನ್ಮಾನ ಸ್ವೀಕರಿಸುತ್ತಿರುವ ಶ್ರೀ.ಸಿ.ಆರ್.ವೆಂಕಟೇಶ್ ಮತ್ತು ಶ್ರೀಮತಿ ಅನಸೂಯ ಅಯ್ಯಂಗಾರ್**




**ಶ್ರೀ. ಕೆ.ಎನ್.ಕೀರ್ತಿ ಮತ್ತು ಶ್ರೀ. ಬಿ.ಎಂ.ಬೆಲೇರಿ ಅವರು ಸನ್ಮಾನ ಸ್ವೀಕರಿಸುತ್ತಿರುವುದು**




**ಶ್ರೀ. ಚಂಪಕನಾಥ್ ಮಾತ್ತು ಶ್ರೀ.ಹೆಚ್.ಆರ್.ವಸಂತ್ ಅವರನ್ನು ಸನ್ಮಾನಿಸುತ್ತಿರುವುದು**




**ಶ್ರೀಮತಿ ಸತ್ಯವತಿ ಪ್ರಸನ್ನ ಮತ್ತು ಮೈಸೂರು ಅಸೋಸಿಯೇಷನ್ನಿನ ಸಕ್ರಿಯ ಸದಸ್ಯರಾದ ಡಾ.ಬಿ.ಆರ್.ಮಂಜುನಾಥ್ ಹಾಗೂ ಶ್ರೀ.ಮಂಜುನಾಥಯ್ಯನವರನ್ನು ಸನ್ಮಾನಿಸುತ್ತಿರುವುದು.**

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938